# ಅಪರಂಜಿ

ತಿಳಿನಗೆಯ ಕಾರಂಜಿ



ಸೆಪ್ಟೆಂಬರ್ - 2012





# ಅಪರಂಜಿ



ತಿಳಿನಗೆಯ ಕಾರಂಜಿ





ಸಂಪುಟ 29
ಸಂಚಿಕೆ – 12
ಸೆಪ್ಟೆಂಬರ್ – 2012



ಸಂಪಾದಕ ಮಂಡಳಿ

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.



**ಚಂದಾ ವಿವರ:**
ಬಿಡಿ ಪ್ರತಿ: ರೂ. 10/–
ವಾರ್ಷಿಕ ಚಂದಾ: ರೂ. 100/–
ಹತ್ತು ವರ್ಷದ ಚಂದಾ: ರೂ. 750/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ


## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ಟೀಚರ್ಸ್ ಡೇ ಪ್ರಕರಣ | **ವತ್ಸನ** | 3 |
| ನೆನಪಿನಾಳದಲ್ಲಿ ನಮ್... | **ಭುವನೇಶ್ವರಿ ಹೆಗಡೆ** | 9 |
| ಎನ್.ಆರ್.ಎಂ.!.... | **ವಾಣೀ ಸುರೇಶ್** | 13 |
| ಆಸ್ಪತ್ರೆಯಲ್ಲಿ | **ಡಾ|| ಓಂ ಪ್ರಕಾಶ್** | 18 |
| ರೋಟಿ ಕಪಡಾ ಔರ್.. | **ಆನಂದ** | 20 |
| ಅಂದು ಇಂದು | **ರಮ್ಯ** | 22 |
| ಅನಾಥೋ ದೈವ ಶಿಕ್ಷಕಃ | **ಗಣೇಶ್ ಹೆಗ್ಗಡೆ** | 25 |
| ನೃಪತುಂಗನ ಗರ್ವಭಂಗ.. | **ಎಚ್.ಪಿ. ಕೃಷ್ಣಸ್ವಾಮಿ** | 29 |
| ತರಬೇತಿ ಪಡೆದ.... | **ಭೂಮಿತಾಯಿ** | 31 |
| ಎಚ್.ಆರ್. ಮಾಸ್ತರ್.. | **ನವರತ್ನ ಲಕ್ಷ್ಮಣ್** | 34 |
| ತುಂತುರು | **ದಂನಾಉ** | 36 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 38 |


**ಮುಖಪುಟ ವ್ಯಂಗ್ಯಚಿತ್ರ – ಗುಜ್ಜಾರ್**


*ಮುದ್ರಣ :* ರವಿ ಗ್ರಾಫಿಕ್ಸ್ – *ಅಕ್ಷರ ಜೋಡಣೆ :* ಒಮೇಗಾ ಲೇಸರ್‌ಟೆಕ್
*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: aparanji@hotmail.com



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ಲೋಕಾಯುಕ್ತ ನೇಮಕ ವಿಳಂಬ ಬೇಡ – ರಾಜ್ಯಪಾಲರು

**● ಇದೇಕೋ ಗಣೇಶನ ವಿವಾಹದಂತಿದೆ !!**

★★★

ಚರಿತ್ರೆ ರಚನೆಗೆ ಕಾವ್ಯದ ನೆರವು – ಹೇಳಿಕೆ

**● ಕರ್ನಾಟಕದ ಕಾವ್ಯ ನೀಳ್ಗವನವಾಗದಿರಲಿ !!**

★★★

ಸಹಕಾರ ನೀಡಲು ಅಂಧರ ಮನವಿ – ಸುದ್ದಿ

**● ಸರ್ಕಾರ ಕಣ್ಣು ಬಿಡಲಿ !!**

★★★

ಕನ್ನಡದಲ್ಲಿ ಪ್ರಾರ್ಥನೆಗೆ ಕ್ರೈಸ್ತರ ಆಗ್ರಹ – ಪತ್ರಿಕೆ

**● ಏಸು ಕ್ರಿಸ್ತ ಎರಡೂ ಭಾಷೆಗಳಲ್ಲಿ ನಕ್ಕನಂತೆ !!**

★★★

ಮಹಿಳಾ ಠಾಣೆ: ಆರು ತಿಂಗಳುಗಳಿಂದ ದಾಖಲಿಲ್ಲ – ಸುದ್ದಿ

**● ಇನ್ನೂ ಮೂರು ತಿಂಗಳು ಕಾಯಬೇಕೇನೋ ?!**

★★★

''ನಾವು ವರ್ಷದ ಮುನ್ನೂರ ಅರವತ್ತೈದು ದಿನಗಳೂ ಸ್ನೇಹಿತರು''
– ಬಿ.ಎಸ್.ವೈ. ಮತ್ತು ಡಿ.ವಿ.

**● ಲೀಪ್ ಇಯರ್ ಬಂದಂತೆ ಕಾಣುತ್ತೆ !!**

★★★

''ಕಿಡಿ ಹಚ್ಚಿದ ಅಡ್ವಾಣಿ'' – ಶೀರ್ಷಿಕೆ

**● ಈಗ ನಾವೇನು ಮಾಡೋಣ? - ಪ್ರಕಾಶ್ !!**

★★★

ನರ್ಸಿಂಗ್ ಪರೀಕ್ಷೆಯಲ್ಲಿ ಸಾಮೂಹಿಕ ನಕಲು – ಸುದ್ದಿ

**● ಅವರಿಗೆ ನಕಲಿ ರೋಗಿಗಳೇ ಬೇಕೇನೋ ?!**

★★★



# ಟೀಚರ್ಸ್ ಡೇ ಪ್ರಕರಣ

**- ವತ್ಸನ**

**ನ**ಮ್ಮ ಕಾರು ಡ್ಯೆರಿ ಸರ್ಕಲ್ ತಲುಪಿದಾಗ ಘಂಟೆ ಹತ್ತೂವರೆ ಆಗಿತ್ತು. ಇನ್ನು ಬನ್ನೇರುಘಟ್ಟ ರಸ್ತೆಯಲ್ಲಿರೋ ಬಾಲ್ಮೊರಲ್ ಇಂಟರ್‌ನ್ಯಾಷನಲ್ ಸ್ಕೂಲ್ ಸೇರೋ ಹೊತ್ತಿಗೆ ಮಟಮಟ ಮಧ್ಯಾಹ್ನ ಆಗಿರುತ್ತೆ ಅಂದುಕೊಂಡೆ. ಕೇವಲ ಕಳೆದವಾರ ಯಾವುದೋ ಮದುವೆ ಮನೆಯಲ್ಲಿ ನನ್ನ ಹಳೆಯ ಗೆಳೆಯ ಹಾಗೂ ಸಹಪಾಠಿ ಜಯದ್ರಥ ಸಿಕ್ಕಿದಾಗ ಇಷ್ಟು ಬೇಗ ಅವನನ್ನ ಪುನಃ ಭೇಟಿಮಾಡುವ ಅಗತ್ಯ ಬೀಳುತ್ತೆ ಅಂತ ನಾನು ಖಂಡಿತ ಭಾವಿಸಿರಲಿಲ್ಲ. ವಿಧಿಯ ರೀತಿಯೇ ಹಾಗೆ. ನಿನ್ನೆ ಅವನು ನನಗೆ ಫೋನ್ ಮಾಡಿ, ''ವತ್ಸನ, ನಾಳೆ ಕಾರು ಕಳಿಸುತ್ತೇನೆ. ಖಂಡಿತ ನಿನ್ನ ಗೆಳೆಯ ಶರಲೇಖನನ್ನ ಒಪ್ಪಿಸಿ ನಮ್ಮ ಶಾಲೆಗೆ ಕರೆತರಬೇಕು. ಒಂದು ವಿಚಿತ್ರ ಪ್ರಕರಣದಲ್ಲಿ ಅವನ ಸಲಹೆ, ಸಹಾಯ ನಮಗೆ ತುರ್ತಾಗಿ ಬೇಕಾಗಿದೆ. ಬಂದನಂತರ ಎಲ್ಲಾ ತಿಳಿಸುವೆ'' ಅಂತ ಹೇಳಿ ನಮ್ಮನ್ನು ಅವನ ಶಾಲೆಗೆ ಬರಮಾಡಿಕೊಂಡಿದ್ದ. ಜಯದ್ರಥ ಈ ಬಾಲ್ಮೊರಲ್ ಶಾಲೆಯ ಪ್ರಿನ್ಸಿಪಾಲ್. ''ಇನ್ನೂ ಎಷ್ಟು ಹೊತ್ತು ಈ ಟ್ರಾಫಿಕ್ ಜಾಮ್‌ನಲ್ಲಿ ಕೊಳೆಯಬೇಕೋ?'' ಅಂತ ಶರಲೇಖ ಗೊಣಗುತ್ತಲೇ ಇದ್ದ. ಕೊನೆಗೆ ಕಾರು ಭವ್ಯವಾದ ಕಟ್ಟಡಗಳು, ಸುಂದರ ತೋಟಗಳು ಗಿಡಮರಗಳು ಇದ್ದ ಬಾಲ್ಮೊರಲ್ ಇಂಟರ್‌ನ್ಯಾಷನಲ್ ಶಾಲೆಯ ಮುಖ್ಯ ಕಟ್ಟಡದ ಪೋರ್ಟಿಕೋದಲ್ಲಿ ನಿಂತಿತು.

ಮೆಟ್ಟಿಲ ಮೇಲೆ ನಮ್ಮ ಬರುವನ್ನೇ ಕಾಯುತ್ತಿದ್ದಂತೆ ಕಾಣುತ್ತಿದ್ದ ತರುಣಿಯೊಬ್ಬಳು, ಲಗುಬಗೆಯಿಂದ ಕಾರಿನಬಳಿ ಬಂದು ಬಾಗಿಲನ್ನು ತೆರೆದಳು. ''ಬನ್ನಿ ಶರಲೇಖ ಅವರೇ, ನಮ್ಮ ಪ್ರಿನ್ಸಿಪಾಲ್ ಜಯದ್ರಥ ಕ್ಲಾಸ್ ನಡೆಸ್ತಾ ಇದಾರೆ. ಹತ್ತೇ ನಿಮಿಷದಲ್ಲಿ ಬರ್ತಾರೆ. ಅವರ ಆಫೀಸಿನಲ್ಲಿ ವಿಶ್ರಮಿಸಿಕೊಳ್ಳಲು ನಿಮಗೆ ಹೇಳಲು ನನ್ನನ್ನು ಕಳಿಸಿದ್ದಾರೆ. ನನ್ನ ಹೆಸರು ವಿದ್ಯುಲ್ಲತಾ. ದಯವಿಟ್ಟು ನನ್ನೊಡನೆ ಬನ್ನಿ'' ಎಂದು ಬಹು ಸೌಜನ್ಯದಿಂದ ಮುಂದೆ ನಡೆದಳು. ಅಲ್ಲಾ, ಶರಲೇಖನನ್ನ ಇಲ್ಲಿಗೆ ಕರೆತಂದದ್ದು ನಾನು. ಜಯದ್ರಥ ನನ್ನ ಹಳೆಯ ಗೆಳೆಯ. ಹಾಗಿರುವಾಗ, ಈ ಯುವತಿ ಶರಲೇಖನನ್ನ ಆದರದಿಂದ ಬರಮಾಡಿಕೊಂಡು ನನ್ನ ಕಡೆ ತಿರುಗಿಯೂ ನೋಡಲಿಲ್ಲವಲ್ಲಾ ಅಂತ ನನಗೆ ಸ್ವಲ್ಪ ಕಸಿವಿಸಿ ಆಯಿತು. ಅಷ್ಟರಲ್ಲಿ ಶರಲೇಖ ನನ್ನ ಕಡೆ ತಿರುಗಿ, ಪಿಸುಮಾತಿನಲ್ಲಿ ''ಈ ತರುಣೀನ ಚೆನ್ನಾಗಿ ಗಮನಿಸು.

ಜಯದ್ರಥನ ಸಮಸ್ಯೆಗೆ ಇವಳದ್ದೂ ಒಂದು ಲಿಂಕ್ ಇರಬಹುದು ಅಂತ ನನ್ನ ಸಿಕ್ತ್ ಸೆನ್ಸ್ ಹೇಳ್ತಾ ಇದೆ.'' ಅಂದ ಮೇಲೆ, ಆ ಸುಂದರ ಯುವತಿಯನ್ನು ಅಫಿಷಿಯಲ್ಲಾಗಿ ಗಮನಿಸೋ ಸಂಭ್ರಮದಲ್ಲಿ ಪಿಚ್ಚೆನ್ನಿಸಿದ್ದ ನನ್ನ ಮನಸ್ಸು ಪುನಃ ಗರಿಗೆದರಿತು.

ಬೆಂಗಳೂರಿನ ಬ್ಯಾಡ್‌ಮಿಂಟನ್ ಅಸೋಸಿಯೇಷನ್ನಿನವರಿಗೆ ಅತಿ ತುರ್ತಾಗಿ ಒಂದು ಬ್ಯಾಡ್‌ಮಿಂಟನ್ ಕೋರ್ಟಿಗೆ ಜಾಗಬೇಕಾದರೆ ಧಾರಾಳವಾಗಿ ಅವರು ಜಯದ್ರಥನ ಆಫೀಸನ್ನು ಬಳಸಬಹುದಾಗಿತ್ತು. ಅಷ್ಟು ದೊಡ್ಡದಾಗಿತ್ತು ಪ್ರಿನ್ಸಿಪಾಲರ ಆಫೀಸು. ಐದಾರು ವಿಶಾಲವಾದ ಸೋಫಾಗಳು, ಗಾಜಿನ ಟಾಪ್ ಇದ್ದ ಮೇಜು, ಹೂದಾನಿಗಳು ಎಲ್ಲ ಇದ್ದ ಒಂದು ಮೂಲೆಯಲ್ಲಿ ನಾವು ಕುಳಿತೆವು. ವಿದ್ಯುಲ್ಲತಾ ನಮ್ಮ ಆಯಾಸ ಪರಿಹಾರಕ್ಕಾಗಿ ನಿಂಬೂಪಾನಿ ತರಿಸಿದ್ದಳು. ಶರಲೇಖ ಲೋಕಾಭಿರಾಮವಾಗಿ ಮಾತನಾಡುತ್ತಾ, ''ವಿದ್ಯುಲ್ಲತಾ ಅವರೇ, ನಿಮ್ಮ ಶಾಲೆಯ ಬಗ್ಗೆ ಸ್ವಲ್ಪ ಹೇಳುತ್ತೀರಾ?'' ಅಂತ ಕೇಳಿದ. ''ನಮ್ಮ ಪ್ರಿನ್ಸಿಪಾಲ್ ನಿಮ್ಮನ್ನ ಇಲ್ಲಿಗೆ ಯಾಕೆ ಕರೆಸಿದ್ದಾರೋ ನನಗೆ ಖಂಡಿತ ತಿಳೀದು. ಅವರೇ ಇನ್ನು ಸ್ವಲ್ಪ ಹೊತ್ತಿನಲ್ಲಿ ಬಂದು ಎಲ್ಲ ವಿವರಿಸುತ್ತಾರೆ'' ಅಂತ ವಿದ್ಯುಲ್ಲತಾ ಹೇಳಿದಳು. ತರುಣಿ ಗಾಬರಿಯಾದಂತೆ ಕಂಡಿತು. ಅಷ್ಟು ಹೊತ್ತಿಗೆ ಜಯದ್ರಥನೇ ಅಲ್ಲಿಗೆ ಬಂದ. ''ಸಾವಿರ ಕ್ಷಮಾಪಣೆಗಳು ನಿಮ್ಮನ್ನ ಕಾಯಿಸಿದ್ದಕ್ಕೆ. ಶರಲೇಖ ಅವರನ್ನು ಇಲ್ಲಿಗೆ ಕರೆತಂದಿದ್ದಕ್ಕೆ ಮೊದಲು ಗೆಳೆಯ ವತ್ಸನ ನಿನಗೆ ವಂದನೆ. ನಮ್ಮ ನೆರವಿಗೆ ಬಂದದ್ದಕ್ಕೆ ಶರಲೇಖ ಅವರಿಗೆ ಆಭಾರಿ. ವಿದ್ಯುಲ್ಲತಾ, ಇವರನ್ನು ನೋಡಿಕೊಂಡದ್ದಕ್ಕೆ ಥ್ಯಾಂಕ್ಸ್. ಇನ್ನು ನೀನು ಹೋಗಬಹುದು'' ಎಂದು ಹೇಳಿ ಆಕೆ ಹೊರಟ ಮೇಲೆ ಬಾಗಿಲು ಹಾಕಿ ನಮ್ಮ ಮುಂದಿನ ಸೋಫಾದಲ್ಲಿ ಕುಳಿತ ಜಯದ್ರಥ. ತನ್ನ ಕಾರ್ಯದರ್ಶಿಣಿಗೆ ಯಾರನ್ನೂ ಒಳಕ್ಕೆ ಬಿಡಬಾರದೆಂದು ಇಂಟರ್‌ಕಾಮ್‌ನಲ್ಲಿ ಹೇಳಿ, ಜಯದ್ರಥ ತನ್ನ ಸಮಸ್ಯೆಯನ್ನು ವಿವರಿಸಲು ಶುರುಮಾಡಿದ. ''ಕಳೆದ ಹತ್ತು ವರ್ಷದ ತನ್ನ ಇರುವಿಕೆಯಲ್ಲಿ ನಮ್ಮ ಶಾಲೆ ಸುಮಾರು ಯಶಸ್ಸು, ಖ್ಯಾತಿ ಗಳಿಸಿದೆ ಎಂದರೆ ಅದು ನಾನು ಜಂಭಕ್ಕೆ ಹೇಳುವ ಮಾತಲ್ಲ. ಈ ಖ್ಯಾತಿಗೆ ಈಗ ಕುತ್ತು ಬರುವಂತಹ ಒಂದು ಪ್ರಸಂಗ ಇಲ್ಲಿ ನಡೆದಿದೆ. ನಮ್ಮ ಶಾಲೆಯ ವಿಜ್ಞಾನ ವಿಭಾಗದ ಮುಖ್ಯಸ್ಥ ಒಬ್ಬ ಪ್ರತಿಭಾವಂತ ತರುಣ. ಡಾ|| ಇಂದ್ರಜಿತ್, ನಮ್ಮ ವಿದ್ಯಾರ್ಥಿಗಳಿಗೆ ಕೆಮಿಸ್ಟ್ರಿ ಹಾಗೂ ಭೌತಶಾಸ್ತ್ರ ಹೇಳಿಕೊಡ್ತಾನೆ. ಮಕ್ಕಳಿಗೆಲ್ಲಾ ಆತನ ಪಾಠ ಅಂದರೆ ಅಚ್ಚು ಮೆಚ್ಚು. ಕಳೆದ ಮೂರುವರ್ಷಗಳಿಂದ ಆತ ಬಹು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾನೆ. ಈ ಬಾರಿ ನಮ್ಮ ಟೀಚರ್ಸ್ ಡೇ ಸಮಾರಂಭದಲ್ಲಿ ಅವನಿಗೆ ಬೆಸ್ಟ್ ಟೀಚರ್ ಅವಾರ್ಡ್ ಕೊಡುವುದರ ಬಗ್ಗೆ ಸಹಾ ನಮ್ಮ ಆಡಳಿತ ವರ್ಗ ಯೋಚಿಸುತ್ತಿದೆ. ಹೀಗಿರುವಾಗ ಕಳೆದ ಮೂರು ವಾರದಿಂದ ಕೆಮಿಸ್ಟ್ರಿ ತರಗತಿಯಲ್ಲಿ ಆತ ನಡೆಸುವ ಪ್ರಯೋಗಗಳೆಲ್ಲಾ ಏರುಪೇರಾಗಿ ಮಕ್ಕಳಿಗೆ ಕಲಿಯುವುದೇ ಕಷ್ಟವಾಗಿದೆ. ಈ ಸಮಸ್ಯೆಯ ವಿವರಗಳನ್ನು ನೀವು ಇಂದ್ರಜಿತ್‌ನಿಂದಲೇ ಪಡೆದು, ಈ ಸಮಸ್ಯೆಗೆ ಪರಿಹಾರ ಸೂಚಿಸಿದರೆ ನಮ್ಮ ಶಾಲೆಯ ಹೆಸರು ಉಳಿಯುತ್ತದೆ'' ಅಂತ ಕಳಕಳಿಯಿಂದ ಹೇಳಿ, ಜಯದ್ರಥ ಫೋನ್ ಮಾಡಿ ಇಂದ್ರಜಿತ್‌ನನ್ನು ಕರೆಸಿದ. ಇಂದ್ರಜಿತ್ ಪ್ರವೇಶಿಸಿದಾಗ ಒಂದು ಕ್ಷಣ ''ಅರೆ, ಧೋನಿ ಇಲ್ಲೆಲ್ಲಿ ಬಂದನಪ್ಪಾ'' ಅನ್ನಿಸಿತು.

ಧೋನಿಯದೇ ತದ್ವತ್ ರೂಪ. ಅದೇ ಎತ್ತರ ಮೈಕಟ್ಟು, ಧೋನಿ ಮೊದಲು ಬಿಟ್ಟಿದ್ದಂತಹ ಉದ್ದ ಕೂದಲು ಇವನ ಭುಜವನ್ನು ಸವರುತ್ತಿತ್ತು. ಅವನು ಮಾತನಾಡಲು ಶುರುಮಾಡಿದಾಗ ಧೋನಿಯಂತೆಯೇ ಇವನೂ ಸಹಾ ಮಿತಭಾಷಿ ಅನ್ನಿಸಿತು ನನಗೆ. ''ನಾನು ಅಮೆರಿಕೆಯಲ್ಲಿ ಪಿಎಚ್‌ಡಿ ಮಾಡಿ ಮಾತೃಭೂಮಿಯ ಮೇಲಣ ಪ್ರೇಮದಿಂದ ಇಲ್ಲಿಗೆ ಹಿಂತಿರುಗಿದೆ. ಈ ಶಾಲೆಯಲ್ಲಿ ನನಗೆ ಪಾಠಹೇಳುವ ಅವಕಾಶ ಬಹು ಮುಕ್ತವಾಗಿದೆ. ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಬಗ್ಗೆ ಕುತೂಹಲ ಮೂಡಿಸಲು ನನ್ನ ಶಕ್ತಿ ಮೀರಿ ಪ್ರಯತ್ನಿಸುತ್ತಿರುವೆ. ಮೂರು ವಾರದ ಹಿಂದೆ ನನ್ನ ಮೊದಲನೆಯ ಪೀರಿಯಡ್‌ನಲ್ಲಿ ಕೆಮಿಸ್ಟ್ರಿ ಪ್ರಯೋಗ ನಡೆಸಬೇಕಾಗಿತ್ತು. ಅವತ್ತು ನಮ್ಮ ಹುಡುಗರಿಗೆ ಬ್ರಿಗ್ಸ್ ರೌಷರ್ ಪ್ರಯೋಗ ತೋರಿಸಲು ಎಲ್ಲ ಅಣಿಮಾಡಿಕೊಂಡಿದ್ದೆ. ಪ್ರಯೋಗ ನಡೆಸಿದಾಗ ನಾನು ನಿರೀಕ್ಷಿಸಿದ ಬಣ್ಣ ಬದಲಾವಣೆ ಆಗಲೇ ಇಲ್ಲ. ತರಗತಿ ಮುಗಿದ ನಂತರ ಅವತ್ತೆಲ್ಲಾ ಕುಳಿತು ಎಲ್ಲವನ್ನು ಕೂಲಂಕಷವಾಗಿ ಪರೀಕ್ಷಿಸಿದಾಗ ಪ್ರಯೋಗಕ್ಕೆ ಬಳಸುವ ಗಂಧಕಾಮ್ಲವನ್ನು ಯಾರೋ ಬದಲಿಸಿ ಆ ಬಾಟಲಿನಲ್ಲಿ ನೀರು ತುಂಬಿಟ್ಟಿದ್ದು ಪತ್ತೆ ಆಯಿತು. ಏನೋ ಆಕಸ್ಮಿಕ ಅಂದುಕೊಂಡು ಸುಮ್ಮನಾದೆ. ಮುಂದಿನ ವಾರದ ತರಗತಿಯಲ್ಲಿ ಪೊಟಾಸಿಯಮ್ ಕ್ಲೋರೇಟ್ ಬಳಸಿ ನಿರಂತರ ಜ್ವಾಲೆ ಬರಿಸುವುದನ್ನು ತೋರಿಸಲು ಪ್ರಯತ್ನಿಸಿದಾಗ ಕ್ಲೋರೇಟ್ ಹರಳುಗಳನ್ನು ಉಪ್ಪಿನ ಹರಳುಗಳಿಂದ ಬದಲಿಸಿದ್ದು ಕಂಡುಬಂತು. ಯಾರೋ ನನ್ನ ಪ್ರಯೋಗಗಳನ್ನು ಕೆಡಿಸಲು ನಿರ್ಧರಿಸಿರುವುದಂತೂ ಸಾಬೀತಾಯಿತು. ಯಾರು ಅಂತ ತಿಳಿಯುತ್ತಿಲ್ಲ. ಅಪರಾಧಿಯನ್ನು ಕಂಡುಹಿಡಿಯದಿದ್ದರೆ ಆ ಸುದ್ದಿ ವಿದ್ಯಾರ್ಥಿಗಳ ಮನೆಯವರೆಗೂ ಮುಟ್ಟಿ ನಮ್ಮ ಶಾಲೆಯ ಹೆಸರಿಗೆ ಭಂಗ ಬರುವ ಅಪಾಯ ಇದೆ. ಏನು ಮಾಡುವುದು ತಿಳಿಯುತ್ತಿಲ್ಲ'' ಎಂದು ಇಂದ್ರಜಿತ್ ಬಹು ಸರಳವಾಗಿ ತನ್ನ ಸಮಸ್ಯೆಯನ್ನು ನಮ್ಮ ಮುಂದಿಟ್ಟ. ''ನಿಮ್ಮ ಪ್ರಯೋಗಶಾಲೆಯಲ್ಲಿನ ಪದಾರ್ಥಗಳ ಮೇಲೆ ಕೈಯ್ಯಾಡಿಸಲು ಯಾರ್‍ಯಾರಿಗೆಲ್ಲಾ ಅವಕಾಶವಿದೆ?'' ಶರಲೇಖ ಕೇಳಿದ. ''ಮೊದಲಿಗೆ ನನ್ನ ಹೊಸ ಲ್ಯಾಬ್ ಅಸಿಸ್ಟೆಂಟ್ ವಿದ್ಯುಲ್ಲತಾ. ಮಣಿಪಾಲದಲ್ಲಿ ಎಂ.ಎಸ್.ಸಿ. ಮಾಡಿ ಇಲ್ಲಿ ನನ್ನ ಸಹಾಯಕ್ಕೆ ಬಂದಿದ್ದಾಳೆ. ಅವಳೇ ಎಲ್ಲ ಪ್ರಯೋಗಗಳನ್ನೂ ಹಿಂದಿನ ದಿನ ಸಿದ್ಧಪಡಿಸುವುದು. ಮತ್ತೊಬ್ಬನೆಂದರೆ ಲ್ಯಾಬ್ ಪರಿಚಾರಕ ಸಿದ್ದಪ್ಪ. ಅವನು ಶಾಲೆಯ ಪ್ರಾರಂಭದಿಂದಲೂ ಇಲ್ಲಿದ್ದಾನೆ. ಬಹು ನಂಬಿಕಸ್ಥ. ನಮ್ಮ ಪ್ರಯೋಗಶಾಲೆಗೆ ಅಂಟಿದಂತೆ ಬಯಾಲಜಿ ಪ್ರಯೋಗ ಕೊಠಡಿ ಇದೆ. ಎರಡು ಪ್ರಯೋಗಶಾಲೆಗಳನ್ನೂ ಸಂಪರ್ಕಿಸುವ ಒಂದು ಬಾಗಿಲಿದೆ. ಅದನ್ನು ಸದಾ ಮುಚ್ಚಿ ಬೀಗ ಹಾಕಿರುತ್ತೇವೆ. ಇನ್ನು ಯಾರಿಗೂ ಈ ಪದಾರ್ಥಗಳನ್ನು ಮುಟ್ಟಲು ಆಸ್ಪದವಿಲ್ಲ.'' ವಿದ್ಯುಲ್ಲತಾ ಕೆಲಸಕ್ಕೆ ಸೇರಿ ಎಷ್ಟು ಕಾಲವಾಗಿದೆ? ''ನಾಲ್ಕು ವಾರಗಳು.'' ಬಯಾಲಜಿ ಲ್ಯಾಬಿನಲ್ಲಿ ಯಾರ್‍ಯಾರು ಕೆಲಸ ಮಾಡುತ್ತಾರೆ? ''ಮಿಸ್ ದೇವಯಾನಿ ಬಯಾಲಜಿ ಲೆಕ್ಚರರ್. ನಮ್ಮ ಸಹಾಯಕ ಸಿದ್ದಪ್ಪನೇ ಅವರಿಗೂ ಸಹಾಯ ಮಾಡುತ್ತಾನೆ.'' ಶರಲೇಖ ಒಂದು ಹತ್ತು ನಿಮಿಷ ಆಲೋಚಿಸಿದ. ಅನಂತರ ''ನೋಡಿ ಜಯದ್ರಥ, ಇದು ಬಹು ಸೂಕ್ಷ್ಮವಾದ ವಿಷಯ. ಅವಕಾಶ ಇದ್ದವರನ್ನೆಲ್ಲಾ ಸಂಶಯದಿಂದ ನೋಡಿ ಅವರನ್ನು ಪ್ರಶ್ನಿಸಲು ಪ್ರಾರಂಭಿಸಿದರೆ,

ಅವರುಗಳು ಮುನಿಸಿಕೊಂಡು ಕೆಲಸವನ್ನೇ ಬಿಡಬಹುದು. ಈಗಿನ ದಿನಗಳಲ್ಲಿ ಟೀಚರುಗಳಿಗೆ ವಿಪರೀತ ಡಿಮ್ಯಾಂಡ್ ಇರುವುದು ನನಗೆ ತಿಳಿಯದ ವಿಷಯವೇ. ಅದಕ್ಕೇ ಅಪರಾಧಿಯನ್ನು ಅಪರಾಧಮಾಡುತ್ತಿರುವಾಗಲೇ ಹಿಡಿದರೆ ನಮ್ಮ ಪತ್ತೇದಾರಿ ಕೆಲಸ ಸುಲಭವಾಗುತ್ತದೆ. ಈಗ ಇಂದ್ರಜಿತ್ ನನ್ನನ್ನು ಲ್ಯಾಬ್ ತೋರಿಸಲು ಕರೆದುಕೊಂಡು ಹೋಗಲಿ. ಎಲ್ಲರೂ ಗುಂಪಿನಲ್ಲಿ ಹೋದರೆ ಅಪರಾಧಿಗೆ ಸುಳಿವು ಸಿಕ್ಕಬಹುದು. ಅದಕ್ಕೇ ನಾನೊಬ್ಬನೇ ಹೋಗಿ ಸ್ಥಳ ಪರೀಕ್ಷೆ ಮಾಡುತ್ತೇನೆ. ಸಂಜೆಯ ಹೊತ್ತಿಗೆ ಅಪರಾಧಿಯನ್ನು ಹಿಡಿಯಲು ಏನಾದರೊಂದು ವ್ಯವಸ್ಥೆ ಮಾಡುವ.'' ಅಂದಹಾಗೇ ನಿಮ್ಮ ಮುಂದಿನ ಪ್ರಯೋಗ ತರಗತಿ ಯಾವಾಗ? ''ನಾಳೆ ಬೆಳಗ್ಗೆ ಹತ್ತು ಘಂಟೆಗೆ. ಹೈಡ್ರೋಜನ್ ಪೆರಾಕ್ಸೈಡ್ ಮತ್ತು ಪೊಟಾಸಿಯಮ್ ಐಯೊಡೈಡ್ ಬಳಸಿ ಆನೆ ಗಾತ್ರದ ಟೂತ್ ಪೇಸ್ಟನ್ನು ಮಕ್ಕಳಿಗೆ ತೋರಿಸೋಣ ಅಂದುಕೊಂಡಿದ್ದೇನೆ. ಯಶಸ್ವಿಯಾದರೆ ಮಕ್ಕಳಿಗೆ ನಿಜಕ್ಕೂ ಬಹು ಚೆನ್ನಾಗಿರುತ್ತದೆ'' ಅಂದ ಇಂದ್ರಜಿತ್. ''ಯಶಸ್ವಿಯಾದರೆ ಅಂತೀರಲ್ಲಾ, ನಿಮ್ಮ ಪ್ರಯೋಗದ ಬಗ್ಗೆ ನಿಮಗೇ ಸಂಶಯವಿದೆಯೇ?'' ಅಂತ ಶರಲೇಖ ನಗುತ್ತಾ ಕೇಳಿದ. ''ಖಂಡಿತಾ ಇಲ್ಲ, ಆದರೆ ನೀವು ಅಪರಾಧಿಯನ್ನು ಪತ್ತೆ ಹಚ್ಚಿ ಅವನ ಅಪರಾಧವನ್ನು ನಿಲ್ಲಿಸದಿದ್ದರೆ ನಾಳೆಯೂ ಸಹಾ ನಾನು ಸೋಲನ್ನು ಕಾಣಬೇಕಾದೀತು'' ಅಂತ ಅಷ್ಟೇ ದಿಟ್ಟತನದಿಂದ ಇಂದ್ರಜಿತ್ ಉತ್ತರಿಸಿದ. ಶರಲೇಖ, ಇಂದ್ರಜಿತ್‌ನೊಂದಿಗೆ ಆಕಡೆ ಹೊರಟ. ಜಯದ್ರಥ ನನಗೆ ಶಾಲೆಯನ್ನು ತೋರಿಸಲು ಕರೆದುಕೊಂಡು ಹೋದ. ನನಗೋ ಕೆಮಿಸ್ಟ್ರಿ ಪ್ರಯೋಗ ಶಾಲೆಯನ್ನು ನೋಡುವ ಕುತೂಹಲ. ಶರಲೇಖನ ಮಾಹಿತಿ ಸಂಗ್ರಹಣೆ ಆದನಂತರ ಅಲ್ಲಿಗೆ ಹೋಗೋಣವೆಂದು ಹೇಳಿ, ಜಯದ್ರಥ ನನ್ನನ್ನು ಮಿಕ್ಕ ಇಲಾಖೆಗಳನ್ನು ತೋರಿಸಿದ ನಂತರ ನಾವು ಬಯಾಲಜಿ ಲ್ಯಾಬ್ ಕಡೆ ಕಾಲುಹಾಕಿದೆವು. ಬಯಾಲಜಿ ಲೆಕ್ಚರರ್ ಮಿಸ್ ದೇವಯಾನಿ ನನ್ನನ್ನು ಬಹು ಆದರದಿಂದ ಬರಮಾಡಿಕೊಂಡರು. ಯಾಕೆ ಈ ಶಾಲೆಯಲ್ಲಿ ಕೇವಲ ಮಿಸ್ ಇಂಡಿಯಾ ರನ್ನರ್ ಅಪ್ ಆಗಿರುವವರನ್ನೇ ಲೆಕ್ಚರರ್ ಕೆಲಸಕ್ಕೆ ಆಯ್ಕೆ ಮಾಡುತ್ತಾರೆ ಅಂತ ಜಯದ್ರಥನನ್ನ ಕೇಳುವ ಆಶೆ ನನಗೆ. ಆದರೂ ಮಿಸ್ ದೇವಯಾನಿ ಮುಂದೆ ಆ ಪ್ರಶ್ನೆ ಕೇಳಲು ಸಂಕೋಚವಾಯಿತು. ಅಷ್ಟು ರೂಪಸಿ ಆಕೆ. ಲ್ಯಾಬಿನ ವಿಷಯವನ್ನೆಲ್ಲಾ ವಿವರಿಸಿದ ನಂತರ ಆಕೆ ಜಯದ್ರಥನ ಕಡೆ ತಿರುಗಿ ''ಪಾಪ ಇಂದ್ರಜಿತ್ ಪೆಚ್ಚಾಗಿಬಿಟ್ಟಿದ್ದಾನೆ ಸಾರ್ ಹೇಗಾದರೂ ಮಾಡಿ ಅವನ ಸಮಸ್ಯೆ ಬಗೆಹರಿಸಿ'' ಅಂತ ಅಹವಾಲು ಹಾಕಿದಳು. ಶಾಲೆ ನೋಡಿದ್ದು ಮುಗಿದ ಮೇಲೆ ಜಯದ್ರಥ ನನ್ನನ್ನು ಅವರ ಕಾರಿನಲ್ಲೇ ಮನೆಗೆ ಕಳುಹಿಸಿದ. ಶರಲೇಖನ ಕೆಲಸ ಇನ್ನೂ ಮುಗಿದಿರಲಿಲ್ಲ. ಸಂಜೆ ನನಗೆ ಶರಲೇಖನಿಂದ ಫೋನ್ ಕಾಲ್ ''ಕಾರ್ ಕಳಿಸುತ್ತೇನೆ, ಶಾಲೆಗೆ ಬಾ ಟ್ರಾಪ್ ಸಜ್ಜಾಗಿದೆ'' ಅಂತ ಸಂಕ್ಷಿಪ್ತವಾಗಿ ಹೇಳಿ ಫೋನ್ ಇಟ್ಟ. ಅಷ್ಟು ಹೊತ್ತಿಗೆ ಕಾರ್ ಸಹಾ ಬಂದಿದ್ದರಿಂದ ನಾನು ತಡಮಾಡದೇ ಶಾಲೆಯತ್ತ ಹೊರಟೆ. ಕಾರು ಶಾಲೆಯ ಹಿಂದಿನ ಗೇಟಿನ ಹತ್ತಿರ ನಿಂತಿತು. ಶರಲೇಖ ಮತ್ತು ಜಯದ್ರಥ ಬಂದು ಕಾರನ್ನು ಹತ್ತಿದರು. ಪ್ರಯೋಗಶಾಲೆಯ ಬಳಿನಮ್ಮನ್ನು ಇಳಿಸಿ ಕಾರು ಹೊರಟುಹೋಯಿತು. ನಾವು ಮೂವರೂ ಬೇಗನೆ ಪ್ರಯೋಗಶಾಲೆಯ ತೆರೆದ ಬಾಗಿಲನ್ನು ಹೊಕ್ಕು ಬಾಗಿಲು

ಹಾಕಿಕೊಂಡೆವು. ಆ ಕೊಠಡಿಯ ಬಲಭಾಗದಲ್ಲಿದ್ದ ಉದ್ದನೆಯ ಮೇಜಿನ ಹಿಂದೆ ಒಂದು ಕಾರ್ಪೆಟ್ ಹಾಸಿತ್ತು. ಮೂರು ಜನ ಚಕ್ಕಳಮಟ್ಟಿಗೆ ಹಾಕಿ ಕೂರಬಹುದಾದಷ್ಟು ಜಾಗ. ನಾವು ಮೂವರೂ ಕೂತೆವು. ಮಾತುಕತೆ ಸಂಪೂರ್ಣವಾಗಿ ನಿಷಿದ್ಧ ಅಂತ ಶರಲೇಖ ಒಂದು ಚೀಟಿ ಬರೆದು ತೋರಿಸಿದ. ಕಿಟಕಿಗಳನ್ನು ಮುಚಿದ್ದ ಆ ಲ್ಯಾಬಿನಲ್ಲಿ ಆರೂವರೆಗೆಲ್ಲಾ ಕತ್ತಲು ಆವರಿಸಿತು. ಎಲ್ಲೆಡೆ ನೀರವತೆ. ಏಳು ಘಂಟೆಯ ಹೊತ್ತಿಗೆ ಏನೋ ಸದ್ದಾದಂತಾಯಿತು. ನೋಡುತ್ತಿದ್ದಂತೆ ಬಯಾಲಜಿ ಲ್ಯಾಬಿನ ಕಡೆಗಿದ್ದ ಬಾಗಿಲನ್ನು ಯಾರೋ ತೆಗೆದರು. ತೆರೆದ ಬಾಗಿಲಿನಿಂದ ಹೊರಹೊಮ್ಮಿದ ಬೆಳಕಿನ ಹೊನಲಿನ ಹಿನ್ನೆಲೆಯಲ್ಲಿ ಮುಸುಕು ಹಾಕಿದ ವ್ಯಕ್ತಿಯೊಂದರ ಸಿಲೆಟ್ ಕಂಡಿತು. ಮುಸುಕಿನ ವ್ಯಕ್ತಿ ಕಾಲಹರಣ ಮಾಡಲಿಲ್ಲ. ಸರಸರನೆ ಮೇಜಿನ ಬಳಿಹೋಗಿ ಅಲ್ಲಿದ್ದ ಬಲ್ಬ್ ಹಚ್ಚಿ, ಬಾಟಲುಗಳನ್ನು ಅತ್ತಿತ್ತ ಸರಿಸಿ ಕಾರ್ಯೋನ್ಮುಖವಾಯಿತು. ಶರಲೇಖ ಥಂಗನೆ ನೆಗೆದು ವ್ಯಕ್ತಿಯ ಬಳಿ ಹೋಗಿ ಮುಸುಕನ್ನು ಎಳೆದ. ದೇವಯಾನಿ! ನಾವು ಮೂರು ಜನರನ್ನೂ ನೋಡಿ ದೇವಯಾನಿ ಒಂದು ಕ್ಷಣ ವಿಚಲಿತಳಾದಂತೆ ತೋರಿತು. ಮರುಕ್ಷಣ ಆಕೆ ಸಮಾಧಾನದಿಂದ ನಮ್ಮತ್ತ ನೋಡಿದಳು. ಮುಖದಲ್ಲಿ ಮಂದಹಾಸ ಇತ್ತು. ''ಪ್ರಿನ್ಸಿಪಾಲ್ ಸರ್, ಈಗಲೇ ನಾನು ರಾಜೀನಾಮೆ ನೀಡುತ್ತಿದ್ದೇನೆ. ಇದಾದನಂತರ ಖಂಡಿತ ನಿಮಗೆ ನನ್ನ ಸರ್ವಿಸ್ ಬೇಡ ಅಂತ ಭಾವಿಸುವೆ'' ಅಂತ ದಿಟ್ಟತನದಿಂದ ಹೇಳಿದಳು. ''ದೇವಯಾನಿ, ಏಕೆ ಹೀಗೆ ಮಾಡಿದೆ?'' ಜಯದ್ರಥನ ಪ್ರಶ್ನೆಯಲ್ಲಿದ್ದ ನೋವಿನ ಛಾಯೆಯನ್ನು ಗುರುತಿಸಿದೆ. ಹೇಳುತ್ತೇನೆ. ನಿಮಗೆ ಎಷ್ಟು ಅರ್ಥವಾಗಬಹುದೋ ತಿಳಿಯದು. ಆದರೂ ಹೇಳುತ್ತೇನೆ. ''I am madly in love with Indru. ಅವನು ನನ್ನ ಬಗ್ಗೆ ಹಲವೊಮ್ಮೆ ವಾತ್ಸಲ್ಯ ತೋರಿಸಿದರೂ ಅದು ಭ್ರಾತೃ ವಾತ್ಸಲ್ಯದಂತೆ ಕಾಣುತ್ತೆ ನನಗೆ. ಅಷ್ಟರಲ್ಲಿ ನನ್ನ ಮನಶ್ಶಾಂತಿ ಕದಡಲು ಈ ವಿದ್ಯುಲ್ಲತೆ ಬಂದು ಇಲ್ಲಿ ಸೇರಿಕೊಂಡುಬಿಟ್ಟಿದ್ದಾಳೆ. ನಾನು ಬಯಾಲಜಿ ಲ್ಯಾಬಿನಲ್ಲಿ ಕುಳಿತಿದ್ದಾಗ ಇಂದ್ರು ಮಾಡುವ ಜೋಕಿಗೆ ಈ ವಿದ್ಯುಲ್ಲತೆ ಕಿಲಕಿಲ ನಗುವುದು ಕೇಳಿಸಿದಾಗಲೆಲ್ಲಾ ನನಗೆ ಷಾಕ್ ಹೊಡೆದಂತೆ ಆಗುತ್ತೆ. ಹೇಗಾದರೂ ಮಾಡಿ ಇವಳ ಮೇಲೆ ಸಂಶಯ ಬರುವಂತೆ ಮಾಡಿ ಇವಳನ್ನು ಕೆಲಸದಿಂದ ಓಡಿಸುವುದು ನನ್ನ ಜೀವನದ ಗುರಿ ಆಯಿತು. ಶರಲೇಖರನ್ನು ಕರೆಯದಿದ್ದರೆ ನನಗೆ ನನ್ನ ಕಾರ್ಯದಲ್ಲಿ ಗೆಲುವೂ ದೊರಕುತ್ತಿತ್ತು'' ಅಂತ ದೇವಯಾನಿ ಹೇಳಿದಳು. ಜಯದ್ರಥ ಬಹು ಸಮಾಧಾನದಿಂದ ''ದೇವಯಾನಿ ನಿನ್ನ ರಾಜೀನಾಮೆ ಮಾತು ಈಗ ಬೇಡ. ನಾಳೆ ಬೆಳಗ್ಗೆ ಹತ್ತು ಘಂಟೆಗೆ ನನ್ನ ಆಫೀಸಿಗೆ ಬಂದು ನನ್ನನ್ನು ಕಾಣು. ಆಗ ನಿರ್ಧರಿಸೋಣ. To err is human. ಈಗ ಮನೆಗೆ ಹೋಗು'' ಅಂತ ಹೇಳಿ ಅವಳನ್ನು ಸಾಗಹಾಕಿದ. ಅನಂತರ ಶರಲೇಖನನ್ನು ಕುರಿತು, ''ನಮ್ಮ ಸಮಸ್ಯೆಯನ್ನು ಪರಿಹರಿಸಿದ್ದಕ್ಕೆ ಬಹಳ ಧನ್ಯವಾದಗಳು. ನಿಮ್ಮನ್ನು ಮನೆಗೆ ಕರೆದೊಯ್ಯಲು ಕಾರು ಸಿದ್ಧವಾಗಿದೆ. ಮುಂದಿನ ನಿರ್ಧಾರವೆಲ್ಲಾ ಮ್ಯಾನೇಜೀರಿಯಲ್ ನಿರ್ಧಾರಗಳು. ನಾಳೆ ಬೆಳಗ್ಗೆ ನೀವಿಬ್ಬರೂ ನನ್ನ ಆಫೀಸಿಗೆ ಬಂದರೆ ಈ ಪ್ರಸಂಗದ ಮುಕ್ತಾಯವನ್ನು ನೋಡಬಹುದು'' ಎಂದ. ನಾವು ಮನೆಗೆ ಹೊರಟೆವು. ಮಾರನೆಯ ಬೆಳಗ್ಗೆ ನಾವು ಜಯದ್ರಥನ ಆಫೀಸಿನಲ್ಲಿ ಕುಳಿತಿದ್ದಾಗಲೇ

ಇಂದ್ರಜಿತ್ ಅಲ್ಲಿಗೆ ಬಂದ. ಜಯದ್ರಥ ಅವನಿಗೆ ಹಿಂದಿನ ಸಂಜೆಯ ವಿದ್ಯಮಾನಗಳನ್ನೆಲ್ಲಾ ಚಾಚೂ ತಪ್ಪದೇ ತಿಳಿಸಿ, ದೇವಯಾನಿಯ ರಾಜೀನಾಮೆಯ ಬಗ್ಗೆ ಇಂದ್ರಜಿತ್‌ನ ಅಭಿಪ್ರಾಯವನ್ನು ಕೇಳಿದರು. ಇಂದ್ರಜಿತ್ (ಅಥವಾ ದೇವಯಾನಿಯ ಭಾಷೆಯಲ್ಲಿ ಇಂದ್ರು) ''ಸರ್ ಇದು ತೀರಾ ಪರ್ಸನಲ್ ವಿಷಯ ಆಯಿತು. ಆದರೂ ನೀವು ನನ್ನ ತಂದೆಯ ಸಮಾನ. ದೇವಯಾನಿಗೆ ನನ್ನ ಮೇಲೆ ಮಧುರ ಭಾವನೆಗಳಿರುವುದಾದರೆ ಅಷ್ಟೇ ತೀವ್ರತೆಯಿಂದ ನಾನೂ ಅವಳಿಗೆ ಪ್ರತಿಸ್ಪಂದಿಸುವೆ. ವಿದ್ಯುಲ್ಲತಾ ಜೊತೆಗೆ ನನ್ನ ವ್ಯವಹಾರ ಕೇವಲ ಲ್ಯಾಬ್ ಕೆಲಸಕ್ಕೆ ಸಂಬಂಧಿಸಿದ ವೃತ್ತಿಪರ ವ್ಯವಹಾರ. ದೇವಯಾನಿ ರಾಜೀನಾಮೆ ಕೊಡುವ ಪ್ರಶ್ನೆಯೇ ಉದ್ಭವಿಸದು. ಆದರೆ ದೇವಯಾನಿಯನ್ನು ಸಿಲುಕಿಸದೇ ಈ ಪ್ರಸಂಗಕ್ಕೆ ಮುಕ್ತಾಯ ಹಾಡುವುದಕ್ಕೆ ಏನಾದರೂ ಮಾಡಲಾಗದೇ?'' ಎಂದು ಕಾತರದಿಂದ ಕೇಳಿದ. ಜಯದ್ರಥ ಮುಗುಳುನಗೆ ನಕ್ಕು ಒಂದು ಹೇಳಿಕೆಯನ್ನು ಓದಿದ. ''ಹಲವು ದಿನಗಳಿಂದ ಅಪರಿಚಿತನೊಬ್ಬ ನಮ್ಮ ಪ್ರಯೋಗ ಶಾಲೆಗೆ ನುಗ್ಗಿ ಹಾವಳಿ ಮಾಡುತ್ತಿದ್ದ. ಈ ಬಗ್ಗೆ ಖ್ಯಾತ ಪತ್ತೇದಾರ ಶರಲೇಖ ಅವರ ಸಹಾಯವನ್ನು ಪಡೆದು ಅವನನ್ನು ನಿನ್ನೆ ಸಂಜೆ ಹಿಡಿದು ಪೋಲೀಸ್ ಸುಪರ್ದಿಗೆ ಒಪ್ಪಿಸಲಾಗಿದೆ ಎಂದು ತಿಳಿಸಲು ಹರ್ಷಿಸುತ್ತೇವೆ.'' ಅನಂತರ ಜಯದ್ರಥ ''ಈ ಹೇಳಿಕೆಯನ್ನು ಶಾಲೆಯ ನೋಟೀಸ್ ಬೋರ್ಡಿನಲ್ಲಿ ಹಾಕಿ ಈ ಪ್ರಸಂಗಕ್ಕೆ ಮಂಗಳ ಹಾಡುತ್ತೇನೆ'' ಎಂದು ನಗುತ್ತಾ ಹೇಳಿದ.

✵

---

## ಗುರು - ಶಿಷ್ಯ

ತ.ಸು. ಶಾಮರಾಯರು ಬಂಗಾರಪ್ಪನವರಿಗೆ ಗುರುಗಳು. ಒಂದು ದಿನ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ತಮ್ಮ ಗುರುಗಳನ್ನು ನೋಡಲು ಹೋದಾಗ ಶಾಮರಾಯರು ಎದ್ದು ನಿಂತು ಕುರ್ಚಿ ತೋರಿಸಿ ಕೂತ್ಕೊಳ್ಳಿ ಸಾರ್ ಅಂದದ್ದಕ್ಕೆ ಬಂಗಾರಪ್ಪನವರು ಸರ್ ನೀವು ನನಗೆ ಕೂತ್ಕೊ ಬಂಗಾರಪ್ಪ ಅನ್ನಿ ಸಾರ್. ನಾನು ನಿಮ್ಮ ಶಿಷ್ಯ, ಈ ಪೀಠ ತಮ್ಮದು ತಾವು ಇದರಲ್ಲಿ ಕೂತ್ಕೊಬೇಕು ಅಂದರು. ನಂತರ ಶಾಮರಾಯರು ನನ್ನ ಶಿಷ್ಯರು ನಾನಾ ಸ್ಥಾನಗಳಲ್ಲಿದ್ದಾರೆ. ಆದರೆ ಮುಖ್ಯಮಂತ್ರಿ ಸ್ಥಾನದಲ್ಲಿರೋನು ನೀನೇ ಮೊದಲಿಗ ಅಂದರು. ಅದಕ್ಕೆ ಬಂಗಾರಪ್ಪನವರು ಮುಖ್ಯಮಂತ್ರಿ ಸ್ಥಾನ ಇವತ್ತು ಇರುತ್ತೆ ನಾಳೆ ಹೋಗುತ್ತೆ ಆದರೆ ಗುರು ಶಿಷ್ಯ ಬಾಂಧವ್ಯ ನಿರಂತರ ಅಲ್ವೇ ಸಾರ್ ಅಂದರು.

ಶಿಕ್ಷಕರ ದಿನಾಚರಣೆ ವಿಶೇಷ

# ನೆನಪಿನಾಳದಲ್ಲಿ ನಮ್ ಮೇಷ್ಟ್ರು..

- ಭುವನೇಶ್ವರಿ ಹೆಗಡೆ

ನನ್ನ ಪ್ರೀತಿಯ ಮಾಷ್ಟ್ರಿಗೆ.. ಶಿಷ್ಯೆಯ ನಮಸ್ಕಾರ.

ಹೇಗಿದ್ದೀರಿ, ಸರ್? (ಎಲ್ಲಿದ್ದೀರಿ?) ಎಲ್ಲೇ ಇದ್ದರೂ ನನ್ನಂಥ ಶಿಷ್ಯ ಸಮೂಹದ ಹೃದಯಗಳಲ್ಲಿ ಚಿನ್ನದ ಫ್ರೇಮಿನಲ್ಲಿ ಕಟ್ಟಿಸಲ್ಪಟ್ಟ ಫೋಟೋದಂತೆ ನಿಮ್ಮ ಚಿತ್ರ ಭದ್ರವಾಗಿಯೇ ಇದೆ. ಆಲ್ಬಮ್ಮಿನಿಂದ ನಿಮ್ಮ ಫೋಟೋ, ಪೇಜು ತೆರೆದರೆ ಜತೆಯಲ್ಲಿ ನಮ್ಮ ಹಳ್ಳಿ, ಶಾಲೆ, ಹೊಳೆ, ಕಾಲುದಾರಿ,ಸಂಕ... ಎಲ್ಲವೂ ತಾಜಾ ನೆನಪುಗಳಾಗಿ ತೆರೆದುಕೊಳ್ಳುತ್ತವೆ. ಈಗಲೂ ಅಕ್ಷರ ಸೊಟ್ಟಾದಾಗ ಒತ್ತು ಅರ್ಕಗಳು ಕ್ರಮ ತಪ್ಪಿದಾಗ ನೀವು ನಿಮ್ಮ ಚಡಿ.. ಎದ್ದು ಬಂದಂತಾಗಿ ತಿದ್ದಿದ ಮೇಲೇ ತಲೆ ಎತ್ತುವಂತಾಗುತ್ತದೆ.

ನೀವು ಹೇಳಿದ್ರಲ್ಲ ಗುರುಗಳೇ.. ನೀವಿನ್ನೂ ತುಂಬಾ ದೂರ ನಡೆಯಲಿಕ್ಕುಂಟು. ಹೆಜ್ಜೆ ದೃಢಪಡಿಸಿಕೊಳ್ಳಿ, ನೋಟ ನೇರವಾಗಿಸಿಕೊಳ್ಳಿ, ಭಂಗಿ ವಾಲದಿರಲಿ, ತುಂಬಿಕೊಳ್ಳುತ್ತಾ... ಹೀರಿಕೊಳ್ಳುತ್ತಾ.. ಬೆಳೆಯುತ್ತಾ.. ಹೂಂ..ಹೂಂ.. ಸಾಗಿರಿ. ಆಗ ಅರ್ಥವಾಗುತ್ತಿರಲಿಲ್ಲ, ಮಾಷ್ಟ್ರೇ.. ಈಗ ಅರ್ಥವಾಗುತ್ತಿದೆ. ನೂರು ಡೌಟ್ಸ್ ಬರುತ್ತಿರುತ್ತದೆ. ಯಾರಲ್ಲಿ ಕೇಳುವುದು? ನೀವು ಎಲ್ಲಿ ಅದೆಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದೀರೋ.. ಈಗಾದರೂ ನಿಮ್ಮ ಮನೆ ಮಡದಿ ಮಕ್ಕಳು ಎಂದು ನಿಮ್ಮನ್ನು ನಂಬಿದವರ ಜತೆಗಿದ್ದೀರಿ ತಾನೇ? ನಾವೆಲ್ಲ ತುಂಬ ತುಂಬ ದೂರ ಬಂದಿದ್ದೇವೆ ಮಾಷ್ಟ್ರೇ..

**ಮಕ್ಕಳಿಗಷ್ಟೇ ಅಲ್ಲದೇ ಹಿರಿಯರಿಗೂ ಮಾಷ್ಟ್ರಾಗಿದ್ದವರು ಇವರು....**

ಮೊನ್ನೆ ಮೊನ್ನೆ ಪಾಶ್ಚಾತ್ಯ ಶಂಖವೊಂದರಿಂದ ಬಂದ ತೀರ್ಥದ ಪ್ರಕಾರ ಮಕ್ಕಳಿಗೆ ನಾಲ್ಕನೇ ತರಗತಿಯವರೆಗೆ ಏನನ್ನೂ ಕಲಿಸದೇ ಕೇವಲ ಅಕ್ಷರಾಭ್ಯಾಸ ಮಾಡಿಸಿ ಅವರನ್ನು ಅವರ ಪಾಡಿಗೆ ನಿಸರ್ಗದ ಜೊತೆ ಬಿಟ್ಟು ಬಿಡಬೇಕಂತೆ. ಕಂದಮ್ಮಗಳ ಪಾಲಿಗೆ ಎಂತಹ ಸಿಹಿ ಕಲ್ಪನೆ ಅಲ್ಲವೆ?

ಆದರೆ ಈ ಪರಿಕಲ್ಪನೆಯನ್ನು ಮೂವತ್ತೈದು ವರ್ಷಗಳ ಹಿಂದೆ ನಮ್ಮ ಹಳ್ಳಿಯ ಏಕೋಪಾಧ್ಯಾಯ ಶಾಲೆಯಲ್ಲಿ ಆಗಲೇ ಜಾರಿಯಲ್ಲಿಟ್ಟಿದ್ದೇವಲ್ಲ ಸರ್? ಏಳು ಕ್ಲಾಸಿಗೂ ಸೇರಿ ಒಬ್ಬರೇ ಮಾಷ್ಟ್ರಾದ್ದರಿಂದ ಏಕೋ ಉಪಾಧ್ಯಾಯನಾದೆ ಎಂಬಂತಿದ್ದ ನಮ್ಮ ಹಳ್ಳಿಯ ಗುಡ್ಡದ ಮೇಲಿನ ಶಾಲೆಯಲ್ಲಿ ನಾವು ನಾಲ್ಕನೇ ತರಗತಿಯವರೆಗೆ ಅದೇನು ಅಕ್ಷರ ಕಲಿತೆವೋ.. ಮರ ಹತ್ತಿ ಇಳಿದು ಪೇರಲ ಹಣ್ಣು ತಿನ್ನುವುದು ಬಿಟ್ಟು.. ಶಾಲಾ ಮಕ್ಕಳಿಗಾಗಿಯೇ ಆಗ ಈ ಪರಿ ಹಣ್ಣೂ ಬಿಡುತ್ತಿದ್ದವೋ ಏನೋ..!! ಮರದ ಮೇಲಿನ ಮಂಗಗಳು ನಾವಾಗ.. ಮಂಗನಿಂದ ಮಾನವನನ್ನಾಗಿಸಿದ ನೀವು ಮಾತ್ರ ಆ ಮಂಗಗಳನ್ನು ಎಷ್ಟು ಪ್ರೀತಿ ಮಾಡುತ್ತಿದ್ದೀರಿ? ಮರೆಯುವುದು ಹೇಗೆ?

ನಮ್ಮ ಕಾಡಲೆತ್ತ, ಕಾಡು ಪ್ರಾಣಿಗಳ ವೀಕ್ಷಣೆ ಯಾವುದಕ್ಕೂ ಅಡ್ಡಿ ಮಾಡದ ದೇವರಂಥ ಶಾಂತಪ್ಪ ಮಾಷ್ಟ್ರು ಹೋಗಿ ಬದಲಿಗೆ ಬಂದವರು ನೀವು. ನೀವು ಬರುವ ಮೊದಲೇ ಸಿಟಿಯಲ್ಲಿ ಪಾಠ ಮಾಡಿದವರಂತೆ. ಕಂಡಾಬಟ್ಟೆ ಸ್ಟ್ರಿಕ್ಟ್ ಅಂತೆ.. ಎಂದೆಲ್ಲಾ ಸುದ್ದಿ ಹಬ್ಬಿತ್ತು. ನೀವು ಬರುವ ಬಸ್ಸು ಪಂಕ್ಚರ್ ಆಗಲಿ, ಅಘನಾಶಿನಿ ಘಟ್ಟ ಹತ್ತದೇ ಇರಲಿ ಎಂದೆಲ್ಲಾ ನಾವು ಹರಕೆ ಹೊತ್ತಿದ್ದೆವು. ಹರಕೆ ಫಲಿಸಲಿಲ್ಲ. ನೀವು ಬಂದಿಳಿದಿರಿ. ಲಗೇಜೇ ಇಲ್ಲ. ಎರಡು ಕೈಚೀಲ. ಶುಭ್ರ ಬಿಳಿಯ ಬಡಕಲು ವ್ಯಕ್ತಿ.

ಬಂದವರೇ ಶಾಲಾ ಚೇರ್ಮನ್ ಆದ ನಮ್ಮಪ್ಪನ ಹೆಸರು ಕೇಳಿ ನಮ್ಮ ಮನೆಗೇ ಬಂದಿರಿ. ನಾವು ಆರೆಂಟು ಅಕ್ಕ ತಮ್ಮ, ಅಣ್ಣ ತಂಗಿ.. ಆವತ್ತಿಡೀ ಭತ್ತದ ಬಣತದ ಮನೆಯಿಂದ ಜಗುಲಿಯ ಕಡೆ ಸುಳಿಯಲೇ ಇಲ್ಲ. ಮಕ್ಕಳ ಸದ್ದೇ ಇಲ್ಲ ಎಂದು ಅಜ್ಜಿ ನಗೆಯಾಡಿದರೂ ನಮ್ಮ ಪ್ರತಿಕ್ರಿಯೆ ಇಲ್ಲ. ಆಗ ಬಾಡಿಗೆ ಮನೆಗಳೇ ಇರಲಿಲ್ಲವಲ್ಲ ನಮ್ಮ ಹಳ್ಳಿಯಲ್ಲಿ! ಮಾಳಿಗೆ ಮೇಲಿನ ಕತ್ತಲ ರೂಮನ್ನೇ ಸ್ವಚ್ಛವಾಗಿಸಿ ನಿಮಗೆ ಕೊಟ್ಟರು. ನಮ್ಮ ಮನೆಯಲ್ಲೇ ಊಟ ಸ್ನಾನ.. ಮನೆಯ ಸದಸ್ಯರೇ ಆಗಿ ಹೋದಿರಿ. ನಮ್ಮ ಅಣ್ಣಂದಿರಿಗೆ ಇದು ಸಮ್ಮತವಿರಲಿಲ್ಲ. ಇನ್ನು ಶಾಲೆಗೆ ಹೋಗಿ ಬಂದ್ರಾಯ್ತು ಅಂದ್ಕೊಂಡ್ರಾ? ಊಹೂಂ ಸಂಜೆ ಶಾಲೆಯ ನಮ್ಮ ಜಾತಕ ಮನೆಗೆ ಬರ್ತದೆ. ಇನ್ನು ನಾವೆಲ್ಲ ಸತ್ತ ಹಾಗೆಯೇ ತಿಳ್ಕೊಳ್ಳಿ.. ಎಂದು ಗೊಣಗುತ್ತಿದ್ದರು. ಆದರೆ ಅದೆಲ್ಲವನ್ನೂ ನೀವು ದೂರಾಗಿಸಿದಿರಿ. ಎಲ್ಲರ ಆದರಕ್ಕೂ ಪಾತ್ರರಾದಿರಿ. ಮನೆಯ ಬಿಡಿ, ಊರ ಹಿರಿಯರೂ ಏನಾದರೂ ತೀರ್ಮಾನಿಸುವಾಗ ಮಾಷ್ಟ್ರನ್ನು ಒಂದು ಮಾತು ಕೇಳಿ ಹೇಳ್ತೇವೆ ಎನ್ನುವಂತಾಗಿಬಿಟ್ಟಿತ್ತು.

ನೀವು ಮೊದಲನೇ ದಿನ ಶಾಲೆಗೆ ಎಂಟ್ರಿ ತೆಗೊಂಡ್ರಿ. ನಾವೋ ಮಂಗಗಳು.. ಅಭ್ಯಾಸ ಬಲ! ಮರ ಇಳಿದು ಕ್ಲಾಸಿನೊಳಗೆ ಬರೊದೇ ಕಷ್ಟವಾಗ್ತಿತ್ತು. ಎಲ್ಲರನ್ನೂ ಒಳಗೆ ಕೂಡಿಸಿ ನೀವು ಅದೇನೋ ಬರೆಯಹತ್ತಿದಿರಿ. ನಾವೋ ಕಲಪಲರವದಲ್ಲಿ ಮುಳುಗಿದಾಗ ತಲೆ ಎತ್ತಿ ಸೈಲೆನ್ಸ್ ಎಂದಿರಿ. ಊಹೂಂ.. ಸೈಲೆನ್ಸ್ ಏರ್ಪಡಲಿಲ್ಲ. (ನಮ್ಮ ಗದ್ದಲದಲ್ಲಿ ಆ ಮಾತು ಕೇಳಿದ್ದರೆ ತಾನೇ) ಕೀಪ್ ಕ್ವಾಯಟ್ ಎಂದಿರಿ (ಅದೂ ಕೇಳದ ಶಬ್ದ). ಸಿಟ್ಟುಗೊಂಡ ನೀವೀಗ ತಲೆ ಎತ್ತಿ ನೀವೀಗ ಹೀಗೆ ಗದ್ದಲ ಮಾಡ್ತಿದ್ದರೆ ನನ್ನ ಬಿ.ಪಿ. ಮೇಲಕ್ಕೇರುತ್ತೆ ಅಂದಿರಿ. ಆಗ ಇಡೀ ಕ್ಲಾಸ್ ತಣ್ಣಗಾಯಿತು. ಕಾರಣ ಮತ್ತೇನಲ್ಲ. ನಮಗೆ ಬಿ.ಪಿ. ಎಂದರೇನೆಂದು ಗೊತ್ತೇ ಇರಲಿಲ್ಲ. ರಾಷ್ಟ್ರಧ್ವಜದ ಹಾಗೇ ಏನೋ ಮೇಲಕ್ಕೇರುತ್ತೆ ಅಂತ ಕಾದೆವು.. ಏನೂ ಮೇಲೇರಲಿಲ್ಲ. ಆದರೂ ಕ್ಲಾಸ್ ಉಸಿರು ಬಿಡದೇ ಕೂತಿತ್ತು.

ಕ್ರಮೇಣ ನೀವು ನಮ್ಮ ಮೇಷ್ಟ್ರು ಆದಿರಿ. ಕೈಯಲ್ಲಿ ಬೆತ್ತ, ಬಾಯಲ್ಲಿ, ಹೃದಯದಲ್ಲಿ ಸಿಹಿ ಮಾತು, ತಿದ್ದಿದಿರಿ.. ತೀಡಿದಿರಿ.. ತಾಳ್ಮೆಯಿಂದ.. ಹಠದಿಂದ, ಪ್ರೀತಿಯಿಂದ.. ಬೆತ್ತದ ರುಚಿಯೂ, ನಿಮ್ಮ ಶಿಸ್ತೂ ಸೇರಿ ನಮ್ಮನ್ನು ಮರದಿಂದ ಕೆಳಗಿಳಿಸಿ, ಮನುಷ್ಯ ಮರಿಗಳನ್ನಾಗಿಸಿದಿರಿ. ಶಿಸ್ತು ಎಂಬುದು ಸುಂದರವಾಗಿರಲೂ ಸಾಧ್ಯ ಎಂಬುದನ್ನು ಕಲಿತದ್ದು ನಿಮ್ಮಿಂದಲೇ.

ಶಾಲೆಯ ಸುತ್ತ ಹೂವಿನ ಗಿಡಗಳು, ಹದಿನೈದು ದಿನಕ್ಕೊಮ್ಮೆ ಶ್ರಮದಾನ, ನಾವು ನೆಟ್ಟ ತೆಂಗಿನ ಗಿಡಗಳ ಎಳೆನೀರು ಈಗಿನ ಪುಟ್ಟ ಮಕ್ಕಳ ದಾಹ ತೀರಿಸುತ್ತಿದೆ ಎಂದು ಊರಿನಿಂದ ಫೋನಿನಲ್ಲಿ ಹೇಳಿದಾಗ ನಿಮ್ಮದೇ ನೆನಪು. ಶಾಲೆಗೆ ಆಟದ ಬಯಲು, ರಸ್ತೆ ಬಾವಿ.. ಒಂದೊಂದೇ ಮಾಡಿಸಿದಿರಿ.

ಆಗಸ್ಟ್ 15, ಜನವರಿ 26, ಗಾಂಧಿ ಜಯಂತಿ, ನಾಡಹಬ್ಬ, ವಾರ್ಷಿಕೋತ್ಸವ. ಶಾಲೆಯ ಹತ್ತು ಹಲವು ಕಾರ್ಯಕ್ರಮಗಳಲ್ಲಿ ಊರಿನವರೂ ಪಾಲ್ಗೊಳ್ಳುವಂತೆ ಮಾಡಿದಿರಿ. ಪ್ರತಿ ಬಾರಿ ಆಗಸ್ಟ್ 15ರಂದು ಭಾಷಣ ಮಾಡುವಾಗ ಗಾಂಧೀಜಿಯನ್ನು ಕೊಂದು ಬಿಟ್ಟರು ಎಂದು ನೀವು ಅತ್ತೇ ಬಿಡುತ್ತಿದ್ದಿರಿ. ನಮಗೆ ಅರಿವಿಲ್ಲದಿದ್ದರೂ ಅಳುವ ಮಾಷ್ಟ್ರು ಎಂದು ನಿಮ್ಮನ್ನು ಯಾವತ್ತೂ ಗೇಲಿ ಮಾಡದೇ ನಿಮ್ಮ ಬಗೆಗಿನ ಗೌರವ ಇನ್ನಷ್ಟು ಏರಿಸಿಕೊಂಡೆವು.

ಮನೆಯಲ್ಲೂ ಅಷ್ಟೇ.. ಕೊಟ್ಟಿಗೆ ಅಂಗಳಗಳನ್ನು ಸ್ವಚ್ಛವಾಗಿರಿಸಿಕೊಳ್ಳುವ ಬಗ್ಗೆ ನಮಗೆಲ್ಲ ತಿಳಿ ಹೇಳುತ್ತಿದ್ದಿರಿ. ಹಿರಿಯರಿಗೆ ಗೌರವ ಕೊಡುವುದು, ಅಪರಿಚಿತರನ್ನು ಆಧರಿಸುವುದು, ತಾಯ್ತಂದೆಯರಿಗೆ ನೆರವಾಗುವುದು.. ನಾಲ್ಕು ಮಕ್ಕಳು ಒಳ್ಳೆಯ ನಡತೆ ಕಲಿತಿದ್ದೇ ನಿಮ್ಮಿಂದ. ನೀವು ಬಂದ ಮೇಲೆ ಹಳ್ಳಿ ಮಂಗಗಳು ಮಾನವರಾದವು ಎಂದು ಅಪ್ಪನೋ ಅಜ್ಜಿಯೋ ಹೊಗಳಿದರೆ ಮುಗುಳ್ನಗೆ ಮಾತ್ರ ನಿಮ್ಮಿಂದ.

ಸಂಜೆ ಹೊತ್ತು ರಜೆಯ ದಿನಗಳಲ್ಲಿ ಊರವರೆಲ್ಲ ಅಡಿಕೆ ತಿನ್ನುತ್ತಾ ಪಟ್ಟಾಂಗ ಹೊಡೆಯುವಾಗ ನಿಮ್ಮ ಮಾರ್ಗದರ್ಶನ ನಡೆದೇ ಇತ್ತು. ಕೃಷಿಯಲ್ಲಿ ಯಂತ್ರೋಪಕರಣಗಳ ಉಪಯೋಗ, ಜೇನು ಸಾಕಾಣಿಕೆಯ ಮಹತ್ವ, ವರದಕ್ಷಿಣೆ ರಹಿತ ಮದುವೆಗಳು, ಮೋಸವಿಲ್ಲದ ಪಾರದರ್ಶಕ ವ್ಯಾಪಾರ.. ಹಳ್ಳಿಯವರೆಲ್ಲ ನಿಮ್ಮ ಮಾತಿಗೆ ಬೆಲೆ ಕೊಡುತ್ತಿದ್ದರು. ನೀವು ಹಾಗಿದ್ದಿರಿ.. ನಿಮ್ಮ ಕಲಿಸುವಿಕೆ ಹಾಗಿತ್ತು. ಮಕ್ಕಳಿಗಷ್ಟೇ ಅಲ್ಲದೇ ಹಿರಿಯರಿಗೂ ನೀವು ಮಾಷ್ಟ್ರಾಗಿದ್ದು ಹೀಗೆ.

ಆಗ ನಿಮ್ಮ ಸಂಬಳ ಎಷ್ಟಿತ್ತೋ ಯಾರಿಗೆ ಗೊತ್ತು? ಒಂದು ದಿನ ನೀವು ಊರಿಗೆ ಹೊರಟು ನಿಂತಾಗ ನನ್ನ ಅಜ್ಜ ಬಂದು ಮಾಷ್ಟ್ರೇ ನೀವು ನಮ್ಮ ಹಳ್ಳಿ ಮಕ್ಕಳಿಗೆ ಬಟ್ಟೆ ಹೊಲಿಸಿ, ಪುಸ್ತಕ ಕೊಡಿಸಿ ಮಾಡಿ ನಿಮ್ಮ ಸಂಬಳಾನೆಲ್ಲ ಖರ್ಚು ಮಾಡ್ಕೋತೀರಿ. ಪಾಪ ನಿಮ್ಮ ಹೆಂಡತಿ ಊರಲ್ಲಿ ಮಕ್ಕಳನ್ನು ಸಾಕ್ತಾ ಅದೆಷ್ಟು ಕಷ್ಟ ಪಡ್ತಿದ್ದಾರೋ ಏನೋ.. ಚೂರು ಪಾರು ಒಡವೆ ಮಾಡಿ ಕೊಂಡೋಗಿ ಎಂದು ಆಜ್ಞಾಪಿಸಿದರು. ನನ್ನಮ್ಮ ಈ ಬಾರಿ ಬರುವಾಗ ಹೆಂಡತೀನ, ಮಗುವನ್ನ ಕರ್ಕೊಂಡ್ಬನ್ನಿ.. ನೋಡ್ಬೇಕು ಅನ್ನಿಸ್ತಿದೆ ಅಂದಿದ್ಲು. ಸ್ಕೂಲ್ ಮೇಷ್ಟ್ರ ಹೆಂಡತಿ ನಮ್ಮ ನೆಂಟರಂತೇ ಕಂಡು ಬಂದಿದ್ರು.

ನಿಮ್ಮ ಹಾಗೇ ಅಂತಃಕರಣದಿಂದ ಹೊಮ್ಮುವ ಸ್ವರದಲ್ಲಿ ಪಾಠ ಮಾಡುವ ಮೇಷ್ಟ್ರುಗಳು ಆಮೇಲೆ ಸಿಗಲೇ ಇಲ್ಲ. ಇತಿಹಾಸದಲ್ಲಿ ತನ್ಮಯತೆ, ಸಾಹಿತ್ಯ ಕಾವ್ಯಗಳಲ್ಲಿ ಗೇಯತೆ, ವಿಚಾರಗಳಲ್ಲಿ ಸ್ಪಷ್ಟತೆ, ನೀತಿ ನಿಯಮಗಳಲ್ಲಿ ನಿಷ್ಠುರತೆ.. ಎಲ್ಲಾ ಇದ್ದೂ ಸರಳತೆ.. ಗೊತ್ತಿಲ್ಲದೆ ನಮ್ಮ ತಲೆಯೊಳಗಿಳಿದಿರಬೇಕು. ನಿಮ್ಮ ವಿದ್ಯಾರ್ಥಿಗಳಾಗಿದ್ದವರೆಲ್ಲಾ ಈಗ ಎತ್ತೆತ್ತಲೋ

ಇದ್ದೇವೆ. ಎಷ್ಟೆಷ್ಟೊ ದುಡಿಯುತ್ತಿದ್ದೇವೆ. ದೊಡ್ಡನೆ ಮೇಷ್ಟ್ರ ಶಿಷ್ಯರು ಮಾತ್ರ ಪಾಶ್ ಮಂದಿಯೆದುರು ಮಂಕಾಗಿ ಕಂಡಾರೇ ವಿನಃ ಲಂಚ ಗಿಂಚ ತೆಗೊಂಡು ವಶೀಲಿ ಬಾಜಿ ಮಾಡಲಾರರು.

ಆಗಂತೂ ನೀವು ಹಣ ಜಮೀನು ಮನೆ ಏನೂ ಮಾಡಿರಲಿಲ್ಲ. ಪೆನ್ಶನ್‌ನಲ್ಲಿ ಟೆನ್ಶನ್ ಇಲ್ಲದೇ ಬದುಕುತ್ತಿರುವ ನಿಮ್ಮನ್ನೊಮ್ಮೆ ನೋಡಬೇಕು. ಪಾದ ಮುಟ್ಟಿ ನಮಸ್ಕರಿಸಬೇಕು.. ಅನ್ನಿಸ್ತಾ ಇದೆ. ನೀವು ವರ್ಗವಾಗಿ ಹೋಗುವ ಮುನ್ನಾದಿನ ನಾನು ಅಕ್ಕ ಸಶಬ್ದವಾಗಿ ಅಳುತ್ತಿದ್ದೆವು. ಏನು ನಾನು ಮೇಲೆ ಹೋಗ್ತಾ ಇದ್ದೀನಾ.. ನೀವು ಜಾಣ ಮಕ್ಕಳು.. ದೊಡ್ಡವರಾಗಿ ಗಳಿಸ್ತಾ ನಾಲ್ಕು ಜನಕ್ಕೆ ಸಹಾಯ ಮಾಡ್ತಾ ಬೆಳೆಯೋದನ್ನು ನೋಡಿ.. ನನ್ನ ಶಿಷ್ಯರು ಕಣ್ರಪ್ಪಾ ಎಂದು ಅಭಿಮಾನದಿಂದ ನಾನೂ ಹೇಳಬೇಕಲ್ವಾ ಎಂದು ಕುಶಾಲು ಮಾಡಿದಿರಿ. ನನ್ನ ಕೈಯಲ್ಲಿ ಒಂದು ಪಾರ್ಕರ್ ಪೆನ್ನು ಇಟ್ಟು ಇದು ಮಾಷ್ಟ್ರ ನೆನಪಿಗೆ ಎಂದು ಬಸ್ ಹತ್ತಿದಿರಿ.

ಕೈಯಲ್ಲಿ ಪೆನ್ನು ಹಿಡಿದಾಗಲೆಲ್ಲಾ ನಿಮ್ಮ ನೆನಪು ಬರುತ್ತದೆ. ಮೈಕಿನೆದುರು ನಿಂತಾಗಲೂ ನಿಮ್ಮ ಧೈರ್ಯದ ಮಾತುಗಳು. ತಿದ್ದುವ ನುಡಿಗಳು ನಮ್ಮ ಮಾಷ್ಟ್ರಿದ್ದಾರೆ ಸರಿ ಪಡಿಸ್ತಾರೆ ಬಿಡೂ.. ಎಂಬ ನಂಬಿಕೆ..

ನೀವೆಲ್ಲೋ ಎಲೆ ಮರೆಯ ಕಾಯಂತೆ ಇದ್ದರೂ ನನ್ನಂಥ ನೂರು ಸಾವಿರ ಶಿಷ್ಯರ ಹೃದಯ ಸಿಂಹಾಸನದಲ್ಲಿ ಶಾಶ್ವತವಾಗಿದ್ದೀರಿ. ನಿಮ್ಮ ಆಶೀರ್ವಾದ ಅಂದಿನ ಹಾಗೆ ಇಂದೂ ನಮ್ಮ ಮೇಲಿರಲಿ.. ಎಲ್ಲಿ ಸಿಗುತ್ತೀರಿ ಹೇಳಿ.. ಸಿಕ್ಕಾಗ ಕೇಳುವ ಡೌಟ್ಸ್ ಸಾಕಷ್ಟಿದೆ. ಅದೇ ಕನ್ನಡಕದ ಕಣ್ಣೊಳಗಿಂದ ನೀವು ನಮ್ಮನ್ನು ನೋಡಿ ವೆರಿ ಗುಡ್ ಎನ್ನಿಸಿಕೊಳ್ಳಬೇಕೆಂಬ ಆಸೆಯಾಗುತ್ತಿದೆ.

ಇಂತು ನಿಮ್ಮ ಪ್ರೀತಿಯ ಶಿಷ್ಯೆ

*(ತಪ್ಪುಗಳು ಉಳಿದುಕೊಂಡಿದ್ದರೆ ಕ್ಷಮಿಸಿ)*

## ಹಾಸ್ಯ ಚಿಕಿತ್ಸೆ

ಶ್ರೀ ಎಂ.ವೀ. ಸೀತಾರಾಮಯ್ಯನವರು ನಾ. ಕಸ್ತೂರಿಯವರ ಶಿಷ್ಯರು. ಒಂದು ದಿನ ಕಸ್ತೂರಿಯವರು ಕಾಲೇಜಿಗೆ ತಡವಾಗಿ ಬಂದರು. ಆಗ ಎಂ.ವೀ.ಸೀ. ಅವರನ್ನು ಕರೆದು ತಮ್ಮ ಕೃತಕ ದಂತ ಪಂಕ್ತಿಯನ್ನು ಬಾಯಿಂದ ತೆಗೆದು ಶಿಷ್ಯನ ಕೈಗೆ ಕೊಟ್ಟು ಸೀತಾರಾಮು, ನಾನು ಮೇಲೆ ಹತ್ತಲಾರೆ, ನೀನೇ ಮಹಡಿ ಮೇಲೆ ಹೋಗಿ ಆ ಪ್ರಿನ್ಸಿಪಾಲರಿಗೆ ಈ ನನ್ನ ಹಲ್ಲು ತೋರಿಸಿ ನನ್ನ ಹಾಜರಿ ಹಾಕಿ ಬಾ. ತಡವಾಗಿ ಬಂದರೆ ಮೇಲಾಧಿಕಾರಿಗಳು ಮುಂದೆ ಹಲ್ಲು ಕಿರಿಯಬೇಕಲ್ಲ ಅದಕ್ಕೆ ಈ ಹಾಸ್ಯ ಚಿಕಿತ್ಸೆ ಅಂದರು.

# ಎನ್.ಆರ್.ಎಂ.!....

**- ವಾಣೀ ಸುರೇಶ್**

**N.R.M.!...** ಏನು ಹಾಗಂದ್ರೆ ಅಂದ್ರಾ? ಇವತ್ತು ಇಂಟರ್ನೆಟ್ ಬ್ರೌಸ್ ಮಾಡ್ತಿದ್ದ ನಂಗೂ ಮೊಟ್ಟಮೊದಲಿಗೆ ಹಾಗೇ ಅನ್ನಿಸ್ತು! ಆಮೇಲೆ, ನಮ್ಮ ಟೀಚರ್ಸ್ ಡೇ ಹಾಗೆ ಸೆಪ್ಟೆಂಬರ್ನಲ್ಲೇ ಬರುವ ಈ ಎನ್.ಆರ್.ಎಂ. ಕೂಡಾ ಇಲ್ಲೇ ಮೂಲೆಯ ತಿರುವಿನಲ್ಲೇ ಇದೇಂತ (round the bend ಅನ್ನೋದನ್ನ ಇನ್ನು ಹೇಗೆ ಕನ್ನಡದಲ್ಲಿ ಹೇಳೋದ್ರೀ?) ಜ್ಞಾನೋದಯವಾಗಿ, ಅದರ ಬಗ್ಗೆ ಮಾಹಿತಿ ಸಂಗ್ರಹಿಸಕ್ಕೆ ಶುರು ಮಾಡಿದೆ ನೋಡಿ, ಆಗಲೇ ನನ್ನನ್ನು ಕೆಲವು ವಿಷಯಗಳು ಚಕಿತಗೊಳಿಸಿದ್ದು!

ನಮ್ಮ ಸ್ಕೂಲಲ್ಲಿ ಅಂಕಗಣಿತದ ಟೀಚರ್ರು ಒಬ್ಬರಿದ್ರು - ಎನ್. ರಂಗಮಣಿ ಮರಗದಂ ಅಂತ. ಅವರು ಮತ್ತು ಅವರ ನೆಚ್ಚಿನ ಆಯುಧವಾದ ಉದ್ದನೆಯ ಇಂಚುಪಟ್ಟೀನೇ ತಕ್ಷಣ ನೆನಪಾಗುವಂತೆ ಇರೋ ಈ ಸಂಕ್ಷಿಪ್ತ ಎನ್.ಆರ್.ಎಂ.ನ ಪೂರ್ಣ ರೂಪ - ''ನ್ಯಾಷನಲ್ ರೈಸ್ ಮಂತ್'' ಅಂತ ಅಷ್ಟೇ! ಅಥವಾ ಸುಲಿದ ಬಾಳೆಯ ಹಣ್ಣಿನಂದದ ನಮ್ಮ ಭಾಷೆಯಲ್ಲಿ ಹೇಳುವುದಾದರೆ ''ರಾಷ್ಟ್ರೀಯ ಅಕ್ಕಿಯ (ಭತ್ತದ) ಮಾಸ'' - ಅಂತಲೂ ಅನ್ನಬಹುದೇನೋ.

ಅಮೆರಿಕಾಕ್ಕೂ ಅಕ್ಕೀಗೂ ಏನ್ರೀ ಸಂಬಂಧ ಅಂದ್ರಾ? ಸರಿಯಾಗಿ ಹೇಳಿದ್ರಿ. ನಂಗೆ ಗೊತ್ತಿದ್ದಿದ್ದೂ ಇಲ್ಲಿ ಹೇರಳವಾಗಿ ಬೆಳೆಯುವ - ಕಾರ್ನು (ಮುಸುಕಿನ ಜೋಳ), ಸೋಯಾಬೀನ್ಸು, ಪೀ ನಟ್ಟು (ನೆಲಗಡಲೆ), ರೈ, ಬಾರ್ಲಿ, ಗೋಧಿ ಇತ್ಯಾದಿಗಳ ಬಗ್ಗೆಯಷ್ಟೇಪ್ಪಾ! ಖಂಡಿತವಾಗೂ ಇಲ್ಲಿಯೋರು ನಮ್ಮ ಹಾಗೇ ಅನ್ನಾ ತಿನ್ನೋದಿರ್ಲಿ, ಇವರು ಅಕ್ಕಿಯನ್ನು ಬೆಳೆಯೋದ್ರ ಬಗ್ಗೆ ಕೂಡಾ ನಂಗೆ ಅಂದಾಜಿರಲಿಲ್ಲ. ಅಮೆರಿಕನ್ನರಿಗೂ ಅನ್ನಬ್ರಹ್ಮನಿಗೂ ಗೋ--ಮೀಗೂ ಇ---ಬೀಗೂ ಇರೋವಷ್ಟೇ ಸಂಬಂಧವಿರಬೇಕು ಅಂತಲೇ ಮೊನ್ನೆ ಮೊನ್ನೆವರ್ಗೂ ನನ್ನ ವೈಯುಕ್ತಿಕ ಅಭಿಪ್ರಾಯವಿದ್ದದ್ದು ಸಹಾ! (ಅಂದಹಾಗೆ, ನಮ್ಮ ಸೋಶಿಯಲ್ ಸ್ಟಡೀಸ್‌ನ ಸಿಸ್ಟರ್ ಬರ್ನಾಡ್‌ಗೆ, ಸೈನ್ಸು-ಮ್ಯಾಕ್ಸುಗಳ ಬಗ್ಗೆ ಮಾತ್ರ ಗೌರವವಿದ್ದ ನಾನು ಮತ್ತು ನನ್ನ ಗೆಳತಿ ರತ್ನಳನ್ನು ಕಂಡ್ರೆ ಯಾವಾಗಲೂ ಒಂದು ತರದ ಜಿಗುಪ್ಸೆ, ಪಿರಿಚು ಇರ್ತಿತ್ತು. ಯಾಕೋ ಏನೋ!)..

ಇರಲಿ, ಸದಾ ಪ್ರೋಟೀನ್ಸು, ಕಾರ್ಬ್ಸ್-ಉ, ಕ್ಯಾಲೋರೀಸ್ ಬಗ್ಗೆ ಮಾತಾಡ್ತಾ, ಸಾಮಾನ್ಯವಾಗಿ ಎರಡು ಬ್ರೆಡ್ ಸ್ಲೈಸುಗಳ ಮಧ್ಯೆ ಒಂದಿಷ್ಟು ಸೌತೆಕಾಯಿ-ಈರುಳ್ಳಿ -ಟೊಮ್ಯಾಟೋ ಚೂರುಗಳು, ಜೊತೆಗೆ ಅಲ್ಲಲ್ಲಿ ಒಂದರಮೇಲೊಂದು ನನಗೆ ಗುರುತು ಪರಿಚಯವಿಲ್ಲದ ನಸುಗಂದು, ಎಣ್ಣೆಗೆಂಪು ಅಥವಾ ಕಡುಗೆಂಪು ಬಣ್ಣದ ತರಹಾವಾರಿ (ಮಾಂಸದ) ಬಿಲ್ಲೆಗಳನ್ನು ಲಗೋರಿ ಕಲ್ಲಿನಂತೆ ಪೇರಿಸಿರುವ ಸುಮಾರು ಆರಿಂಚಿನಷ್ಟು ಅಥವಾ ಅದಕ್ಕಿಂತ ದೊಡ್ಡದಾದ ಖಾದ್ಯ ವಿಶೇಷವೇ ಇಲ್ಲಿಯ ಪ್ರಖ್ಯಾತ ''ಬರ್ಗರ್''.

ಅದನ್ನೋ ಅಥವಾ ಇನ್ನೇನಾದ್ರೊಂದು ಅಂಥದ್ದೇ ತಿನಿಸಿನ ಒಂದು ತುಣುಕನ್ನೋ ಒಂದು ಕೈಯ್ಯಲ್ಲಿ ಮತ್ತು ಇನ್ನೊಂದು ಕೈಯ್ಯಲ್ಲಿ ನಮ್ಮ ಹಳೆಕಾಲದ ಅಳೆಯೋ ಸೇರಿನ ತಮ್ಮನಂತಿರುವ ಪೇಪರ್ ಗ್ಲಾಸಿನಲ್ಲಿ ಸ್ಟಾರ್ ಬಕ್ಸ್ ಕಾಫೀನ್ನೋ ಇಲ್ಲ ಡಯೆಟ್ ಕೋಕನ್ನೋ ಹಿಡಿದು, ಕಾರ್ ಕೀ ಗೊಂಚಲು ಮತ್ತು ಲ್ಯಾಪ್ ಟಾಪ್ ಜೊತೆಯಲ್ಲಿ ಬ್ಯಾಲೆನ್ಸ್ ಮಾಡ್ತಾ, ತಮ್ಮ ಓಟದ ನಡಿಗೆಯಲ್ಲೇ ಮುಕ್ಕಾಲುಮಾರು ಪಾಲು ಜೀವನ ನಡೆಸೋರ ಹಾಗನ್ನಿಸೋ ಇಲ್ಲಿಯೋರೆಲ್ಲಿ?! ಅಥವಾ ಮೀರಿ, ಮಾತೆತ್ತಿದರೆ ಡಿಕ್ಷನರಿ ರೆಫರ್ ಮಾಡ್ಬೇಕೂನ್ತನ್ನಿಸೋ ಹಾಗೆ ''ಲೋ ಗ್ಲೈಸೆಮಿಕ್ ಇಂಡೆಕ್ಸ್'', ಬ್ರೌನ್ ರೈಸು, (ದಕ್ಷಿಣ ಅಮೆರಿಕೆಯ) ಕೀನ್ವಾ ಅಂತೆಲ್ಲ ಹಾರಾಡೋರ ಹಾವಳೀಲಿ ನಮ್ಮ ಸೌತ್ ಏಷಿಯಾ ಖಂಡದ ಅತಿ ''ಹೈ ಗ್ಲೈಸೆಮಿಕ್ ಇಂಡೆಕ್ಸ್'' ಹೊಂದಿರುವ ಬಡವರ ಬಂಧುವಾದ ನಮ್ಮ ಅಕ್ಕಿಗೆಲ್ಲಿ ಸ್ಥಳ ಸದ್ಯ, ಅಂತಲೇ ನನ್ನ ಕಲ್ಪನೆಯಾಗಿತ್ತು!

ಆದ್ರೆ ಇಲ್ಲಿ ನೋಡಿದರೆ ನನಗೆ ಸಿಕ್ಕಿದ ಅಂಕಿ ಅಂಶದ ಪ್ರಕಾರ – ಕ್ಯಾಲಿಫೋರ್ನಿಯಾ, ಮಿಸ್ಸಿಸ್ಸಿಪಿ, ಮಿಸ್ಸೋರಿ, ಲುಯಿಸಿಯಾನ, ಆರ್ಕನ್ಸಾ ಹಾಗೂ ಟೆಕ್ಸಾಸ್‌ಗಳಲ್ಲಿರುವ ಸುಮಾರು ಒಂಭತ್ತು ಸಾವಿರ ಫಾರ್ಮುಗಳ ಮೂರು ಮಿಲಿಯನ್ ಎಕರೆಗಳಲ್ಲಿ, ಒಂದೂ ಕಾಲು ಬಿಲಿಯನ್ ಯು.ಎಸ್. ಡಾಲರುಗಳಷ್ಟು ಬೆಲೆ ಬಾಳುವ ಭತ್ತವನ್ನು ಪ್ರತಿ ವರ್ಷವೂ ಬೆಳೆಯಲಾಗುತ್ತಿದೆ! ಅಷ್ಟೇ ಅಲ್ಲ, ಭತ್ತ ಬೆಳೆಗಾರರ ಜಾಗತಿಕ ರಫ್ತು ಮಾರುಕಟ್ಟೆಯಲ್ಲಿ ಯು.ಎಸ್.ಎ.ಗೆ ಎರಡನೇ ಸ್ಥಾನ!! ಇನ್ನು, ಇಲ್ಲೇ ಉಪಯೋಗಿಸಲ್ಪಡುವ ಅಕ್ಕಿಯಲ್ಲಿ ಶೇಕಡಾ ಅರವತ್ತು ಭಾಗ ಆಹಾರವಾಗಿ ಉಪಯೋಗಿಸಲ್ಪಟ್ಟರೆ, ಇನ್ನುಳಿದ ಶೇಖಡಾ ನಲವತ್ತು ಭಾಗದಲ್ಲಿ ಹೆಚ್ಚಾಗಿ ಬಿಯರ್ ತಯಾರಿಕೆಗೆ ಮತ್ತು ಸ್ವಲ್ಪ ಭಾಗ ಸಂಸ್ಕರಿಸಿದ ಆಹಾರ ಸಾಮಗ್ರಿಗಳಿಗಾಗಿ ಬಳಸಲ್ಪಡುತ್ತದೆ! ಎಂಥಾ ವಿಪರ್ಯಾಸ ನೋಡಿ!

ಸರಿ, ತೀರಾ ಸಾಧಾರಣವಾದ ನನ್ನ ಪರಿಮಿತಿಯಲ್ಲಿ, ನಾನಿಲ್ಲಿ ನೋಡಿರೋ ಅಕ್ಕಿಯ ತಿನಿಸುಗಳ ಬಗ್ಗೆ ಮನಸ್ಸು ಹೊರಳಿತು...

ಈಗತಾನೆ ನಾನು ಹೇಳಿದ ಹಾಗೆ, ಮಾತೆತ್ತಿದರೆ ಬ್ರೌನ್ ರೈಸು ಅಥವಾ ಕೀನ್ವಾ ಅಂತನ್ನೋ ಇವರುಗಳಿಗೆ, ನಾನು ಕಂಡ್ಹಾಗೆ, ಚೆನ್ನಾಗಿ ಪಾಲಿಶ್ ಮಾಡಿದ ಅಕ್ಕಿಯಲ್ಲಿ ತಯಾರಿಸಿದ ಉದುರುದುರಾಗಿ ಮಲ್ಲಿಗೆ ಹೂವಿನಂತೆ ಇರೋ ಬಿಸಿಬಿಸಿ ಅನ್ನವನ್ನು ನಮ್ಮ ಹಾಗೆ (ಸಾರಲ್ಲೋ, ಹುಳಿಯಲ್ಲೋ, ಚಟ್ನಿಪುಡಿಯಲ್ಲೋ ಕಲಸಿಕೊಂಡು) ತಿನ್ನುವ ಐಡಿಯಾ ಎಲ್ಲಿಂದ ಬರಬೇಕು ಸದ್ಯ! ಅಷ್ಟೇ ಅಲ್ಲ, ಸರಿಯಾಗಿ ಹೊಟ್ಟೆ ತುಂಬದ, ತಿಂದರೆ ತೂಕಡಿಕೆ ಬರತ್ತೆ – ಎಂದೆಲ್ಲಾ ಆಕ್ಷೇಪಿಸಲ್ಪಡುವ, ಮೃದುವಾದ ಬಿಳಿ ಅನ್ನದ ಬಗ್ಗೆ, ಬಹುತೇಕ ಅಪ್ಪಟ ಮಾಂಸಾಹಾರಿಗಳೇ ಆದ ಇಲ್ಲಿಯೋರಿಗೆ ಆಸ್ಥೆ ಇರೋದೂ ಅಷ್ಟಕ್ಕಷ್ಟೇ. ಅದೂ ಸಹಜವೇ ಅನ್ನಿ. ಈಗಿನ ಕಾಲದಲ್ಲಿ ಬಹುಪಾಲಿನ ನಮ್ಮ ಹುಡುಗರಿಗೇ ಹಾಗನ್ನಿಸಬೇಕಾದ್ರೆ ಇನ್ನು ಈ ಹುಟ್ಟಾ ಮಾಂಸಾಹಾರಿಗಳ ಬಗ್ಗೆ ಏನು ತಾನೇ ಹೇಳಕ್ಕೆ ಸಾಧ್ಯ ಬಿಡಿ!

ಆದ್ರೂ, ಪ್ರಪಂಚದ ಮೂಲೆ ಮೂಲೆಯ ಸಂಸ್ಕೃತಿಗಳನ್ನೂ ಕಾಣಬಹುದಾದ ಈ ನಾಡಿನಲ್ಲಿ, ಆ ಕಾರಣದಿಂದ ಕಂಡುಬರುವ ಅತಿ ವೈವಿಧ್ಯಮಯ ಊಟ–ಉಪಾಹಾರ

ಮಂದಿರಗಳನ್ನು ಮತ್ತು ಅಲ್ಲಿ ದೊರೆಯುವ ಅಲ್ಪಸಂಖ್ಯಾತ ಪುಳಿಚಾರಿ ತಿಂಡಿ ತಿನಿಸುಗಳ ಪಟ್ಟಿಯನ್ನು ನೋಡುವಾಗ ಅಪರೂಪವಾಗಿ ಅಲ್ಲೊಂದು, ಇಲ್ಲೊಂದು ಅನ್ನದ ಬಳಕೆ ಕಾಣಿಸತ್ತೆ! ಆದರೆ ಎಲ್ಲವನ್ನೂ ಇಲ್ಲಿಯವರ ನಾಲಗೆ ರುಚಿಗೆ ಅಳವಡಿಸುವ ಭರದಲ್ಲಿ, ಎಲ್ಲವೂ ಅಂದರೆ ತಮ್ಮದೂ ಶುದ್ಧವಾಗುಳಿಯದ – ಇಟ್ಯಾಲಿಯನ್, ಫ್ರೆಂಚ್, ಮೆಕ್ಸಿಕನ್, ಗ್ರೀಕ್, ಮಧ್ಯ ಪ್ರಾಚ್ಯ ಇತ್ಯಾದಿ ಇತರ ಪಾಶ್ಚಾತ್ಯ, ಪೂರ್ವಾತ್ಯ ದೇಶಗಳ – ತಿಂಡಿ ತೀರ್ಥಗಳ ರುಚಿಯಂತೆ ಇವೂ ಸಹಾ ಅಮೆರಿಕೀಕರಣಗೊಂಡಿರುವುದಂತೂ ಶತಶಃ ಸತ್ಯ!

ತಡೀರಿ, ಈಗ ನಾನು ನಿಮಗೆ ನಮ್ಮ ಸೌತ್ ಏಷಿಯನ್ನರನ್ನು ಹೊರತುಪಡಿಸಿ ಅಕ್ಕಿಯನ್ನು ಬಳಸಿ ತಯಾರಿಸುವವರ ಸಸ್ಯಾಹಾರದ ಒಂದೆರಡು ಮಾದರಿಯ ವಿವರವನ್ನು ಸ್ವಾನುಭವದಿಂದ ಹೆಕ್ಕಿ ಕೊಡಲು ಪ್ರಯತ್ನಿಸುತ್ತೇನೆ. ರೆಸಿಪಿ ಅವರ (ಆಯಾ ದೇಶದವರ) ಇಚ್ಛೆಯಂತೆ, ಅದರ ರುಚಿಯ ಊಹೆ ಮಾತ್ರಾ ನಿಮ್ಮಿಚ್ಛೆಯಂತೆ, ಆಯ್ತಾ? ಇಲ್ಲಿ ಅಕ್ಕಿಯನ್ನು ಬಳಸುವವರಲ್ಲಿ ನನಗೆ ತಕ್ಷಣ ನೆನಪಾಗೋರು ಮೆಕ್ಸಿಕನ್ನರು, ಥಾಯ್ಲೆಂಡಿನೋರು, ಮತ್ತು ಜಪಾನೀಯರು.

ಅಲ್ಲ ಎಲ್ಲಾ ಸರಿ, ಆದ್ರೆ ಅನ್ನಾನ ಚಪಾತಿಯಲ್ಲಿ ಸುತ್ತಿ ತಿನ್ನೋದ್ರ ಬಗ್ಗೆ ಏನಾದ್ರೂ ಕೇಳಿದ್ದೀರಾ? ಇಲ್ಲೇದ್ರೆ ''ಬೀನ್ ಬುರಿಟ್ಟೋ'' ಎನ್ನುವ ಜನಪ್ರಿಯ ಸ್ಪ್ಯಾನಿಶ್ (ಮೆಕ್ಸಿಕನ್) ಖಾದ್ಯದ ವಿಷಯ ಹೇಳ್ತೀನಿ. ಸ್ವಲ್ಪ ಕೇಳಿ...

ಮೈದಾಹಿಟ್ಟಿನ ಹಸ್–ಹಸುಕಲಾಗಿ ಅರ್ಧಂಬರ್ಧ ಬೆಂದ ಒಂದು ದೊಡ್ಡ ಬೆರಣಿಯ ಸೈಜಿನ ಆದರೆ ಮೆತ್ತನೆಯ ಚಪಾತಿಯನ್ನು ಹರಡಿ ಅದರ ಮೇಲೆ ಬೆಂದ ಹುರುಳೀಬೀಜವನ್ನು ಧಾರಾಳವಾಗಿ ಸುರಿದು, ಅದರ ಮೇಲೆ ಟೊಮೇಟೋ, ಈರುಳ್ಳಿ, ಸೌತೆಕಾಯಿ, ದಪ್ಪ ಮೆಣಸಿನಕಾಯಿ ಮತ್ತು ಲೆಟ್ಯೂಸಿನ ಚೂರುಗಳು, ಅಣಬೆ, ಪುಟ್ಟ ಆಲಿವ್ ಹಣ್ಣುಗಳು, ಸಣ್ಣಗೆ ತುರಿದ ಚೀಸು, ಘಟ್ಟಿಯಾಗಿ ಬೆಂದಿರುವ ಕುಸುಬಲಕ್ಕಿಯಂಥಹ ಬ್ರೌನ್ ರೈಸಿನ ಅಥವಾ ಜಾಸ್ಮಿನ್ ರೈಸಿನ ಅಂಟಂಟಾದ ಅನ್ನ, ವಿನೆಗರ್, ಉಪ್ಪು, ತದಬದಕಲಾಗಿ ಅಂದರೆ ಚಕ್ಕೆಚಕ್ಕೆಯಾಗಿ ನುರಿಸಿರೋ ಅಚ್ಚ ಮೆಣಸಿನಕಾಯಿ, ಬೆಳ್ಳುಳ್ಳಿ, ಓರಿಗ್ಯಾನೋ (ಘಮದಲ್ಲಿ ಪುದೀನಾದ ತಂಗಿ ಅನ್ನಬಹುದು), ಸ್ವಲ್ಪ ಗ್ವಾಕಮಾಲೆ ಅರ್ಥಾತ್ ಬೆಣ್ಣೆ ಹಣ್ಣಿನಿಂದ (ಅವಕ್ಯಾಡೋ) ತಯಾರಿಸುವ ಒಂದು ರೀತಿಯ ಚಟ್ನಿ, ಒಂದಿಷ್ಟು ಸವರ್ ಕ್ರೀಮ್ ಮತ್ತು ಟೊಮ್ಯಾಟೋ ಸಾಸ್ಗಳನ್ನು ಸುರಿದು, ಇವು ಯಾವುದೂ ಹೊರಗೆ ಜಿನುಗಿ ಚೆಲ್ಲದಂತೆ ಚಪಾತಿಯನ್ನು ಅವರದ್ದೇ ಆದ ವಿಶಿಷ್ಟವಾದ ರೀತಿಯಲ್ಲಿ ಬಿಗಿಯಾಗಿ ಸುರುಳಿ ಸುತ್ತಿ, ಹಾಗೇ ಕೊರೆಯುವಷ್ಟು ತಣ್ಣಗೇ, ಕಾರ್ನ್ ಚಿಪ್ಸ್ ಜೊತೆಯಲ್ಲಿ ತಿನ್ನಲು ಸರ್ವ್ ಮಾಡುವುದೇ – ''ಬೀನ್ ಬುರಿಟ್ಟೋ''!

ಇನ್ನೂ ಜಪಾನೀಯರ ಅತ್ಯಂತ ಪ್ರಿಯ ಖಾದ್ಯ ಇಲ್ಲೂ ಅತಿ ಜನಪ್ರಿಯವಾಗಿರುವ ಹಿನ್ನೆಲೆಯಲ್ಲಿ ನಿಮಗೆ ''ಸೂಶಿ''ಯ (ನಮ್ಮಂಥಾ ಪುಳಿಚಾರಿಗಳಿಗಾಗಿ ಅದರ ವೆಜಿಟೇರಿಯನ್ ರೂಪದ) ಬಗ್ಗೆ ಹೇಳಲೇಬೇಕು. ಇಲ್ಲಿ ಬೆಳೆಯುವ ಭತ್ತದ ತಳಿಗಳಲ್ಲಿ ''ಸೂಶಿ ಅಕ್ಕಿ'' ಎಂದೇ ಕರೆಯಲ್ಪಡುವ ಈ ವಿಧವಾದ ಅಕ್ಕಿಗೆ, ಬ್ರೌನ್ ರೈಸನ್ನು ಹೊರತುಪಡಿಸಿ ಇಲ್ಲಿ ಅತಿ ಹೆಚ್ಚಾಗಿ

ಬಳಸಲ್ಪಡೋ ಅಕ್ಕಿ ಅಂತನ್ನೋ ಹೆಗ್ಗಳಿಕೆ ಬೇರೆ! ಅದನ್ನು ಮಾಡೋ ವಿಧಾನ ನಮ್ಮ ಪತ್ರೊಡೆಯನ್ನು ಒಂದು ರೀತಿಯಲ್ಲಿ ನೆನಪಿಸುತ್ತೆ ನೋಡಿ! ಈ ಖಾದ್ಯದ ತಯಾರಿಕೆಗೆ ಅತ್ಯಗತ್ಯವಾಗಿ ಬೇಕಾದ ಜಪಾನಿನ ಅಸಾಧಾರಣ ವಸ್ತುವಿಶೇಷವಾದ ''ವಸಾಬಿ'' ಮತ್ತು ಕಡಲ ಸಸ್ಯವಾದ ''ನೋರಿ'' ಎಂಬುದರ ಬಗ್ಗೆ ನಿಮಗೆ ಹೇಳದಿದ್ದರೆ, ಅದು ಸೂಶಿಗೆ ನಾನು ಮಾಡುವ ಅಪಚಾರವೇ ಸರಿ. ಜಪಾನಿನ ವಿಶೇಷವಾದ ವಸಾಬಿ ಎಂಬ ಮೂಲಂಗಿ ಜಾತಿಯ ಈ ಸಸ್ಯದ ಬೇರಿನ ಪುಡಿಯನ್ನು ಬೆರೆಸದೆ ಅಲ್ಲಿ ಸರಿಸುಮಾರಾಗಿ ಯಾವ ಅಡಿಗೆಯನ್ನೂ ತಯಾರಿಸುವುದೇ ಇಲ್ಲವಂತೆ! ಅತಿ ವಿಚಿತ್ರವಾದ ವಾಸನೆ ಮತ್ತು ತೀಕ್ಷ್ಣವಾದ ಘಾಟಿನಿಂದ ಕೂಡಿದ ಈ ವಸಾಬಿಯ ರುಚಿ ಮಾತ್ರ, ಅಬ್ಬ... ವರ್ಣನಾತೀತ! ಇನ್ನು, Red Algae ಪ್ರಭೇದಕ್ಕೆ ಸೇರಿದ ಸಮುದ್ರದ ಪಾಚಿಯನ್ನು ಒಣಗಿಸಿ ಸಂಸ್ಕರಿಸಿದ, ಕಡು ಹಸಿರಿನಿಂದ ಹಿಡಿದು ಕಡು ನೇರಳೆ ಅಥವಾ ಕಡುಗಪ್ಪಿನವರೆಗೆ ಬಣ್ಣವಿರುವ, ಕಾಗದದಷ್ಟು ತೆಳುವಾದ ಹಾಳೆಯೇ ''ನೋರಿ''.

ಸೂಶಿ ಅಕ್ಕಿಯಲ್ಲಿ ಮಾಡಿದ ಅಂಟಂಟಾದ ತಣ್ಣನೆಯ ಅನ್ನಕ್ಕೆ ವಿನೆಗರ್ ಬೆರೆಸಿ ಒಂದು ನೋರಿ ಹಾಳೆಯ ಮೇಲೆ ಸಮನಾಗಿ ಹರಡಿ, ಅದರ ಮೇಲೆ ಪದರ ಪದರವಾಗಿ ವಸಾಬಿ ಪುಡಿಯಿಂದ ಮಾಡಿದ ವಸಾಬಿ ಪೇಸ್ಟ್, ಹಸಿ ಈರುಳ್ಳಿ, ಕ್ಯಾರೆಟ್, ದೊಣ್ಣೆ ಮೆಣಸಿನಕಾಯಿ, ಸೌತೆಕಾಯಿ, ಶುಂಟಿಗಳ ಉದ್ದನೆಯ ಸೀಳುಗಳನ್ನು ಒತ್ತಿದಂತೆ ಹರಡಿ ನೋರಿ ಹಾಳೆಯನ್ನು ಚಾಪೆಯಂತೆ ಬಿಗಿಯಾಗಿ ಸುರುಳಿ ಸುತ್ತಿ ಫ್ರಿಜ್ಜಿನಲ್ಲಿ ಇರಿಸಬೇಕು. ಅದು ಚೆನ್ನಾಗಿ ತಣ್ಣಗಾದ ನಂತರ ತೆಗೆದು ಚೂಪಾದ ಚಾಕುವಿನಲ್ಲಿ ಆ ಸುರುಳಿಯನ್ನು ಸುಮಾರು ಒಂದಿಂಚು ದಪ್ಪದ ಬಿಲ್ಲೆಯಂಥಾ ತುಂಡುಗಳಾಗಿ ಕತ್ತರಿಸಬೇಕು. ಚಾಪ್ ಸ್ಟಿಕ್ಕಿನಲ್ಲಿ ಒಂದೊಂದೂ ತುಂಡನ್ನೂ ಹಗುರವಾಗಿ ಎತ್ತಿ ಪುಟ್ಟ ಪುಟ್ಟ ಬಟ್ಟಲುಗಳಲ್ಲಿ ಇಟ್ಟಿರುವ ನೀರಿನಂತಿರುವ – ಎಳ್ಳೆಣ್ಣೆ, ವಿನೆಗರ್ ಬೆರೆತ ವಸಾಬಿ ಸಾಸ್, ಸೋಯಾ ಸಾಸ್, ಮತ್ತು ಶುಂಟಿ ಸಾಸಿನಲ್ಲಿ ಮುಳುಗಿಸಿ, ಎತ್ತಿ ಬಾಯಿಗಿಟ್ಟುಕೊಳ್ಳಬೇಕು!

ಆಗ, ನಾಸಾಗ್ರದಿಂದ ಹಿಡಿದು ಬ್ರಹ್ಮರಂಧ್ರಕ್ಕೆ ಕ್ಷಣಾರ್ಧದಲ್ಲಿ ಏರುವ ಅನುಭವ ಅಂದರೆ ಏನು ಅನ್ನುವ – ಬಹುಶಃ ಯಾವ ಕ್ರಿಯಾಯೋಗ – ಪ್ರಾಣಾಯಾಮಗಳೂ ವಿವರಿಸಿ ತಿಳಿಸಲು ಅಸಾಧ್ಯವಾದ – ಒಂದು ಅಪೂರ್ವವಾದ ಅನುಭವ ನಿಮ್ಮದಾಗತ್ತೆ ನೋಡಿ! ನಾನು ನಿಜವಾಗಲೂ ಅನುಭವಿಸಿದ್ದನ್ನ ಹೇಳ್ತಿದ್ದೀನಿ, ತಮಾಷೆ–ಗಿಮಾಷೆ ಮಾಡ್ತಿದ್ದೀನಿಂತನ್ಕೊಂಡೀರಾ ಸದ್ಯ. ವಸಾಬಿಯ ತೀಕ್ಷ್ಣತೆಯ ಮಹಿಮೆ ಅಂತಿಂಥದ್ದಲ್ಲ! ಅಲ್ಲದೇ, ನಾಜೂಕಾದ ಈ ಸೂಶಿಯನ್ನು ಚಾಪ್ ಸ್ಟಿಕ್ಕುಗಳನ್ನು ಬಳಸಿ ಅದು ಒಡೆಯದಂತೆ ನಾಜೂಕಾಗಿ ತಿನ್ನುವುದೂ ಒಂದು ಸುಸ್ಸಂಸ್ಕೃತ ಲಕ್ಷಣ ಬೇರೆ!

ಕೊನೆಯದಾಗಿ ಉಪ್ಪು, ಹುಳಿ, ಖಾರ, ಸಿಹಿ ಈ ಐದೂ ಅಂಶಗಳ ಹದವಾದ ಮಿಶ್ರಣವನ್ನು ತಮ್ಮೆಲ್ಲಾ ಅಡಿಗೆಗಳಲ್ಲೂ ಬಳಸಿ ಅಪ್ರತಿಮ ಪಾಕಪ್ರಾವೀಣ್ಯತೆಯನ್ನು ಹೊಂದಿದ್ದಾರೆಂಬ ಜಗದ್ವಿಖ್ಯಾತರಾದ ಥಾಯ್ಲ್ಯಾಂಡಿಗರ ಅಕ್ಕಿಯ ಬಳಕೆಯ ಬಗ್ಗೆ ನಿಮಗೆ ಹೇಳಲೇಬೇಕು. ಯಾವಾಗಲೂ ''ಹೆವೆನ್ಲಿ ಪೈನ್ಆಪಲ್ ಫ್ರೈಡ್‌ರೈಸ್''' ಎಂದೇ ಕರೆಸಿಕೊಳ್ಳುವ ಈ ಖಾದ್ಯ ಹೀಗಿದೆ, ಪರಾಂಬರಿಸಿ!

ವಿಶೇಷವಾಗಿ ಕೆಲವಾರು ದಿನಗಳಷ್ಟು ಹಳತಾದ ಜಾಸ್ಮಿನ್ ರೈಸಿನ ಅನ್ನವನ್ನು (ಎತ್ಕೋತಾನೇ ಎಡವಿದೆ ಅಂದ್ರಾ? ನಾನೇನ್ ಮಾಡ್ಲಿ, ಸತ್ಯವಾಗ್ಲೂ ಅವರ ರೆಸಿಪಿಯಲ್ಲಿ ಹೇಳುವ ಪ್ರಿಫರೆನ್ಸ್ ಆ ರೀತಿಯಿದೆ! ಅದೇನೇ ಇರ್ಲಿ, ನಮ್ಮ ಹೋಟೆಲಿನ ಮಾಲೀಕರುಗಳಿಗಂತೂ ಅದು ಒಂದು ಶುಭ ವಾರ್ತೆಯೇ ಅಲ್ವೇ?) – ಸ್ವಲ್ಪ ನೀರು, ತೆಂಗಿನ ಹಾಲು ಮತ್ತು ಸೋಯಾ ಸಾಸಿನ ಜೊತೆ ಪೈನಾಪಲ್ ಹೋಳುಗಳು, ಸಣ್ಣಗೆ ಹೆಚ್ಚಿದ ಈರುಳ್ಳಿ, ಬೆಳ್ಳುಳ್ಳಿ, ಹಸಿಮೆಣಸಿನಕಾಯಿ ಅಥವಾ ಒಣ ಮೆಣಸಿನಕಾಯಿನ ಚಕ್ಕೆಯಂಥಾ ಪುಡಿ, ಸ್ವಲ್ಪ ಸಕ್ಕರೆ, ಬಟಾಣಿ, ಕ್ಯಾರೆಟ್ ತುರಿ, ದ್ರಾಕ್ಷಿ, ಗೋಡಂಬಿ, ಲವಂಗದ ಪುಡಿ ಮತ್ತು ಒಂದು ವಿಧದ ಥಾಯ್ ಸಾಂಬಾರ್ ಪುಡಿ ಈ ಎಲ್ಲವನ್ನೂ ಬೆರೆಸಿ ಕುದಿಸಿದ ಮಿಶ್ರಣಕ್ಕೆ, ಕೊಟ್ಟ ಕೊನೆಯಲ್ಲಿ ಒಂದು ಕೋಳಿ ಮೊಟ್ಟೆಯನ್ನು ಒಡೆದು ಅದರ ಮೇಲೆ ಸುರಿದು ಎಲ್ಲವನ್ನೂ ಸ್ವಲ್ಪವೇ ಸ್ವಲ್ಪ ಪುನಃ ಕುದಿಸಿದರೆ, ನಿಮ್ಮ ''ಹೆವೆನ್ಲಿ ಪೈನ್‌ಆಪಲ್ ಫ್ರೈಡ್ ರೈಸ್'' ರೆಡಿ!

ಅಂದಹಾಗೆ, ಇಂದು ಸಿಸ್ಟರ್ ಬರ್ನಾಡ್ ಇದ್ದಾರೋ ಇಲ್ಲವೋ ಎಲ್ಲಿದ್ದಾರೋ ಏನೋ ಒಂದೂ ತಿಳೀದು. ಆದರೆ, ಒಂದು ಸಮಯ ಆಕೆ ಇದ್ದುಗಿದ್ದು, ಅಂದಿನ ಈ ಅಧಿಕಪ್ರಸಂಗಿ, ಸಮಾಜಶಾಸ್ತ್ರ ಅನಾಸಕ್ತ ಶಿಷ್ಯೆಯ ಇಂದಿನ ಈ ಆಸಕ್ತಿ ನೋಡಿದ್ದಿದ್ದರೆ, ಅವಳ ಮೇಲಿನ ರೋಷ, ವ್ಯಂಗ್ಯ ಒಂದಷ್ಟಾದ್ರೂ ಕಡಿಮೆಯಾಗ್ತಿತ್ತು ಅನ್ನೋ ಭರವಸೆ ನಂದು!

---

## ಸಮಸ್ಯೆಗೆ ಉತ್ತರ

ಶ್ರೀ ಸುಬ್ಬರಾಯಾಚಾರ್ಯರು ಮೈಸೂರಿನಲ್ಲಿ ಡಾ. ಪ್ರಭುಶಂಕರ ಅವರಿಗೆ ಗುರುಗಳು. ಒಂದು ದಿನ ಅವರು ಪ್ರಭುಶಂಕರ ಅವರೊಡನೆ ನೋಡಿ, ಶ್ರೀಮತಿ ಕಾಮೇಶ್ವರಮ್ಮ ಕುಪ್ಪುಸ್ವಾಮಿ ಅವರಿಗೆ ಇಬ್ಬರು ಹೆಣ್ಣುಮಕ್ಕಳು ಒಬ್ಬಳಿಗೆ 30 ವರ್ಷ ಇನ್ನೊಬ್ಬಳಿಗೆ 25 ವರ್ಷ ಇಬ್ಬರಿಗೂ ಮದುವೆಯಾಗಿಲ್ಲ ಅಂತ ಕೊರಗುತ್ತಿದ್ದಾರೆ. ಈಗ ನಾವು ಏನಾದರೂ ಮಾಡಬೇಕಲ್ಲ ಅಂದಾಗ ಪ್ರಭುಶಂಕರ ಅವರು ಥಟ್ಟನೆ ಅದಕ್ಕೇನು ಗುರುಗಳೇ 30 ವಯಸ್ಸಿನವಳನ್ನು ನೀವು ಮದುವೆಯಾಗಿ, 25 ವಯಸ್ಸಿನವಳನ್ನು ನಾನು ಮದುವೆ ಆಗುತ್ತೇನೆ ಅಂತ ಪ್ರಭುಶಂಕರ ಅಂದಾಗ ಸುಬ್ಬರಾಯಾಚಾರ್ಯರು ಪಕ್ಕೆ ಹಿಡಿದುಕೊಂಡು ನಕ್ಕಿದ್ದೇ ನಕ್ಕದ್ದು.

# ಆಸ್ಪತ್ರೆಯಲ್ಲಿ

**- ಡಾ|| ಓಂ ಪ್ರಕಾಶ್**

ಹಿಂದೆ ನಂ ಆಸ್ಪತ್ರೇಲಿ ನಡೆದ ಸಂಗತಿಗಳಿಗೆ (ಸ್ವಲ್ಪ) ಉಪ್ಪು ಖಾರ ಹಾಕಿ ಬರೀತಿದ್ದೆ. ಅದು ಯಾವಾಗ ಅಂತ ಮರೆತುಹೋಗಿದೆ. ಅಂದ ಹಾಗೆ ಅಮೆರಿಕಾದಲ್ಲಿ ಜ್ಞಾಪಕಶಕ್ತಿ ಜಾಸ್ತಿ ಮಾಡುಕ್ಕೆ ಒಂದು ಮಾತ್ರೆ ತಯಾರು ಮಾಡ್ತಿದಾರಂತೆ. ಅದನ್ನ ತೊಗೊಂಡರೆ ಒಂದು ವರ್ಷದಲ್ಲಿ ಆಗಿರೋದೆಲ್ಲಾ ನೆನಪಿನಲ್ಲಿ ಇರುತ್ತದಂತೆ. ನನಗೆ ಇದರಿಂದ ಯಾವ ಪ್ರಯೋಜನವೂ ಆಗೋಹಾಗೆ ಕಾಣುಲ್ಲ. ಹಳೇ ಜೋಕುಗಳೇ ಸ್ಪಷ್ಟವಾಗಿ ನೆನಪಿನಲ್ಲಿ ಉಳಿದರೆ ಗೆಳೆಯರ ಜೀವನ ದುರ್ಭರವಾಗುತ್ತೆ ಅನ್ನಿಸುತ್ತೆ. ಅಪರಂಜಿ ಸಂಪಾದಕರನ್ನ ಕೇಳಬೇಕು ಇದರ ವಿಷಯ.

★★★

ಮೊನ್ನೆ ಆಸ್ಪತ್ರೇಲಿ ಔಟ್‌ಪೇಷಂಟ್ ವಿಭಾಗದಲ್ಲಿ ಕುಳಿತಿದ್ದೆ. ಒಬ್ಬ ಸುಮಾರು ಮೂವತ್ತು ವರ್ಷದ ಯುವಕ ಬಂದ. ನನ್ನನ್ನೇ ದುರುಗುಟ್ಟಿ ನೋಡುತ್ತಾ ''ಓಂ ಪ್ರಕಾಶ್ ಅಂದ್ರೆ ನೀವೇ ಏನು?'' ಅಂತ ಕೇಳಿದ. ನನಗೆ ಏನೋ ಅವ್ಯಕ್ತ ಭಯ.

ಮೆಲ್ಲಗೆ ''ಹೌದು'' ಅಂದೆ. ನನ್ನ ಜೊತೆ ಇದ್ದ ಹೌಸ್ ಸರ್ಜನ್ ಕುತೂಹಲದಿಂದ ನೋಡುತ್ತಿದ್ದ. ಆಗಂತುಕ, ''ಕೊರಿಯರ್. ಇಲ್ಲಿ ಸಹಿ ಹಾಕಿ'' ಅಂದಾಗ, ಸುತ್ತಲಿದ್ದವರೆಲ್ಲಾ - ಯಾಕೋ - ಘೊಳ್ಳೆಂದು ನಕ್ಕರು.

★★★

ಆತನಿಗೆ ಡಯಾಬಿಟೀಸ್. ಸಕ್ಕರೆ ಮಟ್ಟ ತೀರ ಏರಿದೆ. ಅಡ್ಮಿಟ್ ಆಗಲೇ ಬೇಕು ಅಂತ ವಾರ್ಡ್‌ಗೆ ಸೇರಿಸಿದ್ದಾಯಿತು. ನನ್ನ ಸಹೋದ್ಯೋಗಿ ವೈದ್ಯ ಚಿಕಿತ್ಸೆ ಮಾಡುತ್ತಿದ್ದರು. ಇನ್ಸುಲಿನ್ ಕೊಟ್ಟರೂ ಸಕ್ಕರೆ ಮಟ್ಟದಲ್ಲಿ ಇಳಿತ ಕಾಣಲಿಲ್ಲ. ಮೂರನೆಯ ದಿನ ರೋಗಿ ''ಮನೆಗೆ ಕಳಿಸಿ'' ಅಂತ ಹಠ ಹಿಡಿದ. ವೈದ್ಯರೆಲ್ಲಾ ಬುದ್ಧಿ ಹೇಳಿದರೂ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಬೇಸತ್ತು ವೈದ್ಯರು ''ನೋಡಿ, ನಿಮ್ಮ ಸಕ್ಕರೆ ಮಟ್ಟ 390 ಇದೆ. ಇಷ್ಟು ಇಟ್ಟುಕೊಂಡು ಮನೇಗೆ ಹೇಗೆ ಹೋಗ್ತೀರಿ?'' ಅಂತ ಕೇಳಿದ್ದಕ್ಕೆ ರೋಗಿ, ''ಆಟೋದಲ್ಲಿ ಹೋಗ್ತೀನಿ'' ಅಂದಾಗ ನಾನು ಮೂಕನಾದೆ.

★★★

# ಕೊರವಂಜಿ ಅಪರಂಜಿ ಟ್ರಸ್ಟ್

ಆಯೋಜಿಸಿರುವ

# ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆ ಲೇಖನ ಸ್ಪರ್ಧೆ 2012

**ನಾಡಿನ ಪ್ರಖ್ಯಾತ ನಗೆಬರಹಗಾರ ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆ ಲೇಖನ ಸ್ಪರ್ಧೆಯನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಆಯೋಜಿಸಿದೆ. ಸ್ಪರ್ಧೆಯ ನಿಯಮಗಳು ಹೀಗಿವೆ.**

1. ಒಬ್ಬರು ಒಂದು ಲೇಖನವನ್ನು ಮಾತ್ರ ಕಳುಹಿಸಬೇಕು
2. ಲೇಖನ ಫುಲ್‌ಸ್ಕೇಪ್ ಹಾಳೆಯಲ್ಲಿ 3 ರಿಂದ 4 ಪುಟಗಳಿರಬೇಕು.
3. ಉತ್ತಮವಾದ ನಗೆಲೇಖನಕ್ಕೆ ಪ್ರಥಮ (ರೂ.1000/-), ದ್ವಿತೀಯ (ರೂ.750/-) ಹಾಗೂ ಮೂರನೇ (ರೂ.500/-) ಬಹುಮಾನಗಳಿರುತ್ತವೆ.
4. ಬಹುಮಾನಿತ ಲೇಖನಗಳನ್ನು ಅಪರಂಜಿ ವಿಶೇಷಾಂಕದಲ್ಲಿ ಪ್ರಕಟಿಸಲಾಗುವುದು.
5. ತೀರ್ಪುಗಾರರ ಮೆಚ್ಚುಗೆ ಪಡೆದ ನಗೆ ಲೇಖನಗಳನ್ನು ಅಪರಂಜಿಯಲ್ಲಿ ಕ್ರಮೇಣ ಬಳಸಿಕೊಳ್ಳಲಾಗುವುದು.
6. ಸ್ಪರ್ಧೆಗೆ ಯಾವುದೇ ಪ್ರವೇಶ ಶುಲ್ಕವಿಲ್ಲ, ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ ಹಾಗೂ ಲೇಖನಗಳನ್ನು ವಾಪಸ್ ಕಳುಹಿಸಲಾಗುವುದಿಲ್ಲ.
7. ಲೇಖನಗಳನ್ನು : ಬೇಲೂರು ರಾಮಮೂರ್ತಿ, ಉಪಸಂಪಾದಕರು, ಅಪರಂಜಿ, 'ಸುಕೇಶವ' ನಂ. 96, 2ನೇ ಅಡ್ಡ ರಸ್ತೆ, 20ನೇ ಮುಖ್ಯ ರಸ್ತೆ, ಬಿ.ಟಿ.ಎಂ. ಬಡಾವಣೆ 1ನೇ ಹಂತ, ಬೆಂಗಳೂರು - 560 068 ಈ ವಿಳಾಸಕ್ಕೆ ಕಳುಹಿಸಬೇಕು.
8. ಲೇಖನಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 31.10.2012.

# ರೋಟಿ ಕಪಡಾ ಔರ್ ಈಗ ಮೊಬೈಲ್

- ಆನಂದ

**'ಹರ್** ಹಾತ್ ಮೆ ಫೋನ್' **ಯೋಜನೆಯಡಿ ಬಡತನ ರೇಖೆಯ ಕೆಳಗಿರುವವರಿಗೆ - ಅಂದರೆ ಬಿಪಿಎಲ್ ಕಾರ್ಡ್ ಹೊಂದಿರುವ ಆಮ್ ಜನತಾಗೆ - ಕೇಂದ್ರ ಸರ್ಕಾರ ಮೊಬೈಲ್ ಫೋನ್ ಕೊಡಲಿದೆ ಎಂಬ ಸುದ್ದಿ ಕೇಳಿ...**

ಸೋನಿಯಾ ಗಾಂಧಿ ಅವರನ್ನು ವಿಚಾರಿಸಿದಾಗ ಬಂದ ಪ್ರತಿಕ್ರಿಯೆ: ಖಾನಾ ಇಲ್ಲದಿದ್ದರೆ ಏನಂತೆ ಟಾಕ್ ಟೈಂ ಸಿಗುತ್ತಲ್ಲ..

'ವಾಟ್ ಅನ್ ಐಡಿಯಾ ಸರ್ ಜಿ' ಎಂದು ಉದ್ಗರಿಸಿದ್ದು ಯಾರೆಂದು ಗೊತ್ತೇ ಇದೆ. ಅಭಿಷೇಕ್ ಬಚ್ಚನ್, ಐಶ್ವರ್ಯ ರೈ ಅವರ ಪತಿ.

'ನನ್ನ ಬಳಿ ಈಗಾಗಲೇ ಒಂದು ಆಂಡ್ರಾಯ್ಡ್ ಫೋನ್ ಇದೆ. ಐ ಫೋನ್ ಅಥವಾ ಐಪ್ಯಾಡ್ ಕೊಟ್ಟರೆ ಚಲೋ ಇರತ್ರಿ' ಎಂದಿದ್ದು ಬಿಪಿಎಲ್ ಕಾರ್ಡ್ ಹೊಂದಿರುವ ಬಸಪ್ಪ ಗುಳೇದಗುಡ್ಡ. ಅವರವರ ಚಿಂತಿ ಅವರವರಿಗೆ. ಒಂದು ಚಲೋ ರಿಂಗ್ ಟೋನ್‌ಗೂ ವ್ಯವಸ್ಥೆ ಆಗಬೇಕು ಎಂದು ಬಾಳಪ್ಪ ಲಾಳಪ್ಪ ಕದ್ರಗುಪ್ಪ ಹೇಳಿದರು.

'ಐಡಿಯಾ ಅಚ್ಚಾ ಹೈ.. ರೇಷನ್ ಅಂಗಡೀಲಿ ಕರೆನ್ಸಿ ಕೊಡುವ ವ್ಯವಸ್ಥೆ ಸಹ ಆಗಬೇಕು' ಎಂದಿದ್ದು ಭಟ್ಕಳದ ಇಫ್ರಾನ್. ಇವರ ಬಳಿ ಸಹ ಬಿಪಿಎಲ್ ಕಾರ್ಡ್ ಇದೆ.

'ರಾಹುಲ್ ಐಡಿಯಾ ಆಗಿದ್ದರೆ ಒಂದು ಅದ್ಭುತ ಯೋಜನೆ' ಎಂದರು ಮಣಿ ಶಂಕರ್ ಅಯ್ಯರ್.

'ನಮ್ಮ ಮುಂದಿನ ಯೋಜನೆ ರಾಹುಲ್ ಗಾಂಧಿ ಉಚಿತ ಪಿಜ್ಜಾ ಯೋಜನೆ. ಇದರಡಿ ಬಿಪಿಎಲ್ ಕಾರ್ಡ್ ಹೊಂದಿರುವವರು ಈ ಸರ್ಕಾರಿ ಮೊಬೈಲ್‌ಗಳನ್ನು ಬಳಸಿ ಪಿಜ್ಜಾ ತರಿಸಲು ಆರ್ಡರ್ ಕೊಡಬಹುದು' ಎಂದರು ದಿಗ್ವಿಜಯ ಸಿಂಗ್.

'ಇದು ಬಡತನ ನಿರ್ಮೂಲನೆಯತ್ತ ಒಂದು ದಿಟ್ಟ ಹೆಜ್ಜೆ. ಏಕೆಂದರೆ ಈ 'ಹರ್ ಹಾತ್ ಮೆ ಫೋನ್' ಯೋಜನೆಯ ಫೋನ್ ಬಳಸಿ ಕನ್ನಡದ ಕೋಟ್ಯಾಧಿಪತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀಮಂತರಾಗಲು ಸಾಧ್ಯ' ಎಂದು ಕೆಪಿಸಿಸಿ ಒಂದು ಹೇಳಿಕೆಯಲ್ಲಿ ಬೀಗಿತು.

'ಈ ಯೋಜನೆಯಡಿ ಆಗಲಿರುವ ಹಗರಣದ ಬಗ್ಗೆ ದಾಖಲೆಗಳು ಈಗಾಗಲೆ ನನ್ನ ಬಳಿ ಇದೆ. ಅದನ್ನು ಸೂಕ್ತ ಸಮಯದಲ್ಲಿ ಬಹಿರಂಗ ಪಡಿಸಲಿದ್ದೇನೆ' ಎಂದರು ಕುಮಾರಸ್ವಾಮಿ.

'ಇಂತಹ ಬ್ಲಾಕ್ ಮೇಲ್‌ಗಳಿಗೆ ನಮ್ಮ ಪಕ್ಷ ಹೆದರುವುದಿಲ್ಲ ಎಂದು ಹೇಳಿ ಎಂದು ಮೇಡಂ ನಮಗೆ ತಾಕೀತು ಮಾಡಿದ್ದಾರೆ. ಅದರಿಂದ ಹೇಳುತ್ತಿದ್ದೇನೆ' ಎಂದರು ಡಿ.ಕೆ. ಶಿವಕುಮಾರ್.

'ನಾವೇ ಇದನ್ನು ಮಾಡಬೇಕೆಂದಿದ್ದವು. ಆದರೆ ಆಗಲಿಲ್ಲ, ಮುಂದಿನ ಬಾರಿ ನಾವು ಅಧಿಕಾರಕ್ಕೆ ಬಂದರೆ ಮಾಡುತ್ತೇವೆ. ಆದರೆ ಈ ಕಾಂಗ್ರೆಸ್ ಯೋಜನೆಯಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಆಗಲಿದೆ' ಎಂದಿತು ಭಾಜಪ.

'ಇದು ಅಗತ್ಯವಿತ್ತೆ? ನೋಡಿ, ನನ್ನ ಬಳಿ ಮೊಬೈಲ್ ಫೋನೇ ಇಲ್ಲ. ಈ ಯೋಜನೆಯನ್ನು ಪ್ರತಿಭಟಿಸಿ ನಾನು ಉಪವಾಸ ಮಾಡಲಿದ್ದೇನೆ. ಈ ಫಾಸ್ಟ್ ನಿರ್ದಿಷ್ಟವೋ ಅನಿರ್ದಿಷ್ಟವೋ ಎಂಬುದನ್ನು ಎಸ್‌ಎಂಎಸ್ ಮೂಲಕ ಜನ ಕೇಜ್ರಿವಾಲ್ ಅವರಿಗೆ ತಿಳಿಸಲಿ' ಎಂದರು ಭಾರತದ ಫಾ(ಸ್ಟೆ)ಸ್ಟ್ ಮ್ಯಾನ್ ಅಣ್ಣಾ ಹಜಾರೆ. ಬಾಬಾ ರಾಮದೇವ್ ಅವರ 3 ದಿನಗಳ ಪ್ರತಿಭಟನಾ ಉಪವಾಸ ಈಗಾಗಲೇ ಆರಂಭವಾಗಿದೆ.

ಈ ಮೊಬೈಲ್‌ಗಳ ರಿಪೇರಿಗೆಂದೇ ಸರ್ಕಾರ ಒಂದು ವಿಶೇಷ ಇಲಾಖೆ ಆರಂಭಿಸಬೇಕು. ಅದಕ್ಕೆ ಬೇಕಾದ ಸಿಬ್ಬಂದಿ ನೇಮಕದಲ್ಲಿ ಮೀಸಲಾತಿ, ಒಳಮೀಸಲಾತಿ ಇರಬೇಕು. ಇಲ್ಲದಿದ್ದರೆ ಉಗ್ರ ಪ್ರತಿಭಟನೆ ಮಾಡಲು ಸಿದ್ಧರಿರುವವರೆಲ್ಲ ಮಿಸ್ಡ್ ಕಾಲ್ ಮೂಲಕ ತಿಳಿಸಲಿ ಎಂದು ಅಖಿಲ ಕರ್ನಾಟಕ ಮೊಬೈಲ್ ಚಳವಳಿ ಸಮಿತಿಯ ಸಂಚಾಲಕರು ತಿಳಿಸಿದ್ದಾರೆ.

ಈ ಮೊಬೈಲ್‌ಗಳ ಮೂಲಕ ತಮ್ಮ ಸುತ್ತಮುತ್ತಲಿನ 'ಸುಂದರ' ಪರಿಸರದ ಚಿತ್ರಗಳನ್ನು ನನಗೆ ಕಳಿಸಬಹುದು ಎಂದು 'ಸ್ಲಮ್ ಡಾಗ್ ಮಿಲಿಯನೇರ್ 2' ಚಿತ್ರ ತೆಗೆಯಲಿರುವ ಡ್ಯಾನಿ ಬಾಯ್ಲ್ ಪ್ರಕಟಣೆ ನೀಡಿದ್ದಾರೆ.

ಈ 7000 ಕೋಟಿ ರೂ. ಯೋಜನೆಯ ಕಂಟ್ರಾಕ್ಟ್ ಹಿಡಿಯಲು ಈಗಾಗಲೇ ಏಜೆಂಟರು ಸೂಟ್‌ಕೇಸ್ ಸಮೇತ ಸೆಕ್ರೆಟೇರಿಯಟ್ ಬಳಿ ಸುತ್ತಾಡುತ್ತಿದ್ದಾರೆ ಎಂದು ಗುಪ್ತಚರ ವರದಿಗಳು ಹೇಳಿವೆ.

ಈ ಯೋಜನೆಗೆ ತಮ್ಮ ಪ್ರತಿಭಟನೆಯನ್ನು ವಿನೂತನವಾಗಿ ಸೂಚಿಸಲು ವಾಟಾಳ್ ನಾಗರಾಜ್ ಐಡಿಯಾಗಳಿಗಾಗಿ ಸಲಹೆ ಕೇಳಿದ್ದಾರೆ. ಅವರಿಗೆ ಫೋನ್ ಮಾಡಿ ತಿಳಿಸಬಹುದು.

*'ದಿ ಅನ್‌ರಿಯಲ್ ಟೈಂಸ್'ನ ಲೇಖನ ಆಧರಿಸಿ ಬರೆದಿದ್ದು*

✵

## ಬೋರ್ಡಿಗೆ ಇಲ್ಲದೋರು

ಪ್ರೊ. ಬಿ.ಜಿ.ಎಲ್. ಸ್ವಾಮಿಯವರು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರಿನ್ಸಿಪಲ್ ಆಗಿದ್ದಾಗ ಅವರ ಕೋಣೆಯ ಬಾಗಿಲಿಗೆ ಹೀಗೆ ಬೋರ್ಡ್ ಹಾಕಿತ್ತು.

ಕಲಮ್ಮೈ ಪೇರಾಶಿಯಲ್ ಪಿ.ಚಿ. ಇಲ ಚಾಮಿ ಪಯಿರ್ ತುರೈ – ಇದರ ಇಂಗ್ಲಿಷ್ ಭಾಷಾಂತರ ಹೀಗಿದೆ
Chief Professor, P.Chi.Ila Chami Crop Department.

# ಅಂದು ಇಂದು

**- ರಮ್ಯ**

## ಅಂದು:

ಮಹಾರಾಜ: ರೈತ ಬಾಂಧವರೇ! ನಾವು ಮತ್ತು ನಮ್ಮ ಮಂತ್ರಿ ನಿಮ್ಮನ್ನೆಲ್ಲಾ ನೋಡಿ ನಿಮ್ಮ ಸುಖ-ದುಃಖ ವಿಚಾರಿಸಲು ಬಂದಿದ್ದೇವೆ. ನೀವು ಮತ್ತು ಮನೆಯಲ್ಲಿರುವವರು ಕುಶಲವೇ?

ರೈತ: ಮಹಾಪ್ರಭುಗಳು ಆಗಾಗ್ಗೆ ನಮ್ಮನ್ನು ಬಂದು ವಿಚಾರಿಸಿಕೊಂಡು ಹೋಗುವುದು ನಮ್ಮೆಲ್ಲರ ಸೌಭಾಗ್ಯವೇ ಸರಿ. ತಮ್ಮ ಅನುಗ್ರಹದಿಂದ ಮತ್ತು ದೇವರ ಕೃಪೆಯಿಂದ ನಾವೆಲ್ಲರೂ ಆರೋಗ್ಯ ಹಾಗೂ ಸಂತೋಷವಾಗಿದ್ದೇವೆ.

ಮ: ನಿಮಗೆ ಸಾಗುವಳಿ ಮಾಡುವುದಕ್ಕೆ ಬೇಕಾದ ಬೀಜಗಳು ಸಕಾಲಕ್ಕೆ ಸಿಗುತ್ತಿದೆಯೇ? ನಿಮ್ಮ ಹೊಲ ಗದ್ದೆಗಳಿಗೆ ನೀರು?

ರೈ: ಸರಿಯಾಗಿ ಸಿಗುವ ಹಾಗೆ ಮಂತ್ರಿಗಳು ವ್ಯವಸ್ಥೆ ಮಾಡಿದ್ದಾರೆ. ತಾವೆ ಖುದ್ದಾಗಿ ನಿಂತು ತೋಡಿಸಿದ ಕಾಲುವೆಗಳಲ್ಲಿ ನೀರು ಚೆನ್ನಾಗಿ ಹರಿದು ಬಂದು ಈ ವರ್ಷ ಬೆಳೆ ಚೆನ್ನಾಗಿ ಬರುವ ಆಶೆಯಿದೆ. ಕೊಳಗಳಲ್ಲಿ, ಬಾವಿಗಳಲ್ಲಿ ಕುಡಿಯುವ ನೀರು ಯಥೇಚ್ಚವಾಗಿ ತುಂಬಿ ನಿಂತಿದೆ ಪ್ರಭುಗಳೇ. ಕುಡಿಯುವ ನೀರಿಗೆ ತೊಂದರೆಯೇನಿಲ್ಲ.

ಮ: ಬಹಳ ಸಂತೋಷ! ನೀವು ಬೆಳೆಸಿದ ಧಾನ್ಯ, ತರಕಾರಿ ಹಣ್ಣು ಏನೂ ಹಾನಿಯಾಗದಂತೆ, ಹುಳ ಹುಪ್ಪಟೆಗಳು ತಿನ್ನದಂತೆ ನೋಡಿಕೊಳ್ಳಿ.

**ಸುಖ-ದುಃಖ ವಿಚಾರಿಸಲು ಬಂದರೆ ಹೀಗಾಗುವುದೆ?**

ರೈ: ಅದಕ್ಕೆ ಮಂತ್ರಿಗಳು ಈಗಾಗಲೇ ವ್ಯವಸ್ಥೆ ಮಾಡಿದ್ದಾರೆ ಪ್ರಭುಗಳೇ! ಔಷಧಿ ಹೊಡೆಯುವವರು ಬಂದು ನೋಡಿಕೊಂಡು ಹೋಗಿದ್ದಾರೆ.

ಮ: ನಿಮ್ಮ ಪಶು, ಪಕ್ಷಿಗಳ ಆರೋಗ್ಯ ಚೆನ್ನಾಗಿ ನೋಡಿಕೊಳ್ಳಿ. ಬೆಳೆಯುವ ಮಕ್ಕಳಿಗೆ ಹಾಲು ಅತ್ಯಗತ್ಯ.

ರೈ: ಅವುಗಳೆಲ್ಲವೂ ಆರೋಗ್ಯವಾಗಿದ್ದು ನಮ್ಮ ಮಕ್ಕಳೂ ಕ್ಷೇಮವಾಗಿದ್ದಾರೆ ಪ್ರಭು!

ಮ: ಎಲ್ಲವೂ ಕೇಳಿ ಸಂತೋಷವಾಯಿತು. ನಾವು ಮತ್ತೆ ಬರುತ್ತೇವೆ. ಏನಾದರೂ ಸಮಸ್ಯೆಗಳು ಬಂದರೆ ನಮಗೆ ತಿಳಿಸಿ. ನಾವು ಪರಿಹಾರ ಮಾಡಿಕೊಡುತ್ತೇವೆ.

ರೈ: ತಮ್ಮಂಥಹ ಮಹಾರಾಜರು ನಮ್ಮನ್ನು ನೋಡಿಕೊಳ್ಳುತ್ತಿರುವುದು ನಮ್ಮ ಸೌಭಾಗ್ಯವೇ ಸರಿ! ದೇವರು ತಮ್ಮನ್ನು ತಮ್ಮ ಕುಟುಂಬದವರನ್ನು ಸದಾ ಆರೋಗ್ಯದಿಂದಿಟ್ಟಿರಲಿ ಎಂದೆ ನಮ್ಮೆಲ್ಲರ ಪ್ರಾರ್ಥನೆ ಪ್ರಭುಗಳೇ!

## ಇಂದು:

ಪ್ರಧಾನ ಮಂತ್ರಿ: ರೈತ ಬಾಂಧವರೇ! ನಾನು ಮತ್ತು ನಮ್ಮ ಕೃಷಿ ಮಂತ್ರಿ ಶರದ್ ಪವಾರ್ ನಿಮ್ಮನ್ನೆಲ್ಲಾ ನೋಡಿ ನಿಮ್ಮ ಸುಖ-ದುಃಖ ವಿಚಾರಿಸಲು ಬಂದಿದ್ದೇವೆ. ನೀವು ಮತ್ತು ಮನೆಯಲ್ಲಿರುವವರು ಕುಶಲವೇ?

ರೈತ: ಕುಶಲ ಎಲ್ಲಿ ಬಂತು.. ಏನೋ ಬದುಕಿದ್ದೀವಿ... ಮಹಾರಾಷ್ಟ್ರದ ಹಾಗೇ ಇಲ್ಲೂ ಸೂಯಿಸೈಡ್ಗಳು ಆಗ್ತಿವೆ... ನಿಮ್ಮನ್ನು ನೋಡಿ ಬಹಳ ವರ್ಷಗಳೇ ಆಯಿತು. ನೀವು ಟಿವಿಯಲ್ಲೂ ಜಾಸ್ತಿ ಬರೋದಿಲ್ಲ. ಐಪಿಎಲ್ ನಡೆಯುವ ಟೈಮ್ನಲ್ಲಿ ಆಗಾಗ್ಗೆ ಕೃಷಿ ಮಂತ್ರಿಗಳು ಟಿವಿಯಲ್ಲಿ ಕಾಣಿಸಿಕೊಳ್ಳುತ್ತಾರೆ. ನೀವೇ ಬಂದಿರೋದು ನೋಡಿದ್ರೆ ಎಲೆಕ್ಷನ್ ಹತ್ತಿರ ಬಂತೂ ಅನ್ನುತ್ತೇ...

ಪ್ರ.ಮಂ: ಅಯ್ಯೋ! ಇಲ್ಲ.. ನಿಮ್ಮನ್ನು ನೋಡಿ ಸುಖ-ದುಃಖ ವಿಚಾರಿಸಿಕೊಂಡು ಹೋಗೋಣಾಂತಲೇ ಬಂದ್ವಿ.. ನೀವೇ ನಮ್ಮ ರಾಷ್ಟ್ರದ ಬೆನ್ನೆಲುಬಲ್ಲವೇ... ನಿಮಗೆ ಸಾಗುವಳಿ ಮಾಡುವುದಕ್ಕೆ ಬೇಕಾದ ಬೀಜಗಳು ಸಕಾಲಕ್ಕೆ ಸಿಗುತ್ತಿದೆಯೇ? ನಿಮ್ಮ ಹೊಲ ಗದ್ದೆಗಳಿಗೆ ಸರಿಯಾಗಿ ನೀರು ಬರುತ್ತಿದೆಯೇ?

ರೈ: ನಮ್ಮ ಬೆನ್ನು ಮೂಳೆ ಯಾವಾಗ್ಲೋ ಮುರಿದು ಹೋಗಿದೆ ಪ್ರಧಾನಿಯವರೇ. ಹೋದ ವರ್ಷ ನ್ಯಾಷನಲ್ ಸೀಡ್ಸ್ ಕಾರ್ಪೊರೇಷನ್ನವರು ತರಿಸಿ ಕೊಟ್ಟ ಬೀಜಗಳಲ್ಲಿ ಅರ್ಧಕ್ಕರ್ಧ ಹುಳತಿಂದು ಹೋಗಿದ್ದವು. ಅವುಗಳಿಂದ ಏನೂ ಪ್ರಯೋಜನವಾಗಲಿಲ್ಲ. ಈ ವರ್ಷ ಮುಂಗಾರು ಚೆನ್ನಾಗಿ ಬರತ್ತೇಂತ ಐಎಂಡಿ ಮುನ್ಸೂಚನೆ ಕೊಟ್ಟಾಗ್ನಿಂದ ಒಂದು ತೊಟ್ಟೂ ಮಳೆಯಾಗಿಲ್ಲ...

ಪ್ರ.ಮಂ: ಐ ಸೀ.. ಬೋರ್ವೆಲ್ ನೀರನ್ನು ಪಂಪ್ ಮಾಡಲು ವ್ಯವಸ್ಥೆ ಮಾಡಿತ್ತಲ್ಲಾ?

ರೈ: ನಾವು 3 ವರ್ಷದಿಂದ 3-ಫೇಸ್ ಪವರ್ ನೋಡೇ ಇಲ್ಲ. ಪವಾರ್ ಸಾಹೇಬ್ರು ದಿನಾ ಅವರ ಐಪಿಎಲ್, ಓಡಿಐ ಮ್ಯಾಚ್‌ಗಳಿಗೆ, ಸ್ಟೇಡಿಯಂನಲ್ಲಿ ಫ್ಲಡ್ ಲೈಟ್ ಉಪಯೋಗಿಸ್ತಾರೆ! ನಮ್ಮ ಹಳ್ಳಿಗಳಲ್ಲಿ ದಿನಕ್ಕೆ ಇಪ್ಪತ್ತು ಘಂಟೆ ಪವರ್ ಕಟ್....

ಪ್ರ.ಮಂ: ಅಯ್ಯೋ! ಅದಕ್ಕೆ ಸರಿಯಾದ ವ್ಯವಸ್ಥೆ ಮಾಡುತ್ತೇವೆ. ಕುಡಿಯುವ ನೀರು?

ರೈ: ಕೊಳವೆಲ್ಲಾ ಬತ್ತಿ ಹೋಗಿ/ಹೋಗಿಸಿ, ಡೆವೆಲಪರ್ಸ್ ಲೇಔಟ್ ಮಾಡಿ ಸೈಟ್ಗಳನ್ನ ಮಾರ್ತಾ ಇದಾರೆ...

ಪ್ರ.ಮಂ: ನಿಮಗೆಲ್ಲಾ ಮಹಾತ್ಮ ಗಾಂಧಿ ರೂರಲ್ ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಸ್ಕೀಮಿನಲ್ಲಿ ಕೆಲಸ ಏರ್ಪಾಡು ಮಾಡಿದೆಯಲ್ಲಾ. ಅಲ್ಲಿ ಕೆಲಸ ಸಿಕ್ಕಿರಬೇಕಲ್ಲಾ?

ರೈ: ಕೈ ತುಂಬಾ ಕೆಲಸ ಸಿಕ್ಕಿ ಮೈಮುರಿಯೋಷ್ಟು ದುಡಿದಿದ್ದಾಯಿತು. ಕೈಗೆ ದುಡ್ಡು ಇನ್ನೂ ಬಂದಿಲ್ಲ.. ಅದರಲ್ಲೂ ಅರ್ಧ ಸೂಪರ್‌ವೈಸರ್ಸ್‌ಗೆ ಹೋಗಿ ಮಿಕ್ಕಿದ್ದು ನಮ್ಮ ಕೈಗೆ ಬರುತ್ತೆ.

ಪ್ರ.ಮಂ: ಛೆ! ಛೆ! ಯಾಕೆ ಹೀಗಾಯ್ತು... ನಿಮಗೆ ಇನ್ನು ಯಾವ ರೀತಿ ಸಹಾಯ ಮಾಡಬಹುದು. ನನಗೂ ಪವಾರ್ ಅವರಿಗೂ ತಿಳಿಸಿ.

ರೈ: ಪವಾರ ಅವ್ರು ಕ್ರಿಕೆಟ್ನಲ್ಲಿ ಒಂದು ಪವಾಡವನ್ನೇ ಮಾಡಿದ್ದಾರೆ. ನಾವೆಲ್ಲಾ ಈಗ ಬಿಪಿಎಲ್‌ನಲ್ಲಿ ಮಾಂಟೆಕ್ ಅಹ್ಲುವಾಲಿಯ ಸೂತ್ರಿ ಪ್ರಕಾರ ದಿನಕ್ಕೆ 32 ರೂಪಾಯೀಲಿ ಬದುಕ್ತಿದೀವಿ... ನಮ್ಮ ಹುಡುಗರನ್ನೂ ಐಪಿಎಲ್ ಕ್ರಿಕೆಟ್ಗೆ ತೊಗೊಂಡು ನಮಗೆಲ್ಲಾ ತಲಾ ಎರಡೆರಡು ಕೋಟಿ ರೂಪಾಯಿ ಕೊಡಿಸಿದರೆ ನಿಮಗೆ ಪುಣ್ಯ ಬರುತ್ತೆ. ನಮ್ಮುಡುಗ್ರು ಕ್ರಿಕೆಟ್ ಜೊತೆಗೆ ಫೀಲ್ಡ್ ಅನ್ನು ಗುಡಿಸಿ, ಸಾರಿಸ್ತಾರೆ. ಪಿಚ್ಗೆ ನೀವು ಹೇಳಿದಷ್ಟು ನೀರು ಹಾಕ್ತಾರೆ.. ಈ ಮಧ್ಯೆ ಅವ್ರೂ ಡ್ಯಾನ್ಸ್, ಡಿಸ್ಕೋ, ಪಿಸ್ಕೋ ಏನೇನೋ ಕಲ್ತೀದಾರೆ... ನೀವು ಇದನ್ನು ಖಂಡಿತಾ ಮಾಡ್ಕೊಡ್ಬೇಕು... ರೈತರಿಗೆ ನೀವು ಮಾಡುವ ದೊಡ್ಡ ಉಪಕಾರವಿದು..

ಪವಾರ್: ಪ್ರಧಾನಿಗಳೇ! ಮುಂದಿನ ಮೀಟಿಂಗೆ ಲೇಟಾಯ್ತು! ಹೋಗೋಣ ಬನ್ನಿ!

✵

---

## ಇನ್‌ಕ್ರಿಮೆಂಟೂ ಲೈಫ್ ಸರ್ಟಿಫಿಕೇಟೂ

ಬಿ.ಜಿ.ಎಲ್. ಸ್ವಾಮಿಯವರಿಗೆ ಕಾರಣಾಂತರಗಳಿಂದ ಎಂಟು ವರ್ಷ ಇನ್‌ಕ್ರಿಮೆಂಟು ನಿಂತುಹೋಗಿತ್ತು. ಹೆಡ್ ಕ್ಲರ್ಕ್ ಮಾಡಿದ ತಪ್ಪಿಗೆ ಸ್ವಾಮಿಯವರು ಮ್ಯಾಜಿಸ್ಟ್ರೇಟರಿಂದ ಲೈಫ್ ಸರ್ಟಿಫಿಕೇಟ್ ತರೋದು ಅನಿವಾರ್ಯವಾಯಿತು. ಅವತ್ತು ಸ್ವಾಮಿಯವರು ಮ್ಯಾಜಿಸ್ಟ್ರೇಟ್ ಬಳಿ ಹೋದಾಗ ಅವರ ಬಳಿ ಒಂದಿಷ್ಟು ಜನ ಹುಚ್ಚರನ್ನು ಕರೆದುಕೊಂಡು ಬಂದಿದ್ದರು. ಮ್ಯಾಜಿಸ್ಟ್ರೇಟರು ಹುಚ್ಚರಿಗೆ ಕೆಲವು ಪ್ರಶ್ನೆಗಳನ್ನು ಕೇಳಿ ಅವರು ಹುಚ್ಚರು ಅಂತ ಖಾತರಿಯಾದ ಮೇಲೆ ಅವರನ್ನು ಹುಚ್ಚಾಸ್ಪತ್ರೆಗೆ ಸೇರಿಸುತ್ತಿದ್ದರು. ಪಾಪ ಸ್ವಾಮಿಯವರು ಅವತ್ತು ಮ್ಯಾಜಿಸ್ಟ್ರೇಟರನ್ನು ನೋಡಲು ಹೋದಾಗ ಅವರನ್ನೂ ಈ ಹುಚ್ಚರ ಸಾಲಿನಲ್ಲೇ ಕೂರಿಸಬೇಕೇ? ಸ್ವಾಮಿಯವರ ಸರದಿ ಬಂದಾಗ ಸ್ವಾಮಿಯವರು ಮಾತಾಡಲು ಪ್ರಾರಂಭಿಸಿದಾಗ ಮ್ಯಾಜಿಸ್ಟ್ರೇಟರಿಗೆ ಫೋನ್ ಬಂತು. ಅವರು ಫೋನಲ್ಲಿ ಮಾತಾಡುತ್ತಲೇ ಯೂ ಪ್ರೊಸೀಡ್, ಯು ಪ್ರೊಸೀಡ್ ಅಂದರು. ಸ್ವಾಮಿಯವರು ಹೇಳಿದ್ದನ್ನು ಅವರು ಏನಂತ ಕೇಳಿಸಿಕೊಂಡರೋ ಏನೋ ಕೊನೆಗೆ ಅವರು ಷರಾ ಬರೆದದ್ದು ಹೀಗಿತ್ತು.

ಎಂಟು ವರ್ಷಗಳಿಂದ ಇವರಿಗೆ ಬರಬೇಕಾದ ಸಂಬಳದ ಬಾಕಿ ಬರದೇ ಇವರ ಮನಸ್ಸು ಅಸ್ತವ್ಯಸ್ತವಾಗಿಬಿಟ್ಟಿದೆ. ಇವರನ್ನೂ ಹುಚ್ಚಾಸ್ಪತ್ರೆಗೆ ಸೇರಿಸಬಹುದೆಂದು ಶಿಫಾರಸ್ಸು ಮಾಡುತ್ತೇನೆ.

# ಅನಾಥೋ ದೈವ ಶಿಕ್ಷಕಃ

**- ಗಣೇಶ್ ಹೆಗ್ಗಡೆ**

**ಎಂ**ದಿನಂತೆ ಆಗಸ್ಟ್ ತಿಂಗಳ ನಮ್ಮ 'ಸಂಜೆ ಕಟ್ಟೆ'ಯ ಕಾರ್ಯಕಾರಿ ಸಮಿತಿಯ ಸಭೆ ಆರಂಭವಾದಾಗ, ಗೌರವಾನ್ವಿತ ಅಧ್ಯಕ್ಷರಾದ ಪ್ರೊ. ತೋಲಾಂಡರಾಯರು ಎದ್ದು ನಿಂತು ಸಭೆಗೆ ವಂದಿಸಿ, ''ಸೆಪ್ಟೆಂಬರ್ ತಿಂಗಳಿನಲ್ಲಿ ಏನು ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳುವವರಿದ್ದೀರಿ?'' ಎಂದು ಚರ್ಚೆಗೆ ಬುನಾದಿ ಹಾಕಿದರು.

''ಸರ್, ಸೆಪ್ಟೆಂಬರ್ 5ರಂದು ಶಿಕ್ಷಕರ ದಿನಾಚರಣೆ. ನಮ್ಮ ಸಂಘದ ವತಿಯಿಂದ ಆ ದಿನ ನಮ್ಮ ಟೌನಿನ ಯಾರಾದರೂ ಹಿರಿಯ ಶಿಕ್ಷಕರನ್ನು ಗುರ್ತಿಸಿ ಸನ್ಮಾನ ಮಾಡುವುದು ಸಂಘಕ್ಕೆ ಶೋಭೆ ತರುವ ವಿಚಾರ'' ಎಂದರು ಡಾ. ಎಂಗತಂಬಿ.

**ವಿದ್ಯಾರ್ಥಿ ಜೀವನದಲ್ಲಿ ನಮ್ಮನ್ನು ಕಾಡುವ ಪಾತ್ರ ಮಾತ್ರ 'ಶಿಕ್ಷಕ'ನೆಂಬ ಭ್ರಮೆ ನಮ್ಮದು.**

''ಸರಿ ಹಾಗಾದ್ರೆ ಅಂಥಹ ಮಹನೀಯರನ್ನು ಶೋಧಿಸುವ ಕಾರ್ಯ ಪ್ರಾರಂಭವಾಗಲಿ'' ಎಂದಪ್ಪಣೆ ಕೊಡಿಸಿದರು ಅಧ್ಯಕ್ಷರು.

''ಸರ್ ತಮ್ಮ ಮನೆಯ ಹಿಂದಿನ ಬೀದಿಯಲ್ಲಿ ವಾಸವಿರುವ ಹಿರಿಯ ಶಿಕ್ಷಕರು, ವಯೋವೃದ್ಧರೂ ಆದ 'ಮನಿಕಂಠ ಪಾಠನ್'ರವರು ಹ್ಯಾಗೆ?'' ಎಂದೆ ಏನೋ ಗೆಲುವು ಸಾಧಿಸಿದೆನೆಂಬ ಭ್ರಮೆಯಿಂದ.

''ಛೇ ಛೇ ಎಂಥ ಮೀನಿಂಗ್ಲೆಸ್ ಪ್ರಪೋಸಿಷನ್, ನಿಮಗ್ಯಾರಿಗೂ ಆ 'ಮನಿಕಂಠ'ನ ಬಗ್ಗೆ ಹೆಚ್ಚಗ್ಗೆ ತಿಳಿದಿಲ್ಲವೆಂದು ತೋರುತ್ತೆ'' ಎಂದರು ಪ್ರೊ. ತೋಲಾಂಡರಾಯರು.

''ಯಾಕ್ಸಾರ್?'' ಎಂದೆವು ಒಕ್ಕೊರಲಿನಿಂದ.

''ಆ ಅಯೋಗ್ಯ, ಶಿಕ್ಷಕನಾಗಿದ್ದಾಗ ತರಗತಿಗಳಲ್ಲಿ ಪಾಠ ಮಾಡದೆ, ವಿದ್ಯಾರ್ಥಿಗಳಲ್ಲಿ ಫೇಲಾಗುವ ಭೀತಿ ಮೂಡಿಸಿ, ಮನೆಯ ಪ್ರೈವೇಟ್ ಟ್ಯೂಷನ್‌ಗೆ ಉತ್ತೇಜನ ಕೊಟ್ಟು, ಲಕ್ಷಗಟ್ಟಲೆ ಹಣ ಸಂಪಾದಿಸಿದ. ತಾನೇ ಸೆಟ್ ಮಾಡುವ ಕ್ವೆಶ್ಚನ್ ಪೇಪರ್‌ಗಳನ್ನು ಹುಡುಗರಿಗೆ ಜೆರಾಕ್ಸ್ ಮಾಡಿ ಹಂಚಿ, ಈ ಶಿಕ್ಷಣ ಕ್ಷೇತ್ರ ಹಣ ಮಾಡುವ ಗಣಿಯೆಂದು ಲೋಕಕ್ಕೇ ಸಾರಿದ ಭೂಪ! ಇಂಥಹವನನ್ನು ಕರೆದು ಅದೂ ನಮ್ಮ ಸಂಘದಲ್ಲಿ ಸನ್ಮಾನಿಸಿದರೆ ಅದು ಶಿಕ್ಷಕ ದಿನಾಚರಣೆ ಎಂದು ಕರೆಸಿಕೊಳ್ಳದೆ ಶಿಕ್ಷಕ ಧನಾಚರಣೆಯಾದೀತು! ಎಚ್ಚರ್ರ.'' ಪ್ರೊ. ತೋಲಾಂಡರಾಯರ ಸವಿವರಣೆ ಕೇಳಿ ನಾವೆಲ್ಲಾ ಬೆಚ್ಚಿ ಬಿದ್ದೆವು.

''ಸರ್, ನಮ್ಮ ಕಾಲದಲ್ಲಿ ಪ್ರೈವೇಟು ಟ್ಯೂಷನ್‌ಗೆ ಹೋಗುವ ಪರಿಪಾಠವೇ ಇರಲಿಲ್ಲ. ಅದೊಂದು ನಾಚಿಕೆಯ ವಿಷಯವೆಂದು ಅರ್ಥೈಸುವ ಪೋಷಕರೇ ಹೆಚ್ಚಾಗಿದ್ದರು'' ಎಂದೆ.

''ದಟ್ ವಾಸ್ ಟ್ರೂ ಮೈ ಬಾಯ್. ಅಂದ್ಹಾಗೆ ನೀನು ಯಾವ ಸ್ಕೂಲಿನಲ್ಲಿ ಓದಿದ್ದು?'' ಅಚಾನಕ್ಕಾಗಿ ಪ್ರಶ್ನಿಸಿದರು ಪ್ರೊ. ತೋಲಾಂಡರಾಯರು.

''ಸರ್, ನಾನು ನಂಜನಗೂಡಿನ ಗೌರ್ನ್‌ಮೆಂಟ್ ಬಾಯ್ಸ್ ಮಿಡ್ಲ್ (ಕ್ಲಾಸ್) ಸ್ಕೂಲಿನಲ್ಲಿ. ಯಾಕ್ಸಾರ್? ಹಾಗೆ ಕೇಳ್ತಾ ಇದೀರಿ?'' ಎಂದೆ.

''ಯಾಕೂ ಇಲ್ಲ. ಇವತ್ತು ಬೆಳಿಗ್ಗೆ ನಿಮ್ಮ ಮನೆ ದಾರೀಲಿ ಹೋಗ್ತಾ ಇದ್ದೆ. ನೀನು ಭಾರತವಾಚನ ಮಾಡ್ತಾ ಇದ್ದಿದ್ದು ಕಿವಿಗೆ ಕೇಳಿಸಿತು. ಅಚ್ಚರಿಗೊಂಡು ನಿಂತೆ. 'ಕುಮಾರವ್ಯಾಸನು ಹಾಡಿದೆನೆಂದರೆ ಕಲಿಯುಗ ದ್ವಾಬರವಾಗುವುದು' ಎಂದು ಉಚ್ಚರಿಸುತ್ತಿದ್ದೆ ನೀನು. ನೀನು ಓದುತ್ತಿದ್ದ ಭಾರತ, ಜೆ.ಡಿ.ಎಸ್.ನ ಕುಮಾರವ್ಯಾಸ ಬರೆದಿದ್ದಿರಬೇಕು ಅಂತ ಸಮಾಧಾನ ಪಟ್ಕೊಂಡು ಮುಂದಕ್ಕೆ ಹೋದೆ'' ಎಂದು ಪ್ರೊ. ತೋಲಾಂಡರಾಯರು ಎಲ್ಲರೆದುರು ಹೇಳಿದಾಗ ನಾಚಿಕೆಯಿಂದ ತಲೆತಗ್ಗಿಸಿ, ''ಸಾರಿ ಸರ್, ಅಪಭ್ರಂಶವಾಯ್ತು'' ಅಂದೆ.

''ಡೋಂಟ್ ವರಿ, ನೀನು ಹಾಗೆ ಕಂಠ ಶೋಷಣೆ ಮಾಡುತ್ತಿದ್ದುದರಲ್ಲೂ ಸತ್ಯಾಂಶವಿದೆ'' ಎಂದು ಸಮಾಧಾನಪಡಿಸಿದ ಪ್ರೊ. ತೋಲಾಂಡರಾಯರು ತಮ್ಮ ಕೈಗಡಿಯಾರ ನೋಡಿಕೊಂಡರು. ಅದು ಖಾರದ ಗೋಡಂಬಿ, ಡ್ರೈ ಜಾಮೂನು ಮತ್ತು ಷುಗರ್‌ಲೆಸ್ ಕಾಫಿ ಬರುವ ಸಮಯವಾಗಿತ್ತು. ಕಾಫಿ ಸೇವಿಸಿ ಪ್ರಸನ್ನಚಿತ್ತರಾದ ಪ್ರೊ. ತೋಲಾಂಡರಾಯರು ನಮ್ಮನ್ನುದ್ದೇಶಿಸಿ,

''ಮಿತ್ರರೇ, ನಿಜವಾದ ಶಿಕ್ಷಕ ಯಾರು? ಎಂಬ ಕಲ್ಪನೆಯೆ ನಿಮಗಿರಲಿಕ್ಕಿಲ್ಲವೆಂಬ ಸಂಶಯ ನನ್ನನ್ನು ಬಲವಾಗಿ ಕಾಡುತ್ತಿದೆ. ವಿದ್ಯಾರ್ಥಿ ಜೀವನದಲ್ಲಿ ನಮ್ಮನ್ನು ಕಾಡುವ ಪಾತ್ರ ಮಾತ್ರ 'ಶಿಕ್ಷಕ'ನೆಂಬ ಭ್ರಮೆ ನಿಮ್ಮದು. ವಿದ್ಯಾರ್ಥಿ ಜೀವನ, ಬದುಕಿನ ಮಧ್ಯಂತರದ ಒಂದು ಘಟ್ಟ ಮಾತ್ರ ಮತ್ತು ನಂತರವೇ ನಮ್ಮದು ನಿಜವಾದ ಬದುಕು. ದಾರಿ ತಪ್ಪದಂತೆ ನಮ್ಮ ಕೈ ಹಿಡಿದು ಮುನ್ನಡೆಸುವ ಅನೇಕ ಮಾರ್ಗದರ್ಶಕರು ಇಲ್ಲಿ ನಮಗೆದುರಾಗುತ್ತಾರೆ. ಆದರೆ ಅಂಥವರಲ್ಲಿ 'ಶಿಕ್ಷಕ'ನನ್ನು ಗುರ್ತಿಸುವ ಹೃದಯವಂತಿಕೆಯನ್ನು ನಾವು ಕಳೆದುಕೊಂಡು ಬಿಟ್ಟಿರುತ್ತೇವೆ. ನೀವೆಲ್ಲಾ ನೆನಪಿಸಿಕೊಳ್ಳಿ, ನಮ್ಮ ದೇಶದ ಒಬ್ಬ ಮಾಜಿ ರಾಷ್ಟ್ರಪತಿ ನಿವೃತ್ತನಾದಾಗ ಮುಂದಿನ ಬದುಕಿಗೆ ಬಯಸಿದ್ದು ಐಷರಾಮಿ ಬಂಗಲೆಯನ್ನಲ್ಲ, ಕಾರುಗಳನ್ನಲ್ಲ, ರಾಷ್ಟ್ರಪತಿ ಭವನದಲ್ಲಿ ಉಡುಗೊರೆಯಾಗಿ ಬಂದ ವಸ್ತುಗಳನ್ನಲ್ಲ ಬದಲಿಗೆ ಹಳೆಯ 'ಶಿಕ್ಷಕ' ವೃತ್ತಿಗೇ ಮರಳಲು ಬಯಸಿದ. ಒಂದು ಚಾಕ್‌ಪೀಸ್ ಡಬ್ಬದಲ್ಲಿ ನಿಜವಾದ ಸುಖವನ್ನು ಕಂಡ. ಈಗ ಹೇಳಿ, ಅಂಥಹ ಶಿಕ್ಷಕರು ಯಾರಾದರೂ ನಿಮ್ಮ ಗಮನಕ್ಕೆ ಬಂದಿದ್ದರೆ ಅಂಥವರನ್ನು ಕರೆದು ಸನ್ಮಾನಿಸುವುದರಲ್ಲಿ ಒಂದರ್ಥವಿದೆ.'' ಚೊಕ್ಕದಾದ ಭಾಷಣ ಮುಗಿಸಿದಾಗ ನಮಗೆಲ್ಲಾ ಮೈ ರೋಮಾಂಚನವಾಗಿ ವಿದ್ಯುತ್ ಸಂಚಾರವಾದಂತಾಗಿತ್ತು.

''ಸರ್, ನಾಲ್ಕು ಕಿಲೋಮೀಟರ್ ದೂರವಿರುವ ಭರಮಯ್ಯನ ಗುಡ್ಡದ ಬಳಿ ಒಂದು ಸರ್ಕಾರಿ ಪ್ರೈಮರಿ ಶಾಲೆಯಿದೆ. ಅಲ್ಲಿಯ ಮಾಸ್ತರು ಕೃಷ್ಣಯ್ಯ 20 ವರ್ಷಗಳಿಂದ

ಟ್ರಾನ್ಸ್‌ಫರ್ ಇಲ್ಲದೆ, ಶಾಲೆಯ ಬಳಿಯ ಗುಡಿಸಲು ಹಾಕಿಕೊಂಡು ದನಕರುಗಳನ್ನು ಸಾಕಿಕೊಂಡು 'ವಿದ್ಯಾದಾನ' ಮಾಡುತ್ತಿದ್ದಾರೆಂದು ಕೇಳಿದ್ದೇನೆ. ಸನ್ಮಾನ ಕಾರ್ಯಕ್ರಮಕ್ಕೆ ಅವರನ್ನು ಆಹ್ವಾನಿಸುವುದು ಸಮಂಜಸ ಅಂತ ನನ್ನ ಭಾವನೆ'' ಅಂದ ಶಾಮಿ.

''ಶಾಮಿ, ಸರಿಯಾಗಿ ವಿಚಾರಿಸಿದ್ದೀಯಾ? ನಿನಗೆ ಪ್ರೊ. ತೋಲಾಂಡರಾಯರ ಮುಂಗೋಪ ಸರಿಯಾಗಿ ತಿಳಿದಿಲ್ಲ'' ಎಂದು ಪಿಸುದನಿಯಲ್ಲಿ ಎಚ್ಚರಿಸಿದೆ. ಸಂದರ್ಭವರಿತ ಪ್ರೊ. ತೋಲಾಂಡರಾಯರು ''ಲೆಟ್ ಅಸ್ ಟ್ರೈ'' ಎಂದು ಒಪ್ಪಿಗೆ ಸೂಚಿಸಿದರು.

ಸಮಾರಂಭದ ನಂತರ ಅಲ್ಲಿಗೆ ಹೊರಟೆವು.

''ಸರ್, ಆ ಗುಡ್ಡದ ಮೇಲೆ ಹಸಿರು ಬಣ್ಣದ ಒಂದು ಬಿಲ್ಡಿಂಗ್ ಕಾಣ್ತಿದೆಯಲ್ಲಾ, ಅದೇ ಕೃಷ್ಣಯ್ಯನವರ ಶಾಲೆ. ಅವರು ಪರಿಸರ ಪ್ರೇಮಿ ಇರಬೇಕು'' ಎಂದ ಶಾಮಿ. ತೀರಾ ಹತ್ತಿರಕ್ಕೆ ಹೋದಾಗ ತಬ್ಬಿಬ್ಬಾದ ಪ್ರೊ. ತೋಲಾಂಡರಾಯರು ಶಾಮಿಯ ಬೆನ್ನಮೇಲೆ ಗುದ್ದಿ ''ಡರ್ಟಿ ಫೆಲೊ. ಹಸಿರು ಬಣ್ಣದ ಬಿಲ್ಡಿಂಗು ಅಂದೆ. 40ನೇ ವಯಸ್ಸಿಗೇ ನಿನ್ಗೆ ಕ್ಯಾಟರಾಕ್ಟ್ ಷುರುವಾಗಿದೆ. ಬಿಲ್ಡಿಂಗ್‌ನ ನಾಲ್ಕು ಗೋಡೆಗಳ ಮೇಲೂ ಬೆರಣಿ ತಟ್ಟಿದ್ದಾರಲ್ಲಯ್ಯಾ'' ಎಂದಾಗ ಶಾಮಿ ದಂಗಾಗಿ ಹೋದ.

''ಇದು ಶಾಲಾ ಸಮಯವಲ್ಲವೇ?''

''ಹೌದು ಸರ್''

''ಮತ್ತೆ ವಿದ್ಯಾರ್ಥಿಗಳ ಸುಳಿವೇ ಇಲ್ವಲ್ಲಯ್ಯ, ಶಾಲೇಲಿ ಪಾಠ ಮಾಡ್ತಿರೊ ಕುರುಹೇ ಇಲ್ಲ.''

''ಸರ್ ಆ ಮರದ ಹತ್ತಿರ ಯಾರೋ ವ್ಯಕ್ತಿ ಬೀಡಿ ಸೇದ್ತಾ ನಿಂತಿರುವಂತಿದೆ, ಬನ್ನಿ ವಿಚಾರಿಸೋಣ'' ಅಂದೆ. ಮೂವರೂ ಆ ವ್ಯಕ್ತಿಯ ಬಳಿ ಹೋದೆವು. ಆ ವ್ಯಕ್ತಿಯನ್ನು ಅಪಾದ ಮಸ್ತಕ ನೋಡಿ ಕುತ್ತಿಗೆಯಲ್ಲಿ ಹೆಬ್ಬೆರಳು ಗಾತ್ರದ ಚಿನ್ನದ ಸರ ಇದ್ದುದು ಕಂಡು ಬೆರಗಾದ ಪ್ರೊ. ತೋಲಾಂಡರಾಯರು ''ಇವ್ನು ಪರಿಸರ ಪ್ರೇಮಿಯಲ್ಲ, ಸರ ಪ್ರೇಮಿ'' ಎಂದು ಪಿಸುಗುಟ್ಟಿದರು.

''ಸ್ವಾಮಿ, ಈ ಬಿಲ್ಡಿಂಗ್ ಗೌರ್ನಮೆಂಟ್ ಪ್ರೈಮರಿ ಶಾಲೆಗೆ ಸೇರಿದ್ದಲ್ಲವೇ?''

''ಹೌದು. ನೀವು ಸರಿಯಾದ ಜಾಗಕ್ಕೇ ಬಂದಿದ್ದೀರಿ.''

''ಮತ್ತೆ ವಿದ್ಯಾರ್ಥಿಗಳ ಸುಳಿವೇ ಇಲ್ಲವಲ್ಲ, ಇವತ್ತು ರಜಾ ದಿನವೇ?''

''ಛೇ ಛೇ ಇವತ್ತು ವರ್ಕಿಂಗ್ ಡೆ. ಈ ಶಾಲೇಲಿ ಇರೋದೇ ಇಪ್ಪತ್ತು ಮಂದಿ ಹೈಕಳು. ಅವ್ರೆಲ್ಲಾ ದನ ಮೇಯಿಸೋಕೆ ಹೋಗಿದ್ದಾರೆ.''

''ವ್ಹಾಟ್?''

''ಸತ್ಯದ ವಿಚಾರವೆಂದರೆ ಇಲ್ಲಿರುವ 20 ದನಗಳಲ್ಲಿ ನಾಲ್ಕು, ಬಿ.ಇ.ಓ. ರವರದ್ದು, ಆರು, ಡಿ.ಡಿ.ಪಿ.ಐ. ರವರಿಗೆ ಸೇರಿದ್ದು, ಉಳಿದ ಹತ್ತು, ನನ್ನ ಸ್ವಂತದ್ದು. ಹಾಲು, ಬೆರಣಿ, ಗಂಜಳ

ಮೊದಲುಗೊಂಡು ಇಲ್ಲಿ ಪ್ರಪೋರ್ಷನೆಟ್ಟಾಗಿ ಹಂಚಿಕೆಯಾಗುತ್ತೆ. ಹುಡುಗರಿಗೆ ಊಟ, ತಿಂಡಿ, ಬಟ್ಟೆ ಸಿನಿಮಾ ಖರ್ಚು, ಪುಸ್ತಕ ಎಲ್ಲಾ ಈ ಖರ್ಚಿನಲ್ಲೇ ಸೇರಿ ಹೋಗಿರುತ್ತೆ.''

''ಅಂದಹಾಗೆ ತಮ್ಮ ಪರಿಚಯ?''

''ನಾನೇ ಈ ಶಾಲೆಯ ಮಾಸ್ತರ್ ಕೃಷ್ಣಯ್ಯ. ತಾವ್ಯಾರೋ?''

''ನಾವು ಈ ಟೌನಿನ ಶಿಕ್ಷಣ ಪ್ರೇಮಿಗಳು. ಶಿಕ್ಷಕ ದಿನಾಚರಣೆಯ ಪ್ರಯುಕ್ತ ತಮಗೆ ಸನ್ಮಾನ ಮಾಡಲು ಹುಡುಕಿಕೊಂಡು ಬಂದಿದ್ದೇವೆ'' ಎಂದ ಪ್ರೊ. ತೋಲಾಂಡರಾಯರು ಶಾಲಾ ಜಗಲಿಯ ಮೇಲೆ ಬಿದ್ದಿದ್ದ ಬೆತ್ತವನ್ನು ಕೈಗೆತ್ತಿಕೊಂಡರು.

ಮನೆ ದೇವರನ್ನು ನೆನೆದು ಶಾಮಿ ಮತ್ತು ನಾನು ಭಯದಿಂದ ಕಣ್ಮುಚ್ಚಿಕೊಂಡೆವು. ಒಲಂಪಿಕ್ಸ್‌ನ ಉಸೇನ್ ಬೋಲ್ಟ್‌ನಿಗಿಂತಲೂ ಸ್ಪೀಡಾಗಿ ಓಡಿದ ಕೃಷ್ಣಯ್ಯ, ದೂರದಲ್ಲಿ ಹುಲ್ಲು ಮೇಯುತ್ತಿದ್ದ ದನಗಳ ಗುಂಪಿನಲ್ಲಿ ಎಲ್ಲೋ ಕಾಣೆಯಾಗಿ ಹೋದರು. ಕೈಯಲ್ಲಿ ಹಿಡಿದಿದ್ದ ಬೆತ್ತ ಬಿಸಾಕಿದ ಪ್ರೊ. ತೋಲಾಂಡರಾಯರು ''ಇಂತಹ ಮನೆ ಹಾಳರನ್ನು ನೋಡಿಯೆ ಆ ಪುಣ್ಯಾತ್ಮ 'ಇಂಡಿಯ ವಿಷನ್ 2020' ಎಂಬ ಪುಸ್ತಕ ಬರೆದದ್ದು'' ಎಂದರು.

ಇನ್ನೂ ಆ ಪುಸ್ತಕ ಓದಿಲ್ಲದರ ಬಗ್ಗೆ ಶಾಮಿ ಮತ್ತು ನನಗೆ ತೀವ್ರ ನಾಚಿಕೆಯಾಯಿತು.

✵

---

## ನಂಬಿ ಕೆಟ್ಟವರಿಲ್ಲವೋ

ಎಚ್ಚೆಸ್ ಅವರು ಇಂಟರ್ ಮೀಡಿಯಟ್ ಹುಡುಗರಿಗೆ ಪಾಠ ಮಾಡುತ್ತಿದ್ದ ಕಾಲ. ಇನ್ನೊಂದು ಸೆಕ್ಷನ್ನಿನವರು ಪಾಠದಲ್ಲಿ ಮುಂದಿದ್ದಾರೆ ಅಂತ ಒಬ್ಬ ಹುಡುಗ ಎದ್ದು ನಿಂತು ಹೇಳಿದಾಗ, ಎಚ್ಚೆಸ್ ಅವರು ಆ ಹುಡುಗನಿಗೆ ನಿನಗೆ ನಂಬಿ ಕೆಟ್ಟವರಿಲ್ಲವೋ ರಂಗಯ್ಯನ ಎನ್ನುವ ಪುರಂದರ ದಾಸರ ಪದ ಗೊತ್ತಾ ಅಂತ ಕೇಳಿದರು. ಹುಡುಗ ಯಾವ ಪ್ರಶ್ನೆಗೆ ಯಾವ ಉತ್ತರ ಅಂತ ತಬ್ಬಿಬ್ಬದಾದರೂ ತೋರಿಸಿಕೊಳ್ಳದೇ ಗೊತ್ತು ಸಾರ್ ಅಂದ. ಹಾಗಾದರೆ ಆ ಕೀರ್ತನೆಯಲ್ಲಿ ಬರುವ ರಂಗಯ್ಯನ ತೆಗೆದು ನರಸಿಂಹಯ್ಯನ ಸೇರಿಸಿಕೋ ಎಲ್ಲ ಸರಿಹೋಗುತ್ತೆ ಅಂದರು. ಇಡೀ ತರಗತಿ ನಗೆಗಡಲಿನಲ್ಲಿ ಮುಳುಗಿತು.

# ನೃಪತುಂಗನ ಗರ್ವಭಂಗ ಪ್ರಸಂಗವು

**- ಎಚ್.ಪಿ. ಕೃಷ್ಣಸ್ವಾಮಿ**

**ಎ**ರಡು ದಶಕಗಳ ಹಿಂದಿನ ಮಾತು. ಒಂದು ಕಾಲೇಜಿನ ಪ್ರಾಧ್ಯಾಪಕನಾಗಿದ್ದೆ. ಅದರ ಜೊತೆಗೆ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಸಹಾಯಕನೂ ಆಗಿದ್ದೆ. ಆ ಕಾಲೇಜಿನಲ್ಲಿ ವಾರ್ಷಿಕೋತ್ಸವ ಶ್ರೀಮಂತ ಮನೆತನಗಳಲ್ಲಿ ಮದುವೆ ನಡೆಯುವ ರೀತಿಯಲ್ಲಿ, ಮೂರು ದಿನಗಳ ಕಾಲ ವೈಭವೋಪೇತವಾಗಿ ನಡೆಯುತ್ತಿತ್ತು. ಆ ಮೂರು ದಿನದ ವಾರ್ಷಿಕೋತ್ಸವದಲ್ಲಿ ಅನೇಕ ನಾಟಕಗಳನ್ನು ಅಭಿನಯಿಸಲು ವಿದ್ಯಾರ್ಥಿಗಳು ತುಂಬಾ ಉತ್ಸಾಹ ತೋರುತ್ತಿದ್ದರು.

ಈ ವಾರ್ಷಿಕೋತ್ಸವದಲ್ಲಿ ಒಮ್ಮೆ ''ನೃಪತುಂಗ'' ನಾಟಕ ಅಭಿನಯಿಸಲು ತೀರ್ಮಾನಿಸಿ ಕಾಲೇಜಿನ ವಿದ್ಯಾರ್ಥಿ ಮುಖಂಡ ಮಹಾಶಯ ನನ್ನ ಬಳಿ ಬಂದು, ಈ ನಾಟಕ ಆಡಲು ದಿಗ್ದರ್ಶನ ನಾನು ಮಾಡಬೇಕೆಂದೂ, ಆ ನಾಟಕದ ನಾಯಕ ತಾನೇ ಆಗಬೇಕೆಂದು ಕೇಳಿಕೊಂಡ. ಕಾಲೇಜಿನ ದಾದಾ ಆಗಿದ್ದ ಆ ವಿದ್ಯಾರ್ಥಿ ಮುಖಂಡನ ಅಭಿಲಾಷೆಯನ್ನು ತಿರಸ್ಕರಿಸುವ ಧೈರ್ಯ ಯಾರಿಗೂ ಇರಲಿಲ್ಲ. ಹಾಗಾಗಿ ಆ ನಾಟಕ ಆಡಿಸಲು ಬೇರೆ ದಾರಿಯಿಲ್ಲದೆ ಒಪ್ಪಿಕೊಂಡೆ. ಆ ನಾಟಕದ ನಾಯಕ ನೃಪತುಂಗನ ಸಂಭಾಷಣೆ ಪುಟಗಟ್ಟಲೆ ಇದ್ದವು. ಅದನ್ನು ಅಭಿನಯಿಸಲು ಎಂಥವರಿಗೂ ಎಂಟೆದೆ ಬೇಕಾಗಿತ್ತು.

**ಈ ನಾಟಕ ನಗೆಪಾಟಲಿಗೆ ತುತ್ತಾಗಿದ್ದು ಒಳ್ಳೆಯದೇ ಆಯಿತು ಎಂದು ಪ್ರಿನ್ಸಿಪಾಲರು ಹೇಳಿದ್ದೇಕೆ?**

ನಾಟಕದ ತಾಲೀಮು ಒಂದು ತಿಂಗಳು ಮೊದಲೇ ಪ್ರಾರಂಭವಾಯಿತು. ಆ ನಾಟಕದ ಸಂಭಾಷಣೆ ನಾಟಕದ ನಾಯಕನಿಗೆ ಸರಿಯಾಗಿ ಬರಲೇ ಇಲ್ಲ, ನನಗೆ ಆ ಸಂಭಾಷಣೆಗಳೆಲ್ಲವೂ ಕರಗತವಾಯಿತೇ ವಿನಹ, ಅವನಿಗೆ ಆಗಲಿಲ್ಲ, ನಾಟಕದ ದಿನವೂ ಬಂತು. ಉಡುಪಿಯಿಂದ ಬಂದ ಮೇಕಪ್‌ಮ್ಯಾನ್‌ಗಳು ನಮ್ಮ ''ನೃಪತುಂಗನನ್ನು'' ನಿಜವಾದ ನೃಪತುಂಗ ಚಕ್ರವರ್ತಿಯಂತೆ ಅಲಂಕರಿಸಿದ್ದರು. ನಾಟಕಕ್ಕೂ ಮೊದಲೇ ನಮ್ಮ ನಾಟಕದ ನೃಪತುಂಗ ಚಕ್ರವರ್ತಿ ತಾನೇ ರಾಜ ಎಂದುಕೊಂಡು ಕಾಲೇಜಿನ ಕಾರಿಡಾರಿನಲ್ಲೆಲ್ಲಾ ಓಡಾಡಿದ. ಅವನ ಆನಂದಕ್ಕೆ ಪಾರವೇ ಇಲ್ಲ.

ರಾತ್ರಿ ಆಯಿತು. ನಾಟಕ ಪ್ರಾರಂಭವಾಯಿತು. ನಾವು ಎಣಿಸಿದಂತೆ ನಾಟಕದ ನೃಪತುಂಗ ತನ್ನ ಸಂಭಾಷಣೆಯನ್ನು ಮರೆತ. ನೇಪಥ್ಯದಲ್ಲಿ ಅವನಿಗೆ ಎರಡೂ ಸೈಡ್ ವಿಂಗ್ಸ್‌ಗಳಿಂದ

ಸಂಭಾಷಣೆ ಹೇಳಿಕೊಡುತ್ತಿದ್ದ ಪ್ರಾಂಪ್ಟರ್‌ಗಳಿಗೂ ಕಸರತ್ತು ಜಾಸ್ತಿಯಾಯಿತು. ''ನೃಪತುಂಗ'' ಸ್ಟೇಜಿನಲ್ಲಿ ಇರುವುದಕ್ಕಿಂತ ಹೆಚ್ಚಾಗಿ ಸೈಡ್‌ವಿಂಗ್ಸ್‌ನಲ್ಲೇ ಕಾಲ ಕಳೆದ. ಕೆಲವೊಮ್ಮೆ ''ಸ್ವಲ್ಪ ಜೋರಾಗಿ ಹೇಳಿ ಸಾರ್'' ಎಂಬ ಅವನ ಶಬ್ದಗಳು ಪ್ರಬಲವಾದ ಮೈಕ್‌ನಲ್ಲಿ ಕೇಳಿಬಂದು ಪ್ರೇಕ್ಷಕರನ್ನು ನಗೆಗಡಲಲ್ಲಿ ಮುಳುಗಿಸುತ್ತಿತ್ತು.

ನಾಟಕದ ಕೊನೆಯ ಭಾಗದಲ್ಲಿ ನೃಪತುಂಗ ಚಕ್ರವರ್ತಿಯ ಮಗನೇ ಬಂಡಾಯ ಏಳುವ ಪ್ರಸಂಗವಿದೆ. ಚಕ್ರವರ್ತಿಗೆ ಈ ವಿಚಾರ ಬಹಳ ಬೇಸರ ತಂದು ತಾನು ಕಟ್ಟಿದ ಚಕ್ರಾಧಿಪತ್ಯ, ತನ್ನ ಆಡಳಿತ ಇವುಗಳ ಬಗ್ಗೆ ಸ್ವಗತ ಹೇಳುವ ಸಂದರ್ಭ. ಅದು ಎರಡು ಪುಟಗಳಷ್ಟು ದೀರ್ಘ. ಒಬ್ಬನೇ ಹೇಳುತ್ತಿರಬೇಕು. ನಮ್ಮ ನಾಯಕ ಯಥಾಪ್ರಕಾರ ಸಂಭಾಷಣೆಯನ್ನು ಮರೆತ. ಅಷ್ಟು ದೊಡ್ಡ ಸಂಭಾಷಣೆಯನ್ನು ಹೇಳಿಕೊಡುವುದು ಹೇಗೆ ಎಂದು ಸೈಡ್‌ವಿಂಗ್ಸ್‌ನಲ್ಲಿದ್ದ ನಾವು ತಲೆ ಕೆಡಿಸಿಕೊಂಡಿದ್ದಾಗ ನಮ್ಮ ನೃಪತುಂಗ ತಲೆ ಓಡಿಸಿದ. ಚಿಂತಾಕ್ರಾಂತನಾದಂತೆ ಸಿಂಹಾಸನದ ಮೇಲೆ ಕುಳಿತು ''ನನ್ನ ಮಗನ ನಡವಳಿಕೆ ಬಗ್ಗೆ ಅಪಾರ ವ್ಯಥೆ ಆಗಿದೆ. ನನಗೆ ಆಯಾಸವಾಗಿದೆ ನಾನು ವಿಶ್ರಮಿಸಬೇಕು. ದ್ವಾರಪಾಲಕರೇ ಬಾಗಿಲು ಹಾಕಿ'' ಎಂದು ಆಜ್ಞೆ ಮಾಡಿದ. ಪರದೆ ಕೆಳಗೆ ಇಳಿಯಿತು. ಅವನ ಕಷ್ಟವೂ ನಿವಾರಣೆಯಾಯಿತು. ಅವನಿಗೆ ಗಿಳಿಪಾಠ ಹೇಳುತ್ತಿದ್ದ ನಮ್ಮ ಕಷ್ಟವೂ ನಿವಾರಣೆಯಾಯಿತು. ಪ್ರೇಕ್ಷಕರಿಗೂ ಈ ನೃಪತುಂಗನಿಂದ ಬಿಡುಗಡೆಯಾಗಿತ್ತು.

ಈ ನಾಟಕ ನಗೆಪಾಟಲಿಗೆ ತುತ್ತಾಗಿದ್ದಕ್ಕೆ ನಿರ್ದೇಶಕನಾಗಿದ್ದ ನಾನು ಬೇಸರಪಟ್ಟು ಪ್ರಾಂಶುಪಾಲರನ್ನು ಭೇಟಿ ಮಾಡಲು ಹೋದೆ. ಆದರೆ ಅವರು ಗೆಲುವಾಗಿದ್ದರು. ಅವರ ಮುಖದ ಮೇಲೆ ತುಂಟ ನಗೆ ಇತ್ತು. 'ಸಾರಿ ಸರ್, ಹೀಗಾಗಬಾರದಿತ್ತು, ಎಲ್ಲರಿಗೂ ಬೇಜಾರು ಆಯಿತು' ಎಂದು ನಾನು ಅಲವತ್ತು ಕೊಳ್ಳಲು ಶುರುಮಾಡಿದಾಗ ಅವರು 'ಬೇಸರ ಪಡಬೇಡಿ, ಈ ನಾಟಕ ನಗೆಪಾಟಲೆಗೆ ತುತ್ತಾಗಿದ್ದು ಒಳ್ಳೆಯದೇ ಆಯಿತು' ಎಂದಾಗ ನನಗೆ ಶಾಕ್ ಮತ್ತು ಅಚ್ಚರಿ!

'ಅದು ಹೇಗೆ ಸರ್?' ಎಂದು ಕೇಳಿದೆ ಅವರ ವಿವರಣೆ ಅರ್ಥವಾಗದೆ,

''ಈಗ ನೋಡಿ ನಮ್ಮ ವಿದ್ಯಾರ್ಥಿ ನಾಯಕನಿಗೆ ತಲೆ ಎತ್ತದಂತಾಗಿದೆ. ಅವನ ಅಹಂಗೆ ನಾಟಕ ಪಂಕ್ಚರ್ ಮಾಡಿದೆ. ಇನ್ನು ಮುಂದೆ ಅವನು ಉಪದ್ರವ ಕಡಿಮೆ ಆಗುತ್ತದೆ ನೋಡಿ. ಇದು ಒಳ್ಳೆಯದೇ ಆಯಿತು'' ಎಂದು ನಕ್ಕರು.

ಹಾಗೇ ಆಯಿತು. ಇಷ್ಟು ದಿನ ಮೀಸೆ ತಿರುಗಿಸಿ ಕಾರಿಡಾರ್‌ನಲ್ಲಿ ಓಡಾಡುತ್ತಿದ್ದ ನಮ್ಮ ದಾದಾ ಬಾಲ ಸುಟ್ಟುಕೊಂಡ ಬೆಕ್ಕಿನಂತಾಗಿದ್ದ. ಅವನೇ ತನ್ನ ಬಾಲ ಸುಟ್ಟಿಕೊಂಡಿದ್ದ. ನಾವು ಮಾಡಲಾಗದ್ದನ್ನು ಅವನೇ ಮಾಡಿಕೊಂಡಿದ್ದ.

✵

# ತರಬೇತಿ ಪಡೆದ ಹುಲಿಗಳು

**- ಭೂಮಿತಾಯಿ**

**ನ**ಮ್ಮಜ್ಜ ವಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಸ್ಥರಾಗಿದ್ದರು. ಅಜ್ಜಿ, ಅಲ್ಲೇ ಶಿಕ್ಷಕಿಯಾಗಿದ್ದರು. ಆಗೆಲ್ಲ, ಟೀಚರ್, ಮ್ಯಾಮ್, ಮಿಸ್‌ಗಳ ಕಾಲವಲ್ಲ, ಅದು ಏನಿದ್ದರೂ ಅಕ್ಕೋರು, ಮಾಸ್ತರು ಅನ್ನುವ ಅಚ್ಚಕನ್ನಡದ ಕಾಲವಾಗಿತ್ತು.

ಪ್ರೌಢಶಾಲೆಯ ಹಂತಕ್ಕೆ ಬಂದೊಡನೆ ಬಾಲಕರ ಹಾಗೂ ಬಾಲಕಿಯರ ಬೇರೆ ಬೇರೆ ಶಾಲೆಗಳಿರುತ್ತಿದ್ದವು. ಅದಕ್ಕೆ ಗಂಡುಸಾಲಿ, ಹೆಣ್ಣು ಸಾಲಿ ಅಂತಿದ್ರು. ಈಗಿನ್ಹಂಗ ಸರ್ಕಾರಿ ಬಾಲಕರ ಅಥವಾ ಸರ್ಕಾರಿ ಬಾಲಕಿಯರ ಅನ್ನೊ ಶಬ್ದಗಳೇ ಇರಲಿಲ್ಲ, ಏನಿದ್ರೂ ಸಾಲಿಗೆ ಲಿಂಗ ಇರ್ತಿತ್ತು.

ಹಿಂದಕ ಓದಾಕ, ಬರ್‍ಯಾಕ ಕಲಸ್ತಿದ್ರು. ಜೊತಿಗೆ ಬದುಕೂದು ಕಲಸ್ತಿದ್ರು. ಬದುಕನ್ನು ಸ್ವೀಕರಿಸೂದು ಕಲಸ್ತಿದ್ರು. ಆದರೆ ಈಗ..?

ವಸ್ತ್ರದ್ ಮಾಸ್ತರ್ ಅಂದ್ರ ಭೂಮಿತಿ, ಜ್ಯಾಮಿತಿ, ರೇಖಾಗಣಿತ ಮಗ್ಗಿಗಳನ್ನು ಕೇಳುತ್ತಿದ್ದ ಕಡಕ್ ಮಾಸ್ತರು. ಆದ್ರ ಅಷ್ಟೇ ಆರ್ದ್ರ ಮನಸ್ಸಿನಿಂದ ಸಂಗೀತ ಹಾಗೂ ಕೊಳಲನ್ನೂ ಹೇಳಿಕೊಡೋರು. ಮಗ್ಗಿ ಕಲಸೂದ್ರಾಗ ಅಗ್ದಿ ಮುಂದ. ಎಷ್ಟು ಎಷ್ಟಲೆ ಹದಿನಾರು? ಅನ್ನೂ ಪ್ರಶ್ನೆಯೊಳಗ, ಹದಿನಾರು ಮುಗಿಯೂದ್ರೊಳಗ ಹುಡುಗೂರು ನಾಕ್‌ನಾಕಲೆ ಅಂದ್ರ, ನಾಕ ಇದ್ದಂಗ. ಇರ್ಲಿಲ್ಲಾಂದ್ರ ಕಿವಿ ಹಿಂಡುವ ನರಕದ ಶಿಕ್ಷೆನ ಸಿಗ್ತಿತ್ತು.

ಚಿತ್ರಾ ಬರದು, ಓದಸೂದು, ಪದ ಬರಸೂದು, ಮಗ್ಗಿ ಪಾಠ ಮಾಡಾಕ ಹೇಳಿದ ಮ್ಯಾಲೆ ಮ್ಯಾಳಗಿ ಮ್ಯಾಲೆ ಕುಂತು ಯಾರಿಗೂ ಗೊತ್ತಾಗದೇಹಂಗ ಬೀಡಿಯ ದಂ ಎಳಿಯೂದು ಅಜ್ಜನಿಗೆ ಪ್ರಿಯವಾದ ವಿಷಯವಾಗಿತ್ತು. ವಸ್ತ್ರದ್ ಓಣಿಯೊಳಗ ಎರಡು ಕಟ್ಟಿ ಇರೂ ಮನಿ ಅಂದ್ರ ಅಜ್ಜಂದ ಮಾತ್ರ ಆಗಿತ್ತು. ಸಂಜೀಮುಂದ ಎಡಕಿನ ಕಟ್ಟಿ ಮ್ಯಾಲೆ, ಅಮ್ಮ, ಬಲಕಿನ ಕಟ್ಟಿ ಮ್ಯಾಗ ಅಜ್ಜ ಕುಂತ್ರ ಊರ ಹುಡುಗ್ರ ಸಂಜೀ ಸಾಲಿ ಅಲ್ಲಿ ಸುರು ಆಗ್ತಿತ್ತು. ಒಗಟು, ಒಡಪು, ಗಾದಿ ಮಾತು ಎಲ್ಲಾನೂ ಇಲ್ಲಿ ಹರುವುತ್ತಿದ್ದರು. 'ಹಸರ ಗಿಡದಾಗ, ಬಿಳೀ ಮೊಸರು ಚೆಲ್ಲೈತಿ' ಏನದು ಅಂದ್ರ ಹುಡುಗ್ರೆಲ್ಲ ಚೀರೋರು.. ಮಲ್ಲಿಗ್ಗಿ ಹೂವಾ..! 'ಇಟೀಟೆ ಪಾರಾ ಮುಕಳ್ಯಾಗ ದಾರ..' ಸೂಜಿ ದಾರ ಇಂಥಾ ಒಗಟುಗಳಿಗೆ ಕೊರತಿನೆ ಇರ್ಲಿಲ್ಲ, ಇನ್ನು ಹಾಡಿನದ್ದಂತೂ ಒರತಿ ಇದ್ಧಂಗ. ಒಬ್ಬ ಮಾಸ್ತರ್ ಕನ್ನಡ, ಭೂಗೋಳ, ಖಗೋಳ, ಜ್ಯಾಮಿತಿ, ಅಂಕಗಣಿತ, ಬೀಜಗಣಿತ ಎಲ್ಲಾ ಹೇಳಿಕೊಡೂದೇ ಅಧ್ಭುತ ಅನ್ನಸ್ತಿತ್ತು.

ಗಣಿತ ಅನ್ನೂದು ಗಣಿತ ಅಲ್ಲ, ಅಗಣಿತ ಅದು ಅಂತ ಅನ್ನೊಂತನ ನಮಗ ಸೂತ್ರ ಹೇಳಿಕೊಡ್ತಿದ್ದ, (ಎ+ಬಿ)2 ಯಾವತ್ತಿದ್ದರೂ ತಲಿಗೆ ಹತ್ತತಿರಲಿಲ್ಲ, ಕನ್ನಡದೊಳಗ ಪಟಪಟನೇ

ಹೇಳಿ ಮುಗಸ್ತಿದ್ದ ಅಜ್ಜ. ಮ್ಯಾಳಗಿ ಮ್ಯಾಲೆ ಮಲಕೊಂಡ್ರ ಸಪ್ತ ಋಷಿ ಮಂಡಳ, ಹನ್ನೆರಡೂ ರಾಶಿ, ಧ್ರುವ ನಕ್ಷತ್ರದ ಬಗ್ಗೆ ನಿದ್ದಿ ಬರೂತನಾನೂ ಹೇಳ್ತಿದ್ದ.

ಸ್ವರ ವ್ಯಂಜನ ಹೇಳಿಕೊಡೂದು ಭಾರಿ ಮಜಾ ಇತ್ತು. ಅ, ಆ ಅಂತ ಬಾಯಿ ತೆರೀಬೇಕಿತ್ತು. ಅಲ್ಪ ಪ್ರಾಣ, ಮಹಾಪ್ರಾಣ, ಹೃಸ್ವ, ದೀರ್ಘ ಸ್ವರಗಳ ಬಗ್ಗೆ ಭಾಳಂದ್ರ ಭಾಳ ಶಿಸ್ತಿನಿಂದ ಕಲಿಸಿದ್ದ. ಮಾತಾಡ್ರಿ. ಮಾತಾಡಿದ್ರ ಕಂಠ ಶುದ್ಧಿ ಆಗ್ತದ. ಙ, ಞ ಅಕ್ಷರಗಳನ್ನಂತೂ ಇಪ್ಪತ್ತು ಸಲೆ ಹೇಳ್ಸಂವ. ನಾವು ಮೂಗು ಹಿಡಿದು, ನಾಲಗೆ ನಾಳಕ್ಕ ಹಚ್ಚಿ ಹೇಳೇವಿ ಅಜ್ಜಾ.. ಅಂತ ಉಚ್ಚರಿಸಿದ ಬಗೆಯನ್ನೂ ಹೇಳಬೇಕಿತ್ತು. ಭಾಷಾ ಕಲಿಕೆಯನ್ನು ಆಸಕ್ತಿಕರಗೊಳಿಸಲು ಅಪ್ಪ ಅಂದ್ರ ಹತ್ತತದ, ಅವ್ವ ಅಂದ್ರ ಹತ್ತೂದಿಲ್ಲ! ಏನದು? ಅಂತ ಕೇಳಾಂವ. ನಾವು ಬೈಗುಳ ಅಂದು ಬೈಸ್ಕೊಂತಿದ್ವಿ. ಅದು ತುಟಿ ಅಂಥೇಳಿ ಬೊಚ್ಚ ಬಾಯಿಲೆ ನಗಾಂವ. ನಮ್ಮೆಲ್ಲ ಪ್ರಶ್ನೆಗಳಿಗೂ ಉತ್ತರ ಅಜ್ಜನ ಹತ್ರ ಇತ್ತು.

ಹಂಗ ನಾವು ಅಜ್ಜ ಅನ್ನೂ ಮಾಸ್ತರನ ಉಡಿಯೊಳಗ ಬೆಳದ್ವಿ. ಆದ್ರ ನನ್ನ ಮಗಳು ನನಗ ಕೇಳೂ ಪ್ರಶ್ನೆಗೆ ಉತ್ತರಸಾಕ ಆಗೂದಿಲ್ಲ. ನಾಯಿಗ್ಯಾಕ ಡಾಗ್ ಅನ್ಬೇಕು? ಅದೇನು ಡೌ ಅಂತದೇನು? ಬೌ ಅಂತದ. ಬಾಗ್ ಅನ್ಬೇಕು.. ಇಂಥ ಪ್ರಶ್ನೆ ಬಂದಾಗ ನಿಮ್ಮ ಟೀಚರ್‌ಗೆ ಕೇಳು ಅಂತ ಒಂದು ಮಾತು ಹೇಳ್ತೀನಿ.

ಅಯ್ಯ, ಬಾಯ್ಬಿಟ್ರ ಡೋಂಟ್ ಟಾಕ್ ಅನ್ನೂ ಟೀಚರ್‌ಗೆ ನಾ ಹೆಂಗ ಕೇಳಲಿ? ಈ ಪ್ರಶ್ನೆಗೆ ನನ್ನ ಹತ್ರ ಉತ್ತರಾನ ಇರಲಿಲ್ಲ.

ನಾವು ಅಕ್ಷರ ಮಾಲಿ ಕಲಿಯುಮುಂದ ರ ಠ ಈ ಕ ಬರ್‍ಯಾಕ ಮೊದಲ ಕಲೀತಿದ್ವಿ. ಅವ್ವನ ಬಳಿ, ಅಜ್ಜನ ಕೋಲು, ರ.. ಅವ್ವನ ಬಳಿ, ಅಜ್ಜನ ಕೋಲು, ಅಮ್ಮನ ಕುಂಕುಮ ಠ ಹಿಂಗ ನಮ್ಮ ಗ್ರಹಿಕೆಗೆ ಬರೂಹಂಗ ಕಲ್ತಿದ್ವಿ. ಈಗಿನ 'ಮ್ಯಾ..ಮ್'ಗಳು 'ಟ್ರೇಸ್ ಔಟ್ ಫಸ್ಟ್' ಅಂತಾರಂತ. ಅರ್ಧ ಬಳಿ, ಎಡಕ ಗಂಟು, ಬಲಕ ಅಕುಳಿ ಅಂತ ಹೇಳುಹಂಗ ಇಲ್ಲ. ಈ ಹುಡುಗುರು ಕಲಿಯೂದರೆ ಹೆಂಗ? ಕನ್ನಡದ ಅಕ್ಷರಗಳಿಗೊಂದು ವಿನ್ಯಾಸ ಅದ. ಲಾಲಿತ್ಯ ಅದ. ಅದನ್ನು ರ ಠ ಈ ಕ ದಿಂದ ಕಲಿಯೂದ ಒಂದು ಕಲೆ. ಠ ಬರೀಯೂದಂದ್ರ ರ ಬರದು ಹೊಕ್ಕಳ ಸುಳಿ ಮಾಡೂದು. ಥ, ಧ, ಭ ಬರಿಯೂದು ಅಂದ್ರ ಮುಕಳಿ ಸೀಳೂದು. ಈ ಸೀಳುವ ಕಲ್ಪನಾ ಮಾಡ್ಕೊಂಡು ಮುಸಿಮುಸಿ ನಕ್ಕರೂ ಭಾಳ ಛಂದಗೆ ನೆನಪು ಉಳೀತಿದ್ವು. ಈಗ ಅ.. ಆ ಅನ್ನೂದ ಇಲ್ಲ, ಅ ಮತ್ತ ಅನ ಹೇಳ್ತಾರ. ಯಾಕಂದ್ರ ಅವರ ಮಿಸ್ ಹಂಗೇ ಕಲಸ್ಯಾರಂತ!

ಏನು ಹೇಳೂದು? ಅಕ್ಕೋರು ಮಾಸ್ತರು ಬದಲಿಗೆ ಸಾಲ್ಯಾಗ ಮ್ಯಾಮ್ ಬಂದಾರ. ಮಕ್ಕಳು ಮ್ಯಾ..ಮ್ ಅಂತ ಬಾಯಿ ತೆರಿಯೂದ್ರೊಳಗ ಕುರಿಮರಿನ ಆಗ್ಯಾವ. ಇದಕ್ಕೇನು ಹೇಳೂನು?

ಹಿಂದಕ ಓದಾಕ, ಬರ್‍ಯಾಕ ಕಲಸ್ತಿದ್ರು. ಜೊತಿಗೆ ಬದುಕೂದು ಕಲಸ್ತಿದ್ರು. ಬದುಕನ್ನು ಸ್ವೀಕರಿಸೂದು ಕಲಸ್ತಿದ್ರು. ಫೇಲ್ ಆಗೂದು, ಯಾರರೆ ಬಯ್ಯೂದು, ಇದ್ಯಾವುದೂ ಬದುಕಿಗಿಂತ ದೊಡ್ಡದು ಅನಸ್ತಿರಲಿಲ್ಲ.

ಒಂದೀಟು ಕಣ್ಣಾನ ನೀರು ಕಪಾಳಕ ಇಳದ್ರ, ಮನ್ಯಾಗ ಬಯ್ಯೋರು. ಸಾಲ್ಯಾಗ ಏನ ಕಲಸ್ತಾರವ್ವ? ಬರೇ ಅಳಬುರಕಿ ಆಗ್ತಿ ನೋಡು.. ಛಂದಗೆ, ಛೊಲೋತ್ನಗೆ ಇರಾಕ ಆಗೂದಿಲ್ಲ.. ಅಂತ!

ಈಗಿನ ಸಾಲ್ಯಾಗ ಛಂದಗೆ ಇರೂದಂದ್ರ ಸಮವಸ್ತ್ರ ಧರಿಸೂದು ಕಲಸ್ತಾರ. ಶಿಸ್ತಿನಿಂದ ಇರೂದನ್ನಲ್ಲ. ಛೊಲೋತ್ನಗೆ ಇರೂದಂದ್ರ ಒಣ ಪ್ರತಿಷ್ಠೆ ಕಲೀತಾವ.. ಛೊಲೊ ಬ್ಯಾಗು ಬೇಕು. ಬ್ರ್ಯಾಂಡೆಡ್ ಶೂಸ್ ಬೇಕು. ಛೊಲೊ ಚೀಲ ಬೇಕು.. ಇಂಥಾ ಛೊಲೊ ಇರೂ ಮಕ್ಳು, ಛೊಲೊತ್ನಗೆ ಬದುಕೂದು ಯಾಕ ಕಲ್ಯಾಂಗಿಲ್ಲ..?

ಮನಸು ಸಣ್ಣದಾಗ್ತೈತಿ. ಟೀಚರ್ ಬೈತಾರಂತ ಹೋಮ್‌ವರ್ಕ್ ಮಾಡೂ ಹುಡುಗ್ರಿಗೆ ನೋಡದಾಗ. ನಾವು ಹೋಮ್ ವರ್ಕ್ ಮಾಡ್ತಿದ್ದುದು ಗುಡ್ ಪಡೀಬೇಕು ಅನ್ನೊ ಛಲದಿಂದ. ಇವರ ಯಾಕ ಹಿಂಗ ಆತಂಕದೊಳಗ ಬದಕ್ತಾರ?

ನಮ್ಮ ಟೀಚರ್ ನಮಗ ಕಿವಿ ಹಿಂಡ್ತಿದ್ರು. ಕೋಳಿ ಕುಂದ್ರಾಕ ಹೇಳ್ತಿದ್ರು. ಕೋಲಿಲೆ ಬಡೀತಿದ್ರು. ಛಡಿ ಛಂ ಛಂ ವಿದ್ಯಾ ಘಂ ಘಂ ಅಂತಿದ್ರು. ಮನ್ಯಾಗ ಅಪ್ಪ ಅಮ್ಮ ಸೈತ, ಸಾಲಿಗೆ ಬಂದು ಹೇಳ್ತೀನಿ ಅಂತ ಹೆದರಸ್ತಿದ್ರು.

ಈಗಿನ ಮಾಸ್ತರ್ ಏನರೆ ಕೈ ಮಾಡಿದ್ರ.. ಸಾಲಿ ಮುಂದ ಸ್ಟ್ರೈಕ್ ಕೂಡ್ತಾರ. ಗದರಿದರೂ ಸಾಕು, ಸಾಲಿಗೆ ಬಂದು ಕೇಳ್ತೀವಿ ಅಂತಾರ.

ಹಂಗಿದ್ದಾಗ ಸಾಲಿ ಕಲೀಬೇಕಾದೋರು ಯಾರು? ನಾವ.. ನಮ್ಮ ಮಕ್ಳಾ? ಅಥವಾ ಬದುಕೂದನ್ನು ಹೇಳಿಕೊಡೂದು ಹೆಂಗಂತ ಸಾಲಿ ಮಾಸ್ತರ್ ಕಲೀಬೇಕಾಗೇದೇನು?

ನಾವು ಮಕ್ಕಳಿಗೆ ಯಶಸ್ವಿಯಾಗೂದು ಅಂದ್ರ ಏನು ಅಂತ ಹೇಳಿಕೊಡಬೇಕಾಗೇದ. ಹೆಂಗ ಅನ್ನೂದು ಅವರೇ ಹುಡುಕಿಕೊಳ್ಳಬೇಕು. ಫಸ್ಟ್ ಬರೂದು ಯಶಸ್ಸು ಅಲ್ಲ, ಲಾಸ್ಟ್ ಬಂದರೂ ಮುಂದಿನ ಸಲೆ, ಮುನ್ನಡೀತೀನಿ ಅನ್ನೊ ಧೈರ್ಯ ಹೇಳಿಕೊಡಬೇಕಾಗೇದ. ಅಂಕಗಳಿಗಿಂತ ಮೌಲ್ಯಗಳನ್ನು ಗಳಿಸಿಕೊಳ್ಳೂದು ಕಲಿಸಬೇಕಾಗೇದ.

ಬಹುಶಃ ಶಿಕ್ಷಣ ಅಂದ್ರ ಸಾಕ್ಷರರಾಗೂದಲ್ಲ, ಶಿಕ್ಷಣ ಅಂದ್ರ ಶಿಕ್ಷಿತರಾಗೂದು. ನಮ್ಮ ಸಾಲಿಯೊಳಗ, ಸರ್ಕಸ್‌ನಾಗ ಹುಲಿಗೆ ಕಸರತ್ತು ಮಾಡಸೂದು ಕಲಸೂಹಂಗೆ ಪಾಠ ಕಲಸಾಕತ್ತಾರ. ಆದ್ರ ಅದು ತರಬೇತಿ ಪಡೆದ ಹುಲಿ ಆಗ್ತದೇ ಹೊರತು ಶಿಕ್ಷಿತ ಹುಲಿ ಅನ್ನೂದಿಲ್ಲ, ಹೌದಲ್ಲೊ..

ಶಿಕ್ಷಣ ಪದ್ಧತಿ ಬದಲಾಗಬೇಕಾಗೇದ ಅಥವಾ ಶಿಕ್ಷಕನ ಮನಃಸ್ಥಿತಿ ಬದಲಾಗಬೇಕಾಗೇದೋ ಅನ್ನೂದು ಇವೊತ್ತಿನ ಪ್ರಶ್ನೆಯಾಗಿಯೇ ಉಳದದ. ಶಿಕ್ಷಣ ನಮ್ಮ ಮಕ್ಕಳನ್ನು ಬೆಳಸೂ ಬದಲು ಸೀಮಿತಗೊಳಸಾಕತ್ತದ ಅನ್ನೊ ಆತಂಕ ಇದ್ರ, ಅದಕ್ಕ ಶಿಕ್ಷಣ ಅನ್ನೂದಾದರೂ ಹೆಂಗ? ಕಲಿಸುವಾಗ ಹೇರುವ ಒತ್ತಡ, ಕಲಿಯುವಲ್ಲಿ ಆಸಕ್ತಿ ಹುಟಿಸದಿದ್ದರ ಶಿಕ್ಷಕನಾದರೂ ಹೆಂಗ ಆಗ್ತಾನ? ಪ್ರಶ್ನೆ ಭಾಳ ಅದಾವ.. ಜೊತಿಗೆ ಡೋಂಟ್ ಟಾಕ್ ಅನ್ನೊ ವ್ಯವಸ್ಥೆನೂ.. ಏನು ಮಾಡೂದು?

✵

# ಎಚ್.ಆರ್. ಮಾಸ್ತರ್ ಕಲಿಸಿದ ಜೀವನ ಪಾಠ

**- ನವರತ್ನ ಲಕ್ಷ್ಮಣ್**

**ಆ**ಚಾರ್ಯ ಪಾಠಶಾಲೆಯಲ್ಲಿ ನಾನೂ ಮತ್ತು ನನ್ನ ತಮ್ಮ ರಾಮ್ ಓದುತ್ತಿದ್ದಾಗ ನಮಗೆ ಸಿಕ್ಕಿದ ಡಬಲ್ ಪ್ರಮೋಷನ್ ತಪ್ಪಿಗೆ 11ನೇ ವರ್ಷದಲ್ಲೇ ಗಂಡಾಂತರಕಾರಿ ಎಂದೇ ಭಾವಿಸಲಾಗಿದ್ದ ಎಲ್.ಎಸ್. ಪರೀಕ್ಷೆಗೆ ನಾವು ಕೂರಬೇಕಾಗಿ ಬಂದಿತು. ನಮ್ಮ ಅಪ್ಪ ಅಮ್ಮ ಇಬ್ಬರೂ ನೌಕರಿ ಮಾಡುತ್ತಿದುದರಿಂದ ನಮಗೆ ಮನೆಯಲ್ಲಿ ಪಾಠ ಹೇಳಿಕೊಡಲು ಅವರಿಗೆ ಆಗುತ್ತಿರಲಿಲ್ಲ. ಆದುದರಿಂದ ಅವರು ನಮಗೆ ಮನೆಪಾಠಕ್ಕೆಂದು ಒಬ್ಬರನ್ನು ಗೊತ್ತು ಮಾಡಿದ್ದರು. ಅವರೇ ಎಚ್. ರಾಮರಾವ್ ಸರ್ ಅಥವಾ ಎಚ್.ಆರ್.

ಎಚ್.ಆರ್. ಮಹಾ ಶಿಸ್ತಿನ ಮನುಷ್ಯ ಆದರೆ ಹೃದಯವಂತ. ತಮ್ಮ ಎಲ್ಲ ವಿದ್ಯಾರ್ಥಿಗಳ ಎಲ್ಲ ಪ್ರತಿಭೆಯನ್ನೂ ಹೊರತರಲು ಬದ್ಧರಾಗಿದ್ದ ಶಿಕ್ಷಕ. ನಮಗೆ ಎಲ್ಲ ವಿಷಯಗಳನ್ನೂ ಬೋಧಿಸಲು ಅವರನ್ನ ನೇಮಕ ಮಾಡಲಾಗಿತ್ತು. ಸಂಬಳ – ಬರೇ 20 ರೂಪಾಯಿ.

ಪ್ರತಿ ದಿನ ಶಾಲೆ ಬಿಟ್ಟ ನಂತರ ನಾವು ಅವರ ಮನೆಗೆ ಹೋಗಿ ಪಾಠ ಹೇಳಿಸಿಕೊಳ್ಳಬೇಕಾಗಿತ್ತು. ಅಂದರೆ ಸಂಜೆ ನಾವು ಇತರ ಹುಡುಗರಂತೆ ಆಟಕ್ಕೆ ಹೋಗುವಂತಿರಲಿಲ್ಲ. ಇದೇ ನಮ್ಮ ವ್ಯಥೆ ಆಗಿತ್ತು. ನಮ್ಮನ್ನು ಎಕ್ಸಾಮ್ ಫಿಟ್ ಮಾಡಲು ಎಚ್.ಆರ್. ನಿರ್ಧರಿಸಿದ್ದರೆ ಆಟಗಳಿಂದ ವಂಚಿತಗೊಂಡಿದ್ದ ನಾವು ಅವರ ಮೇಲೆ ಸೇಡು ತೀರಿಸಿಕೊಳ್ಳಲು ತುಂಟ ಮಾರ್ಗೋಪಾಯಗಳನ್ನು ಹುಡುಕುತ್ತಿದ್ದವು.

ಒಂದು ಸಂಜೆ. ನಮಗೆ ಸಾಕಷ್ಟು ಹೋಂ ವರ್ಕ್ ಕೊಟ್ಟು ಕೂಡಿಸಿದ ಮಾಸ್ತರ್ ಏನೋ ಕೊಂಡು ತರಲು ಮಾರುಕಟ್ಟೆಗೆ ಹೋದರು. ಸೇಡು ತೀರಿಸಿಕೊಳ್ಳಲು ನಮಗೊಂದು ಸದಾವಕಾಶ ಒದಗಿ ಬಂದಿತ್ತು. ತಂತಿಯ ಮೇಲೆ ಒಣಗಿ ಹಾಕಿದ್ದ ಅವರ ಪಂಚೆಯನ್ನು ಎಳೆದುಕೊಂಡು ಬ್ಲೇಡಿನಿಂದ ಹರಿದು ಹಾಕಿದೆವು.

ಪರೀಕ್ಷೆ ಮುಗಿಯಿತು. ನಾವಿಬ್ಬರೂ ಪ್ರಥಮ ದರ್ಜೆಯಲ್ಲಿ ಪಾಸ್ ಮಾಡಿದ್ದೆವು. ಆದರೆ ಮಾಸ್ತರ್ ಬಗ್ಗೆ ನಮ್ಮಿಬ್ಬರಲ್ಲಿ ಹೃದಯ ಪರಿವರ್ತನೆ ಆಗಿ ನಮ್ಮನ್ನು ಪಶ್ಚಾತ್ತಾಪ ಕಾಡಲಾರಂಭಿಸಿತು. ಅಷ್ಟೆಲ್ಲ ಶ್ರದ್ಧೆಯಿಂದ ನಮಗೆ ಪಾಠ ಹೇಳಿಕೊಟ್ಟು ಪರೀಕ್ಷೆಯಲ್ಲಿ ಜಯಭೇರಿ ಹೊಡೆಯುವಂತೆ ಮಾಡಿದ ಅವರೊಡನೆ ಅಂದು ನಾವು ನಡೆದುಕೊಂಡ ಬಗ್ಗೆ ನಾಚಿಕೆ ಪಡತೊಡಗಿದೆವು. ತಡೆಯಲಾರದೆ ನಮ್ಮ ಪಂಚೆ ಪ್ರಕರಣವನ್ನು ನಾವು ನಮ್ಮ ತಾಯಿಗೆ ವಿವರಿಸಿದಾಗ ಅವರು ನಮ್ಮನ್ನು ತರಾಟೆಗೆ ತೆಗೆದುಕೊಂಡರು. ತಕ್ಷಣ ಅವರು

ಒಂದು ಜತೆ ಪಂಚೆ ಕೊಂಡು ತಂದು ನಮಗೆ ಕೊಟ್ಟು ಇದನ್ನು ಮಾಸ್ತರಿಗೆ ನೀಡಿ ಅವರ ಕಾಲಿಗೆ ಬಿದ್ದು ಕ್ಷಮಾಪಣೆ ಕೇಳಿಕೊಳ್ಳಿ ಎಂದು ತಾಕೀತು ಮಾಡಿದರು.

ಪಂಚೆಯೊಡನೆ ಮಾಸ್ತರ್ ಅವರನ್ನು ನೋಡಲು ಹೋದಾಗ ನಮ್ಮ ಕೈಕಾಲು ನಡಗುತ್ತಿತ್ತು. ಅದನ್ನು ಸ್ವೀಕರಿಸಿದ ಮಾಸ್ತರ್ ತುಂಟತನದಿಂದ ನಮ್ಮತ್ತ ನೋಡಿ ''ಅರೆ! ಎರಡು ಪಂಚೆ ಯಾಕೆ ತಂದಿರಿ. ಅಂದು ನೀವು ಹರಿದಿದ್ದು ಒಂದೇ ತಾನೆ?'' ಎಂದಾಗ ನಮಗೆ ಭಾರಿ ಶಾಕ್! ಅಂದರೆ ಮಾಸ್ತರ್‌ಗೆ ವಿಷಯ ಗೊತ್ತಿತ್ತು. ಆದರೆ ನಮ್ಮನ್ನು ಅದಕ್ಕೆ ಶಿಕ್ಷಿಸುವುದಿರಲಿ ನಮ್ಮ ಅಪ್ಪ ಅಮ್ಮನಿಗೂ ದೂರು ಕೊಟ್ಟಿರಲಿಲ್ಲ. ಅವರ ಮುಂದೆ ನಾವು ಕುಬ್ಜರಾಗಿ ಕಂಡೆವು. 'ನಮ್ಮ ಮೇಲೆ ಏಕೆ ಕ್ರಮ ಕೈಗೊಳ್ಳಲಿಲ್ಲ ಸರ್?' ಎಂದು ನಾವು ಅಳುತ್ತಾ ಕೇಳಿದಾಗ ಅವರು ನಮ್ಮನ್ನು ತಬ್ಬಿಕೊಂಡು 'ನಾನು ನಿಮ್ಮ ಸಂಜೆಯನ್ನು ಹಾಳು ಮಾಡಿದೆ. ನೀವು ನನ್ನ ಒಂದು ಪಂಚೆಯನ್ನು ಹಾಳು ಮಾಡಿದಿರಿ. ಈಗ ನನ್ನ ಬಳಿ ಎರಡು ಪಂಚೆ ಇದೆ. ಅಳಬೇಡಿ ಹೋಗಿ ಆಟವಾಡಿಕೊಳ್ಳಿ' ಎಂದು ಕಳಿಸಿದರು.

ಅದು ನಮಗೆ ಒಂದು ಜೀವನ ಪಾಠವನ್ನೇ ಕಲಿಸಿತು.

*(ಡೆಕ್ಕನ್ ಹೆರಾಲ್ಡ್‌ನಲ್ಲಿ ಪ್ರಕಟಗೊಂಡ ಒಂದು ಮಿಡಲ್ ಕನ್ನಡಕ್ಕೆ: ಆನಂದ)*

## ಲೈಟಿಲ್ಲದ ಸೈಕಲ್

ಒಮ್ಮೆ ಎ.ಎನ್. ಮೂರ್ತಿರಾಯರು ಸೈಕಲ್ ಮೇಲೆ ಬರುತ್ತಿದ್ದಾಗ ಹಠಾತ್ತನೆ ಒಬ್ಬ ಟ್ರಾಫಿಕ್ ಪೋಲೀಸರು ಅವರನ್ನಿಳಿಸಿ ಎಲ್ಲಿಂದ ಬರ್ತಿದೀರ ಅಂತ ಕೇಳಿದ. ಕಾಲೇಜಿನಿಂದ ಅಂದರು, ಆಗ ಅವರು ನೀವು ಲೆಕ್ಚರರ್ರೋ ಇಲ್ಲಾ ಸ್ಟೂಡೆಂಟೋ ಅಂತ ಕೇಳಿದರು. ಮೂರ್ತಿರಾಯರು ಲೆಕ್ಚರರು ಅಂದ ಮೇಲೆ ನೀವೇ ಪಾಠ ಹೇಳೋರಾಗಿ ಕತ್ತಲಲ್ಲಿ ಸೈಕಲಲ್ಲಿ ಲೈಟಿಲ್ಲದೆ ಹೋಗೋದು ಸರಿಯೇ ಅಂತ ಒಂದು ದೊಡ್ಡ ಲೆಕ್ಚರನ್ನೇ ಕೊಟ್ಟರು. ಆಗ ಮೂರ್ತಿರಾಯರು ಲೆಕ್ಚರರು ನಾನಲ್ಲ ನೀವು ಅಂದರು. ಹೆಸರು, ವಿಳಾಸ ತಗೊಂಡು ಸರಿ ಹೋಗಿ ಅಂದರು. ಮೂರ್ತಿರಾಯರು ಮತ್ತೆ ಸೈಕಲ್ ಏರಿದಾಗ ಅವರು ಏನ್ ಸ್ವಾಮಿ ನಾನು ನಿಮ್ಮನ್ನು ಇಳಿಸಿದ್ದು ಸೈಕಲ್‌ಗೆ ಲ್ಯಾಂಪ್ ಇಲ್ಲ ಅಂತ. ಈಗ ಮತ್ತೆ ನನ್ನೆದುರಿಗೇ ಲ್ಯಾಂಪಿಲ್ಲದ ಸೈಕಲ್ ಹತ್ತುತ್ತಿದ್ದೀರಲ್ಲ ಅಂದಾಗ ಮೂರ್ತಿರಾಯರು ನಕ್ಕು ಸೈಕಲ್ ತಳ್ಳಿಕೊಂಡು ಹೊರಟರು.

# ತುಂತುರುತುಂತುರುತುಂತುರುತುಂತುರುತುಂತುರುತುಂತುರುತುಂತುರು


– ದಂನಅ

- ಮಕ್ಕಳ ಮೇಲೆ ಶಿಕ್ಷಕರು ಕೈ ಮಾಡುತ್ತಿರುವ ಬಗ್ಗೆ ವರದಿಗಳನ್ನು ಓದಿದಾಗ 'ಗುರು ದೇವೋ ಭಯಃ' ಎಂದು ಹೇಳಬೇಕೆನಿಸುತ್ತದೆ. ಅಲ್ಲವೆ? ಆದರೆ ಅದು ಬರೇ ಪ್ರಾಸಬದ್ಧ, ವ್ಯಾಕರಣಬದ್ಧವಲ್ಲ ಎಂದರೆ ಏನು ಹೇಳುವುದು?
- ನಂಬಿಕೆ ಎನ್ನುವುದು ಎರೇಸರ್ ಇದ್ದಂತೆ. ತಪ್ಪುಗಳಾದಂತೆ ಅದು ಸಣ್ಣದಾಗುತ್ತಾ ಹೋಗುತ್ತದೆ.
- ಇಂದಿನ ಯುವಕರ ಗುರಿಗಳು – ನೌಕ್ರಿ ಮತ್ತು ಚೋಕ್ರಿ. ಹೌದೆ?
- *Our Olympic medal tally is as measly as our PM's annual word quota.*
- ಮೈ ಮುಚ್ಚಿದ್ದಕ್ಕೆ ಮುಸ್ಲಿಂ ಮಹಿಳೆಯರನ್ನು ಟೀಕಿಸಲಾಗುತ್ತಿದೆ. ಮೈ ತೋರಿಸಿದ್ದಕ್ಕೆ ಕ್ರಿಶ್ಚಿಯನ್ ಮಹಿಳೆಯರನ್ನು ಟೀಕಿಸಲಾಗುತ್ತಿದೆ. ಇವರನ್ನು ಅನುಸರಿಸಿದ್ದಕ್ಕಾಗಿ ಹಿಂದೂ ಮಹಿಳೆಯರನ್ನು ಟೀಕಿಸಲಾಗುತ್ತಿದೆ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಊಟ ಮಾಡುವಾಗ ನನ್ನ ಮುಂದಿರುವ ಆಯ್ಕೆ ಎರಡು – ಬೇಕಿದ್ದರೆ ತಿನ್ನಬಹುದು, ಇಲ್ಲವಾದರೆ ಬಿಡಬಹುದು.
- ನೀವು ಏನು ಬೇಕಾದರೂ ಮಾಡಬಹುದೇನೋ ಆದರೆ ಎಲ್ಲವೂ ಅಲ್ಲ.
- 'ಏಕ್ ಥಾ ಟೈಗರ್' ಚಿತ್ರದಂತೆ 'ಏಕ್ ಥಾ ಕಪೂರ್' ಎಂಬ ಚಿತ್ರ/ಸೀರಿಯಲ್ ಬರಬಹುದೆ?
- *It was 'Bangalored' then. And now it is 'Mangalored'. When will it be 'Mysored'?*
- ನಿನ್ನೆ ಹೇಳಿಕೊಟ್ಟಿದ್ದನ್ನೇ ಮಕ್ಕಳಿಗೆ ಇಂದೂ ಹೇಳಿಕೊಟ್ಟರೆ ಅವರ ನಾಳೆಯನ್ನು ಹಾಳು ಮಾಡಿದಂತಾಗುತ್ತದೆ.
- ಈ *Calmsutra*ವನ್ನು ವಾತ್ಸ್ಯಾಯನ ಖಂಡಿತ ಬರೆದಿಲ್ಲ.
- ಯಾರೂ ಸರಿ ಇಲ್ಲ, ಯಾರೂ ತಪ್ಪಿಲ್ಲ, ನಾವು ವಿಭಿನ್ನ ಅಷ್ಟೆ.
- ನಿಮ್ಮ ಸಮಸ್ಯೆಗೆ ಉತ್ತರ ಏನೆಂದರೆ ಆ ಉತ್ತರ ಹೊಂದಿರುವವನನ್ನು ಹುಡುಕುವುದು.
- ಸತ್ಯಕ್ಕೆ ಪರ್ಯಾಯವಾಗಿ ಸುಳ್ಳನ್ನು ಹೊರತುಪಡಿಸಿ ಮತ್ತೊಂದನ್ನು ಈ ತನಕ ಯಾರೂ ಶೋಧಿಸಿಲ್ಲ.
- *The real art of conversation is not only to say the right thing at the right time, but also to leave unsaid the wrong thing at the tempting moment.*
- ಹಣವನ್ನು ಒಂದು ಕಾಗದದ ಚೂರು ಎಂದು ಹೇಳಬಹುದು. ಹಾಗೆಂದು ಅದನ್ನು ಯಾರಾದರೂ ಕ.ಬು.ಗೆ ಹಾಕಿದ ನಿದರ್ಶನವಿದೆಯೆ?

❋




Since 1998
**Whisper Hearing Aids**
Pvt. Ltd.
1030/13, 25 main, 39 cross,
4th 'T' block, Jayanagara, Bengaluru

**SIEMENS**
Authorised Hearing Care Centre

Avail **FREE** supply of batteries for a year on purchase of hearing aids for this week.
10am - 1:30pm, 5pm - 8pm
Appointment : 26640571, 9741765454


**ಕಿವಿ - ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**
**ವಾಕ್ - ಶ್ರವಣದೋಷ ತಜ್ಞ, ವಿಸ್ಪರ್ ವಾಕ್ - ಶ್ರವಣ ಕೇಂದ್ರ**

ಹುರುಳಿ ಕಟ್ಟು...

# ಬದುಕು ಕಲಿಸಿದ ಪಾಠ...

**- ಎಚ್. ಗೋಪಾಲಕೃಷ್ಣ**

**ನೆ**ನಪಿದೆಯಾ – ಕತ್ತೆ ಮೇಲೆ ಬಟ್ಟೆಯ ಹೊರೆ ಹೊರೆಸಿ ಮಡಿ ಮಾಡಲು ಕೆರೆಗೆ ಒಯ್ಯುತ್ತಿದ್ದ ದೋಬಿಯ ನೆನಪು?

ನಮ್ಮಲ್ಲಿ ಒಬ್ಬ ದೋಬಿ ಇದಾನೆ. ಆಗಲೇ ವಯಸ್ಸು ಹತ್ತಿರ ಹತ್ತಿರ ಎಪ್ಪತ್ತಕ್ಕೆ ಬಂದಿದೆ. ಈಗಲೂ ಬಟ್ಟೆ ಶುಚಿ ಮಾಡುವ ಕೆಲಸವನ್ನೇ ಮಾಡಿಕೊಂಡಿದ್ದಾನೆ. ಸುಮಾರು ವರ್ಷಗಳಿಂದ ಹಿಡಿದಿರುವ ಉದ್ಯೋಗ ಇದು, ಇದನ್ನು ಬಿಟ್ಟು ಬೇರೆ ಉದ್ಯೋಗ ಹಿಡಿಯಲು ತಿಳಿಯದು, ಪಾಪ ಅದರಿಂದ ಇದರಲ್ಲೇ ಮುಂದುವರಿದಿದ್ದಾನೆ. ಇಬ್ಬರೋ ಮೂರು ಜನವೋ ಮಕ್ಕಳು, ಅವರಲ್ಲಿ ಒಬ್ಬ ಮಾತ್ರ ಈತನ ಹತ್ತಿರ ಇರೋದು. ಮಿಕ್ಕವು ಅಪ್ಪ ಅಮ್ಮನಿಂದ ದೂರ ಮನೆ ಮಾಡಿಕೊಂಡು ಅವುಗಳ ಹೊಟ್ಟೆ ಪಾಡು ನೋಡಿಕೊಳ್ಳುತ್ತಿವೆ. ಇವನಿಗೆ ಆ ಕಾಲದಲ್ಲಿ ಕತ್ತೆ ಮೇಲೆ ಹೊರೆ ಇರಿಸಿ ಕೆರೆಗೆ ಬಟ್ಟೆಗಳನ್ನು ಒಯ್ಯುತ್ತಿದ್ದ ನೆನಪೂ ಇದೆ. ಈಗ ಕತ್ತೆ ಅವನ ಹತ್ತಿರ ಇಲ್ಲ, ಅದರಿಂದ ಒಂದು ಹಳೇ ಸೈಕಲ್ಲು ಇಟ್ಟಿದ್ದಾನೆ. ಅದರ ಕ್ಯಾರಿಯರಿನ ಮೇಲೆ ಬಟ್ಟೆ ಗಂಟನ್ನು ಸಮನಾಗಿ ಅರ್ಧರ್ಧ ವಿಂಗಡಿಸಿ ಕತ್ತೆ ಮೇಲೆ ಹೇರಿದ ಹಾಗೇ ಹೇರಿಕೊಂಡು ಒಯ್ಯುತ್ತಾನೆ.

ಮೊದಲಿನ ಹಾಗೆ ಕೆರೆ ಕುಂಟೆಗಳು ಈಗ ಇಲ್ಲವಾದ್ದರಿಂದ ನೀರು ಕೊಂಡುಕೊಳ್ಳುತ್ತಾನೆ, ಕೆಲಸಕ್ಕೆ ಎರಡೋ ಮೂರೋ ಆಳುಗಳನ್ನ ಇಟ್ಟುಕೊಂಡಿದ್ದಾನೆ. ಮಾಮೂಲಾಗಿ ನಗರ ಪ್ರದೇಶವಾದರೆ ಡ್ರೈ ಕ್ಲೀನಿಂಗ್ ಅಂಗಡಿಗಳು ಇರುತ್ವೆ. ಅಲ್ಲಿ ಬಟ್ಟೆ ಮಡಿಮಾಡಲು (ಅಂದರೆ ಡ್ರೈ ಕ್ಲೀನಿಂಗ್‌ಗೆ) ಹಾಕುತ್ತಾರೆ. ನಮ್ಮ ಏರಿಯಾದಲ್ಲಿ – ಇನ್ನೂ ನಾಗರಿಕತೆ ಅಷ್ಟು ಬೆಳೆದಿಲ್ಲವಾದ್ದರಿಂದ – ಜನ ಇನ್ನೂ ಇವನ ಮೇಲೇನೇ ಡಿಪೆಂಡ್ ಆಗಿದ್ದೀವಿ. ಅದರ ಜತೆಗೆ ನಮ್ಮ ಏರಿಯಾದ ಹಾಸ್ಟೆಲ್ಲುಗಳೂ ಇವನನ್ನೇ ನೆಚ್ಚಿವೆ. ಹಾಸ್ಟೆಲ್ಲುಗಳು ಅಂದಮೇಲೆ ಹಲವಾರು ಕಡೆಗಳಿಂದ ಬಂದ ಜನ ಇದ್ದೇ ಇರುತ್ತಾರೆ ಮತ್ತು ಇವನಿಗೆ ಅವರಿಂದಲೇ ನಮಗಿಂತಲೂ ಹೆಚ್ಚು ಆದಾಯ. ಆಗಾಗ ಇವನು ಬಂದು ನನ್ನ ಬಳಿ ಅವನ ಕಷ್ಟ ಸುಖ ಹೇಳಿಕೊಳ್ಳುವುದುಂಟು.

ಮೊನ್ನೆ ಬಂದವನು ಸಾ.. ಕೊಂಚ ದುಡ್ಡು ಬೇಕಿತ್ತು... ಅಂತ ಕೈ ಹೊಸೆಯುತ್ತಾ ನಿಂತ.

ಯಾಕೆ ಅಕ್ಕಪ್ಪಾ ವ್ಯಾಪಾರ ಸರಿ ಇಲ್ಲವೇ? ಅಂದೆ.

ವ್ಯಾಪಾರ ಇದೆ ಸಾ. ಆದರೆ ಮೊನ್ನೆ ಮನೇಲಿ ಒಂದು ಕಳ್ಳತನ ಆಗೋಯ್ತು... ಅಂದ.

ಯಾರ ಮನೇಲೀ...?

ಇನ್ಯಾರ ಮನೆ ಸಾ... ನಮ್ಮನೇಲೇ...

ಇವನ ಮನೇಲಿ ಕಳ್ಳತನ ಆಗಬೇಕು ಅಂದರೆ ಅದೇನು ಇಟ್ಟಿದ್ದ ಮನೇಲಿ ಅಂತ ಆಶ್ಚರ್ಯ ಆಯಿತು..

ಏನು ದುಡ್ಡೇನಾದರೂ ಇಟ್ಟಿದ್ದೆಯಾ?

ದುಡ್ಡೆಲ್ಲಿ ಬರಬೇಕು ಸಾ... ನಡುಮನೇಲಿ ಇಟ್ಟಿದ್ದ ಇಸ್ತ್ರಿ ಪೆಟ್ಟಿಗೆ ಯಾರೋ ಕದ್ದುಕೊಂಡು ಹೋಗಿಬಿಟ್ಟರು... ಬಟ್ಟೆ ಎಲ್ಲಾ ಒಗೆದು ರಾಶಿ ಹಾಕ್ಕೊಂಡಿದ್ದೀವಿ, ಇಸ್ತ್ರಿ ಪೆಟ್ಟಿಗೆ ಇಲ್ಲದೆ ಕೆಲಸ ನಿಂತದೆ... ಅಂದ.

ಇಸ್ತ್ರಿ ಪೆಟ್ಟಿಗೆ ಯಾರು ಕದೀತಾರಯ್ಯಾ? ಯಾರೋ ನಿನ್ನ ವೃತ್ತಿ ಅವರೇ ತಗೊಂಡು ಹೋಗಿದಾರಾ ನೋಡು...

ಇಲ್ಲಾ ಸ್ವಾಮಿ ಹುಡುಕ್ದೆ. ಸಿಕ್ಲಿಲ್ರ. ಕಂಪ್ಲೈಂಟೂ ಕೊಟ್ಟಿದೀನಿ. ನಮ್ಮ ಏರಿಯಾದಲ್ಲೇ ಎಂಟು ಇಸ್ತ್ರಿ ಪೆಟ್ಟಿಗೆ ಕಳ್ಳತನ ಆಗದಂತೆ – ಅಂತ ಪೋಲೀಸ್ನೋರು ಹೇಳಿದ್ರು...

ಮೂರು ಸಾವಿರ ಕೊಡಿ, ಅಷ್ಟಾಗ್ತದೆ ಪೆಟ್ಟಿಗೇಗೆ.. ಅಂದ. ಅಷ್ಟೊಂದಾ ಅಂದೆ.

ಹೌದು ಸಾ.. ಅದೂ ಗಿರವಿ ಅಂಗಡೀಲಿ... ಹೊಸದಾದರೆ ಇನ್ನೂ ಜ್ಯಾಸ್ತಿ...

ಪಾಪ ಬಡವ, ಯಾರನ್ನ ಕೇಳ್ತಾನೆ ಅನಿಸಿತು. ಅಷ್ಟೊಂದಿಲ್ಲ ಅಂತ ಹೇಳಿ ಸ್ವಲ್ಪ ಕೊಟ್ಟೆ ನಮಸ್ಕಾರ ಹೇಳಿ ಹೊರಟ.

ಮೊದಲಿಂದ ಸಾಲ ಕೊಟ್ಟಾಗಲೆಲ್ಲಾ ಕಾಸು ವಾಪಸ್ಸು ಕೊಡೋಕ್ಕೆ ಬದಲು ಇಸ್ತ್ರಿ ಮಾಡಿಕೊಟ್ಟು ಸಾಲ ಚುಕ್ತಾ ಮಾಡಿಕೊಂಡು ಬಂದಿದ್ದ – ಈಗಲೂ ಹಾಗೇ ಮಾಡಿದರಾಯ್ತು ಅಂತ ಸುಮ್ಮನಾದೆ. ಎರಡು ವಾರ ಆದಮೇಲೆ ಬಂದ. ಹಾಸ್ಟೆಲ್ಲಿಗೆ ಯಾರೋ ದೊಡ್ಡವರು ಬಂದವ್ರೆ ಸಾ... ಮೊನ್ನೆ ಇಸ್ತ್ರಿ ಮಾಡಿಸಿಕೊಂಡ್ರು ಎಂಟು ಬಟ್ಟೆಗೆ ಕಾಸು ಮೂವತ್ತೆರಡಾಯ್ತು. ನಾಕು ರೂಪಾಯಾ ಒಂದು ಬಟ್ಟೆಗೆ? ಅದು ಜ್ಯಾಸ್ತಿ ಒಂದು ರೂಪಾಯಿ ಕೊಡ್ತೀನಿ, ನಮ್ಮೂರಲ್ಲಿ ಅಷ್ಟೇ ಕೊಡೋದೂ ಅಂತಾನೆ... ಏನು ಮಾಡಲಿ? ಅಂದ.

ಯಾವೋನು ಅವನು ಹಾಗೆ ಹೇಳಿದೋನು? ಸಾಮಿ ಇಲ್ಲಿ ರೇಟು ಇದೇನೆ ಕಮ್ಮಿ ಆಗಾಕಿಲ್ಲ ಅಂತ ಹೇಳು ಅಂತ ಐಡಿಯಾ ಕೊಟ್ಟೆ

ಎರಡು ದಿವಸದ ನಂತರ ಬಂದ. ಏನಾಯ್ತು.. ಅಂದೆ.

ಆಗಾಕಿಲ್ಲ ಅಂದ. ಆಗಾಕಿಲ್ಲ ಅಂದರೆ ಎಂಗೆ? ಒಂದು ರೂಪಾಯಿಗೆ ನಿಮ್ಮೂರಲ್ಲಿ ಮಾಡೋ ಹಂಗಿದ್ದರೆ ಅಲ್ಲೇ ಮಾಡಿಸ್ಕೊಳ್ಳಿ ಅಂದೆ.

ಪರವಾಗಿಲ್ಲ ಆಸಾಮಿ.. ಅಂದುಕೊಂಡೇ ಆಮೇಲೆ? ಅಂದೆ.

ಅಯ್ಯೋ ಎಲ್ಲರನ್ನೂ ಸೇರಿಸಿಬಿಟ್ಟ, ಅಲ್ಲಿರೋರೆಲ್ಲಾ ಒಂದಾಗಿ ಒಂದು ರೂಪಾಯಿ ಐರನ್ನಿಗೆ ಅಂತ ಕೂತವ್ರೆ...

ಅಯ್ಯೋ ಹಾಗಾಯ್ತಾ? ಈಗೇನ್ಮಾಡ್ತೀ...

ಪಾಪ ಕೆಲಸ ಇಲ್ಲದೇ ಹೊಟ್ಟೆಮೇಲೆ ಏಟು ಬೀಳಿಸಿಕೊಳ್ಳುತ್ತಾನಲ್ಲಾ ಅನಿಸಿತು...

ಏನಿಲ್ಲಾ ಸಾರ್ ಬಟ್ಟೆ ತಗೊಂಡು ಹೋಗಿ ಅಲ್ಲೇ ಮನೆ ತಾವ ಕೊಡ್ತಿದ್ದೆ, ರಾತ್ರಿ ಸರಿ ಹೊತ್ನಾಗೂ ಅವರು ಹೇಳಿದ ಹಾಗೆ ಕೇಳ್ತಿದ್ದೆ.

ಈಗ ನಂದೇ ಟೈಮ್ ಮಡಕ್ಕೋತ್ತೀನಿ. ಅಂಗಡಿಗೆ ಬಂದು ಬಟ್ಟೆ ಕೊಡಿ ಅನ್ನೋದು, ಅಂಗಡಿಯಿಂದಲೇ ಬಟ್ಟೆ ತಗೊಂಡ್ಹೋಗಿ ಅನ್ನೋದು, ಬೇರೆ ಅಂಗಡೀಲಿ ಅದೇನು ರೇಟು ಹಾಕ್ತಾರೋ ಅದೇ ರೇಟು ಕೊಡಿ ಅಂತೀನಿ...

ಬೇರೆ ಅಂಗಡಿ ರೇಟು ಅಂದರೆ ಅವರು ಅಲ್ಲೇ ಹೋಗ್ತಾರಲ್ಲಾ.... ಅಂದೆ...

ಹಾಗಿದ್ರೆ ಏನು ಮಾಡು ಅಂತೀರಾ?

ಏನಿಲ್ಲಾ ಪ್ರತಿಯೊಬ್ಬರ ಹತ್ತಿರವೂ ಹೋಗು. ಅವರಿಗೆ ಅಂಗಡೀಗಿಂತಲೂ ಕಡಿಮೆ ರೇಟಿಗೆ ಮಾಡ್ತಿರೋದೂ, ಅವರವರ ಟೈಮಿಗೆ ನೀನು ಸಿಕ್ತಾ ಇರೋದೂ ಅವರು ಕರೆದಾಗ ನೀನು ಅವರ ಹತ್ತಿರ ಹೊಗೋದೂ ಹೇಳು... ಈ ರೇಟು ಕೊಡಲೇ ಬೇಕು ಸ್ವಾಮಿ ನಾನೂ ಬಡವ, ನಾನು ಬದುಕೋದು ಬೇಡವಾ ಅಂತ ಕೇಳು.. ಅದೂ ಮೀರಿ ಅವರೆಲ್ಲಾ ಆಗಲ್ಲ ಅಂದರೆ ಹೇಗಿದ್ರೂ ನಿಮ್ಮ ಸಂಘ ಇದೆಯಲ್ಲಾ ಅವರಿಗೆ ಹೇಳಿ ಯಾರ ಬಟ್ಟೇನೂ ಮಡಿಗೆ, ಐರನ್ನಿಗೆ ತಗೊಳ್ಳೇ ಬೇಡಿ. ಸ್ಟ್ರೈಕು ಮಾಡಿಸಿಬಿಡು..... ಅಂತ ಹೊಸಾ ಐಡಿಯಾ ಕೊಟ್ಟೆ! ಹೇಳಿ ಕೇಳಿ ನಾನೂ ಕಾರ್ಖಾನೇಲಿ ಕೆಲಸ ಮಾಡಿದವನು ಅಲ್ಲವಾ? ಈ ಥರಹ ಐಡಿಯಾಗಳು ಚೆನ್ನಾಗೇ ಹೊಳೆಯುತ್ವೆ...

ಮತ್ತೆ ನಾಲ್ಕೈದು ವಾರ ಆದ ಮೇಲೆ ಬಂದ, ಗೆಲುವಾಗಿ ಕಾಣಿಸಿದ. ಸಾಲದ ಕೊಂಚ ಭಾಗ ಹಿಂದಕ್ಕೆ ನೀಡಿದ.

ಸಮಸ್ಯೆ ಪರಿಹಾರ ಆಯ್ತಾ ಅಂದೆ.

ಆಯ್ತು ಸಾ.. ಅಂತ ನಕ್ಕ.

ಯಾವ ರೀತಿ ಮಾಡಿಕೊಂಡೆ...

ನೀವು ಹೇಳಿದ ಹಾಗೆ ಮಾಡಲಿಲ್ಲ.. ಅಂದ.

ಮತ್ತೆ?

ಅವತ್ತು ಅವರವರ ರೂಮಿಗೆ ಹೋದೆ. ಎಲ್ಲಾರ ಬಟ್ಟೇನೂ ಇಸುಕೊಂಡೆ. ಸೀದಾ ಅಂಗಡೀಗೆ ಬಂದೆ. ತಿರಗ ಹಾಸ್ಟೆಲ್ಲಿನ ತಾವ ಹೋಗಲಿಲ್ಲ, ಅವರು ಫೋನು ಮಾಡಿದರೆ ನಮ್ಮಾಕೆಗೆ ನನಗೆ ಹುಷಾರಿಲ್ಲ ಅಂತ ಹೇಳು ಅಂದಿದ್ದೆ. ಯಾರಿಗೂ ಮಡಿ ಬಟ್ಟೆ ಇಲ್ಲದ ಹಂಗಾಯ್ತು. ಹುಡುಕ್ಕೊಂಡು ಅಂಗಡೀಗೆ ಬಂದ್ರು. ನೋಡ್ರಪ್ಪಾ ನನ್ನ ರೇಟು ಕೊಟ್ರೆ ಮಾಡ್ತೀನಿ ಇಲ್ಲ ಅಂದ್ರೆ ಇಲ್ಲ ಅಂದೆ. ಬೇರೆ ದಾರಿ ಇಲ್ಲದೆ ಒಪ್ಪಿಕೊಂಡವ್ರೆ.... ಅಂದ! ನನ್ನ ರೇಟಿಗೇ ಮಾಡಿಕೊಡ್ತಾ ಇದೀನಿ ಇವಾಗ... ಅಂದ.

ನೋಡಿದ್ಯಾ ನಾವೇನೋ ಬುದ್ಧಿವಂತರು ಅಂದರೆ ನೀನು ನಮಗೇ ಪಾಠ ಹೇಳಿಕೊಡ್ತೀ ಅಂದೆ...

ಅಯ್ಯೋ ಸಾ.. ನೀವೇ ಅಲ್ವರಾ ಉಪಾಯ ಕೊಟ್ಟೋರೂ... ಅನ್ನೋದೇ ಅವನು?

ನೀನು ಭಾರೀ ಹುಷಾರಪ್ಪಾ.. ಬದುಕೋದು ಕಲ್ತಿದ್ದೀ ಅಂದೆ!